ಸಂಪುಟ: 14 Volume | ಸಂಚಿಕೆ: 106 Issue | ಪುಟಗಳು 08 Pages | ಶುಕ್ರವಾರ 31 ಜುಲೈ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೆಂಗಳೂರು | ಹುಬ್ಬಳ್ಳಿ | ಬೀದರ ಆವೃತ್ತಿ: ಕಲ್ಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಾಗಲಕೋಟೆ, ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

**ಬೆಳಗು**

ಸತ್ಯಕ್ಕಾಗಿ ಯಾವುದನ್ನಾದರೂ ತ್ಯಾಗ ಮಾಡಿ. ಆದರೆ ಸತ್ಯವನ್ನು ಮಾತ್ರ ತ್ಯಾಗ ಮಾಡಬೇಡಿ.

–ಸ್ವಾಮಿ ವಿವೇಕಾನಂದ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಶ್ರೀ ಮಾಣಿಕರೆಡ್ಡಿ ಕೌಡಾಳೆ



ಬೆಂಗಳೂರಿನ ಬಸವೇಶ್ವರನಗರದಲ್ಲಿ ನೊಳಂಬ ಲಿಂಗಾಯತ ಸಂಘದ 2026 ಮತ್ತು2031 ನೇ ಸಾಲಿನ ಕಾರ್ಯಕಾರಿಣಿ ಸಮಿತಿಯ ಸದಸ್ಯರ ಚುನಾವಣೆ ನಡೆಯಲಿದ್ದು. ಈ ಚುನಾವಣೆಗೆ ನಿವೃತ್ತ ಶಿಕ್ಷಕರಾದ ಜಿ.ಬಸಪ್ಪ ಅವರು ಹಾಗೂ ಬೆಂಬಲಿಗರೊಂದಿಗೆ ಆಗಮಿಸಿ ಚುನಾವಣಾ ಅಧಿಕಾರಿಗಳಿಗೆ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ನಿವೃತ್ತ ಪ್ರಾಂಶುಪಾಲರಾದ ಚಂದ್ರಶೇಖರಯ್ಯ ಎಚ್ ಸಿ, ಅರಸೀಕೆರೆ ಬಿ ಎಡ್ ಕಾಲೇಜ್ ನಿವೃತ್ತ ಅಧೀಕ್ಷಕ ರಾದ ಚಂದ್ರಶೇಖರ್ ಕೆ ಸಿ, ಕೋಡಿಹಳ್ಳಿ ಕಾಂತರಾಜ್ ಕೆಎಂ, ಜ್ಯೋತಿ ಮಲ್ಲಾಪುರ ಮಲ್ಲಿಕಾರ್ಜುನ್ ಎಂ ಮುಂತಾದವರು ಉಪಸ್ಥಿತರಿದ್ದರು.

## ದಿ.ಚೆನ್ನಮ್ಮಗೆ ಭಾವಪೂರ್ಣ ಶ್ರದ್ಧಾಂಜಲಿ

• ಮಲ್ಲಮ್ಮ ನುಡಿ ವಾರ್ತೆ ದಾಂಡೇಲಿ



ನಗರದಲ್ಲಿ ಇಂದು ಮಾಜಿ ಪ್ರಧಾನ ಮಂತ್ರಿಗಳಾದ ಹೆಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಚೆನ್ನಮ್ಮ ದೇವೇಗೌಡ ಅವರ ನಿಧನಕ್ಕೆ ದಾಂಡೇಲಿ ನಗರ ಜನತಾದಳ(ಜಾತ್ಯತೀತ) ಸಮಿತಿಯಿಂದ ಇಂದು ಅತ್ಯಂತ ಸಡಗರವಿಲ್ಲದ,ಗಂಭೀರ ವಾತಾವರಣದಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿತ್ತು. ಮಾಜಿ ನಗರಸಭೆ ಸದಸ್ಯರಾದ ಜೆಡಿಎಸ್ ರಾಜ್ಯ ಕಾರ್ಯದರ್ಶಿ ಹಾಗೂ ರಾಜ್ಯ ವಕ್ತಾರರಾದ ರೋಷನ್ ಬಾವಾಜಿ ಅವರ ನೇತೃತ್ವದಲ್ಲಿ ಈ ಸಂತಾಪ ಸೂಚಕ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಮಾತನಾಡಿದ ರೋಷನ್ ಬಾವಾಜಿ ಅವರು, "ಪಕ್ಷದ ಸಿದ್ಧಾಂತದಲ್ಲಿ ತಾಯಿಯ ಸ್ಥಾನದಲ್ಲಿದ್ದ ಚೆನ್ನಮ್ಮ ಅವರ ಸರಳತೆ, ದೃಢತೆ ಹಾಗೂ ಮಾಜಿಪ್ರಧಾನಿಗಳಿಗೆ ಅವರ ದೀರ್ಘ ರಾಜಕೀಯ ಜೀವನದಲ್ಲಿ ನೀಡಿದ ಬೆಂಬಲವು ಪ್ರತಿಯೊಬ್ಬ ಪಕ್ಷದ ಕಾರ್ಯಕರ್ತರಿಗೂ ಸದಾ ಪ್ರೇರಣೆಯಾಗಿದೆ" ಎಂದು ಸ್ಮರಿಸಿದರು. ಈ ಗೌರವ ವಂದನೆ ಹಾಗೂ ಶ್ರದ್ಧಾಂಜಲಿ ಸಭೆಯಲ್ಲಿ ಪ್ರಮುಖ ಪ್ರಾದೇಶಿಕ ನಾಯಕರುಗಳಾದ ಶಿರಸಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಉಪೇಂದ್ರ ಪೈ, ದಾಂಡೇಲಿ ನಗರ ಜೆಡಿಎಸ್ ಅಧ್ಯಕ್ಷ ಅಕ್ರಂಖಾನ್ ಮತ್ತು ಜೋಯಿಡಾ ತಾಲೂಕು ಜೆಡಿಎಸ್ ಅಧ್ಯಕ್ಷ ಅಜಿತ್ ತೋರಾವತ್ ಅವರು ಉಪಸ್ಥಿತರಿದ್ದು ಪುಷ್ಪ ನಮನ ಸಲ್ಲಿಸಿದರು. ಇವರೊಂದಿಗೆ ಪದಾಧಿಕಾರಿಗಳಾದ ಮಹಮ್ಮದ್ ಗೌಸ ಬೆಟಗೇರಿ ಮಾರುತಿ ಕಾಂಬ್ಳೆ, ಫಾರೂಕ್ ಶೇಖ್, ಅಶೋಕ್ ಪಾಟೀಲ್, ಮಂಜುಳಾ ಮೇಡಂ ಸೇರಿದಂತೆ ಹಲವು ಕಾರ್ಯಕರ್ತರು ಭಾಗವಹಿಸಿದ್ದರು.

## ಸರಳತೆಗೆ ಮತ್ತೊಂದು ಹೆಸರೇ ರಾಮಲಿಂಗಾರೆಡ್ಡಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಸರಳತೆ, ಸೌಜನ್ಯ ಮತ್ತು ಜನಸಾಮಾನ್ಯರೊಂದಿಗೆ ಬೆರೆತು ಬದುಕುವ ಗುಣಗಳಿಂದ ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಜನಮನ ಗೆದ್ದಿದ್ದಾರೆ. ಉನ್ನತ ಹುದ್ದೆಯಲ್ಲಿದ್ದರೂ ಯಾವುದೇ ಆಡಂಬರವಿಲ್ಲದೆ ಜನರ ಸಮಸ್ಯೆಗಳನ್ನು ಆಲಿಸಿ, ಅವುಗಳಿಗೆ ಶೀಘ್ರ ಸ್ಪಂದಿಸುವ ಅವರ ಕಾರ್ಯವೈಖರಿ ಸಾರ್ವಜನಿಕರಿಂದ ಮೆಚ್ಚುಗೆಗೆ ಪಾತ್ರವಾಗಿದೆ.

ಸಚಿವ ರಾಮಲಿಂಗಾರೆಡ್ಡಿ ಅವರು ಅಧಿಕಾರವನ್ನು ಸೇವೆಯ ಸಾಧನವಾಗಿ ಬಳಸುತ್ತಿದ್ದು, ಕ್ಷೇತ್ರದ ಅಭಿವೃದ್ಧಿ, ಸಾರ್ವಜನಿಕರ ಕಲ್ಯಾಣ ಮತ್ತು ಮೂಲಸೌಕರ್ಯಗಳ ಅಭಿವೃದ್ಧಿಗೆ ನಿರಂತರ ಶ್ರಮಿಸುತ್ತಿದ್ದಾರೆ. ಪ್ರತಿದಿನ ನೂರಾರು ಜನರನ್ನು ಭೇಟಿ ಮಾಡಿ ಅವರ ಅಹವಾಲುಗಳನ್ನು ಆಲಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುತ್ತಿರುವುದು ಅವರ ಜನಪರ ಆಡಳಿತಕ್ಕೆ ಸಾಕ್ಷಿಯಾಗಿದೆ. "ಜನರ ವಿಶ್ವಾಸವೇ ನನ್ನ ದೊಡ್ಡ ಶಕ್ತಿ. ಸರಳತೆ ಮತ್ತು ಸೇವೆಯೇ ನನ್ನ ರಾಜಕೀಯ ಜೀವನದ ಮೂಲ ಮಂತ್ರ," ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಅವರ ಸರಳ ವ್ಯಕ್ತಿತ್ವ, ವಿನಯಶೀಲತೆ ಮತ್ತು ಜನಸ್ನೇಹಿ ನಡವಳಿಕೆ ಸಾರ್ವಜನಿಕ ಜೀವನದಲ್ಲಿ ಮಾದರಿಯಾಗಿದ್ದು, ಎಲ್ಲ ವರ್ಗದ ಜನರಿಂದ ಪ್ರಶಂಸೆಗೆ ಪಾತ್ರವಾಗಿದೆ.

## ಪ್ರವೀಣ್ ಶೆಟ್ಟಿ ಬಂಧನ ಖಂಡನೀಯ



ದಾಂಡೇಲಿ: ಕಾವೇರಿ ನೀರಿನ ಹೋರಾಟದ ವೇಳೆ ಕರ್ನಾಟಕ ರಕ್ಷಣಾವೇದಿಕೆ (ಪ್ರವೀಣ್ ಶೆಟ್ಟಿ ಬಣ) ರಾಜ್ಯಾಧ್ಯಕ್ಷರಾದ ಪ್ರವೀಣ್ ಶೆಟ್ಟಿ ಅವರನ್ನು ಪೊಲೀಸರು ಬಂಧಿಸಿರುವ ಕ್ರಮವನ್ನು ಕರ್ನಾಟಕ ರಕ್ಷಣಾ ವೇದಿಕೆ ಯುವ ಘಟಕ, ಜಿಲ್ಲೆ ತೀವ್ರವಾಗಿ ಖಂಡಿಸುತ್ತದೆ. ಕಾವೇರಿ ನೀರು ಹಾಗೂ ಕರ್ನಾಟಕದ ಹಕ್ಕುಗಳರಕ್ಷ ಣೆಗೆ ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಹೋರಾಟ ನಡೆಸುತ್ತಿದ್ದ ನಾಯಕರನ್ನು ಬಂಧಿಸಿರುವುದು ಕನ್ನಡಿಗರ ಭಾವನೆಗಳಿಗೆ ಧಕ್ಕೆ ತಂದಂತಾಗಿದೆ. ಸರ್ಕಾರವು ತಕ್ಷಣವೇ ರಾಜ್ಯಾಧ್ಯಕ್ಷರು ಸೇರಿದಂತೆ ಬಂಧಿತರಾದ ಎಲ್ಲಾ ಹೋರಾಟಗಾರರನ್ನು ಯಾವುದೇ ಷರತ್ತಿಲ್ಲದೆ ಬಿಡುಗಡೆ ಮಾಡಬೇಕು. ಸರ್ಕಾರ ಈ ಬೇಡಿಕೆಯನ್ನು ನಿರ್ಲಕ್ಷಿಸಿದರೆ, ಕರ್ನಾಟಕ ರಕ್ಷಣಾವೇದಿಕೆ ರಾಜ್ಯ ನಾಯಕತ್ವದ ನಿರ್ದೇಶನದಂತೆ ರಾಜ್ಯಾದ್ಯಂತ ಉಗ್ರ ಹೋರಾಟ ಹಾಗೂ ಕರ್ನಾಟಕ ಬಂದ್ ಸೇರಿದಂತೆ ಮುಂದಿನ ಹೋರಾಟದ ರೂಪುರೇಷೆಗಳನ್ನು ಪ್ರಕಟಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ. ಕನ್ನಡ ನಾಡು, ನುಡಿ, ನೆಲ ಮತ್ತು ನೀರಿನ ಹಕ್ಕುಗಳ ರಕ್ಷಣೆಗೆ ನಮ್ಮ ಹೋರಾಟ ನಿರಂತರವಾಗಿರುತ್ತದೆ ಎಂದು ಪ್ರವೀಣ್ ಕೊಠಾರಿ ಜಿಲ್ಲಾಧ್ಯಕ್ಷರು, ಯುವ ಘಟಕ ಕರ್ನಾಟಕ ರಕ್ಷಣಾ ವೇದಿಕೆ, ದಾಂಡೇಲಿ ಹೇಳಿದ್ದಾರೆ.

# ಕಾವೇರಿದ ಕಾವೇರಿ ಕಿಡಿ

### ನೀರು ಬಿಡಲ್ಲ: ಸಚಿವ ರಾಮಲಿಂಗಾರೆಡ್ಡಿ | ಬಿಟ್ರೆ ಕರ್ನಾಟಕ ಬಂದ್ ಗ್ಯಾರೆಂಟಿ: ಕನ್ನಡ ಪರ ಸಂಘಟನೆಗಳು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕಾವೇರಿ ನೀರು ಹಂಚಿಕೆ ಮಾಡಿದರೆ ಕರ್ನಾಟಕ ಬಂದ್ ಮಾಡಲಾಗುವುದು ಎಚ್ಚರ..! ಎಂದು ನಾಡಿನ ಕನ್ನಡ ಪರ ಹೋರಾಟಗಳು ಎಚ್ಚರಿಸಿವೆ. ಏತನ್ಮಧ್ಯೆ ಈ ವಿಚಾರದಲ್ಲಿ ಮೇಲ್ಮನವಿ ಹೋದ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವೂ (ಸಿಡಬ್ಲ್ಯೂಎಂಎ) ಕೂಡ ತಮಿಳುನಾಡಿಗೆ ಮುಂದಿನ 15 ದಿನಗಳ ಕಾಲ ಪ್ರತಿದಿನ 3,500 ಕ್ಯುಸೆಕ್ ನಂತೆ ನೀರು ಹರಿಸುವಂತೆ ಸೂಚನೆ ನೀಡಿದೆ.

**ಆರ್‌ಸಿ ಸಭೆಯಲ್ಲಿ ನಿರ್ಧಾರ:** ತಮಿಳುನಾಡಿಗೆ ಕಾವೇರಿ ನೀರನ್ನು ಬಿಡುಗಡೆ ಮಾಡುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿಯು ಕರ್ನಾಟಕಕ್ಕೆ ನಿರ್ದೇಶನ ನೀಡಿತ್ತು. ದಿಲ್ಲಿಯಲ್ಲಿ ನಡೆದ ಸಿಡಬ್ಲ್ಯುಆರ್‌ಸಿ ಸಭೆಯಲ್ಲಿಈ ನಿರ್ಧಾರ ಕೈಗೊಳ್ಳಲಾಗಿತ್ತು. ಇದನ್ನು ಪ್ರಶ್ನಿಸಿದ ಸರ್ಕಾರವು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿತ್ತು. ಸದ್ಯ ಪ್ರಾಧಿಕಾರವು ಸಮಿತಿಯ ನಿರ್ದೇಶನವನ್ನೇ ಎತ್ತಿ ಹಿಡಿದಿದೆ.

**ಸರ್ಕಾರದ ಮುಂದಿನ ಗುರಿ ಏನು?:** ಕರ್ನಾಟಕ ಸರ್ಕಾರವು ಕಾವೇರಿ ನೀರು ನಿಯಂತ್ರಣ ಸಮಿತಿಯ ಶಿಫಾರಸು ಪ್ರಶ್ನೆ ಮಾಡಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮೇಲ್ಮನವಿ ಹೋಗಿತ್ತು. ಇಲ್ಲಿಯೂ ಪರಿಹಾರ ಸಿಗದ ಹಿನ್ನೆಲೆ, ಮುಂದಿನ ದಾರಿ ಸುಪ್ರೀಂ ಕೋರ್ಟ್ ಆಗಿದೆ. ಸರ್ಕಾರ ಕೋರ್ಟ್ಗೆ ಅರ್ಜಿ ಸಲ್ಲಿಸಿ ಸಮಿತಿ ಹಾಗೂ ಪ್ರಾಧಿಕಾರದ ತೀರ್ಮಾನವನ್ನು ಪ್ರಶ್ನೆ ಮಾಡಬಹುದು.

### ನೀರಿಲ್ಲ, ಬಿಡೋದೆಲ್ಲಿ?



ಸದ್ಯ ಮಳೆ ತೀರ ಕಡಿಮೆ ಇದೆ.ತ.ನಾಡಿಗೆ ನೀರು ಬಿಡಲ್ಲ. ಹೀಗೆ ಹೇಳಿದ ಮೇಲೂ ಬಿಜೆಪಿ ಪ್ರತಿಭಟನೆ ಎಷ್ಟು ಸರಿ? ಕಾವೇರಿ ಕಣಿವೆಯ ನಾಲ್ಕು ಜಲಾಶಯಗಳಲ್ಲೂ ನೀರಿಲ್ಲ. ವಿಶೇಷವಾಗಿ ಕಳೆದ 30 ವರ್ಷಗಳಲ್ಲಿ 65.86 ರಷ್ಟು ಒಳ ಹರಿವು ಕಡಿಮೆ ಇರುವುದರಿಂದ ಆದೇಶ ಪಾಲನೆ ಮಾಡುವುದು ತುಂಬಾ ಕಷ್ಟ. ಈ ಕುರಿತು ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲಾಗುವುದು ಎಂದಿದ್ದಾರೆ ಜಲ ಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ.

### ಕೆಆರ್‌ಎಸ್‌ನಲ್ಲಿ ನೀರಿನ ಪ್ರಮಾಣ ?

ಜುಲೈ 30ರ ಮಾಹಿತಿ ಪ್ರಕಾರ, ಕೆಆರ್‌ಎಸ್ ಜಲಾಶಯದಲ್ಲಿ 17 ಟಿಎಂಸಿ ನೀರು ಸಂಗ್ರಹವಾಗಿದೆ. (ಗರಿಷ್ಠ ಸಾಮರ್ಥ್ಯ 49.45 ಟಿಎಂಸಿ) ಇನ್ನು ಜಲಾಶಯಕ್ಕೆ ಒಳಹರಿವು 3200 ಕ್ಯೂಸೆಕ್ಸ್ ಇದೆ. ಜಲಾಶಯ ಶೇಕಡಾ 30 ರಷ್ಟು ಭರ್ತಿಯಾಗದ ಸಂದರ್ಭದಲ್ಲಿ ತಮಿಳುನಾಡಿಗೆ ನೀರು ಹರಿಸುವ ತೀರ್ಮಾನವು ರಾಜ್ಯದ ರೈತರ ಹಿತಕ್ಕೆ ಧಕ್ಕೆ ಉಂಟು ಮಾಡಲಿವೆ.

### ಬಂದ್‌ಗೆ ಸಂಘಟನೆ ಅಸ್ತು



ತಮಿಳುನಾಡಿಗೆ ನೀರು ಹರಿಸಬೇಕೆಂಬ ಆದೇಶ ರದ್ದಾಗದಿದ್ದರೆ ಕರ್ನಾಟಕ ಬಂದ್ ಘೋಷಣೆ ಮಾಡಲಾಗುತ್ತದೆ. ಎಲ್ಲಾ ಸಂಘಟನೆಗಳು, ಕೂಡಾ ಬಂದ್ ಗೆ ಬೆಂಬಲಿಸಲಿವೆ. ಈ ಮೂಲಕ ಕೇಂದ್ರಕ್ಕೆ ಎಚ್ಚರಿಕೆ ಕೊಡಲಿದ್ದೇವೆ. ಬಂಗಾರಪ್ಪ ಮಾದರಿಯಲ್ಲಿ ಡಿಕೆಶಿಯವರು ಕನ್ನಡಿಗರ ಪರ ನಿಲ್ಲನಿಂತು ನಾಡಿ ರಕ್ಷಣೆ ಮಾಡಬೇಕು ಎಂದು ಕನ್ನಡ ಸೇನೆಯ ರಾಜ್ಯಾಧ್ಯಕ್ಷ ಕೆಆರ್ ಕುಮಾರ್ ಹೇಳಿದ್ದಾರೆ.

### ಮೇಲ್ಮನವಿ: ಸಿಎಂ ಡಿಕೆಶಿ



ದೆಹಲಿಯ ಕರ್ನಾಟಕ ಭವನದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಇಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಮುಂದೆ ಈ ವಿಚಾರವನ್ನು ಹೇಗೆ ತೆಗೆದುಕೊಂಡು ಹೋಗಬೇಕು ಎಂದು ಸರ್ವಪಕ್ಷ ಸಭೆಯಲ್ಲಿ ಚರ್ಚೆ ಮಾಡಲಾಗುವುದು. ಈ ವಿಚಾರವಾಗಿ ಕರ್ನಾಟಕದ ಎಲ್ಲಾ ಸಂಸದರು ಸಹಕರಿಸಿದ್ದಾರೆ ಎಂದು ತಿಳಿಸಿದ್ದಾರೆ.



ರಾಜ್ಯ ಸರ್ಕಾರ ಕೂಡಲೇ ಬರಗಾಲ ಘೋಷಣೆ ಮಾಡದಿದ್ದರೆ ಆಗಸ್ಟ್ 3 ರಿಂದ ಚಲೋ ಹೊಲ ಗದ್ದೆ ಪ್ರತಿಭಟನೆ ಮಾಡುತ್ತೇವೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಎಚ್ಚರಿಸಿದರು. ಕರೆಕಲ್ ಗ್ರಾಮಕ್ಕೆ ಭೇಟಿ ನೀಡಿ ಬೆಳೆ ಹಾನಿ ಪರಿಶೀಲಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

## ಶಂಕರ ಪ್ರಸಾದ ದುಬೆ ಪ್ರಶಸ್ತಿ ಪ್ರದಾನ ಹಾಗೂ ಪತ್ರಿಕಾ ದಿನಾಚರಣೆ ಇಂದು

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ

ಇಲ್ಲಿನ ಬಸವೇಶ್ವರ ವೃತ್ತ ಹತ್ತಿರ ಇರುವ ಬಿ.ಕೆ. ಡಿ. ಬಿ. ಕಲ್ಯಾಣ ಮಂಟಪದಲ್ಲಿ ಇಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಘಟಕ ವತಿಯಿಂದ ಜು.31ರಂದು ಶುಕ್ರವಾರ ಬೆಳಗ್ಗೆ 11ಕ್ಕೆ ಪತ್ರಿಕಾ ದಿನಾಚರಣೆ ಹಾಗೂ ಶಂಕರಪ್ರಸಾದ ದುಬೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಶಾಸಕ ಶರಣು ಸಲಗರ ಕಾರ್ಯಕ್ರಮ ಉದ್ಘಾಟಿಸುವರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆನಂದ ದೇವಪ್ಪ ಅಧ್ಯಕ್ಷತೆ ವಹಿಸುವರು. ಬೆಂಗಳೂರು ಸುಧಾ ವಾರ ಪತ್ರಿಕೆಯ ಮುಖ್ಯ ಉಪ ಸಂಪಾದಕಿ ರಶ್ಮಿ ಎಸ್. ಅವರನ್ನು ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ತಾಲೂಕಾಧ್ಯಕ್ಷರಾದ ಮಾರ್ಥಂಡ ಜೋಶಿ, ಪ್ರಧಾನ ಕಾರ್ಯದರ್ಶಿ ಉದಯಕುಮಾರ ಮುಳೆ ತಿಳಿಸಿದ್ದಾರೆ.



ವಿಧಾನ ಪರಿಷತ್ ಸದಸ್ಯ ಎಂ.ಜಿ ಮುಳೆ, ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ, ವಿಧಾನ ಪರಿಷತ್ ಮಾಜಿ ಸದಸ್ಯ ವಿಜಯಸಿಂಗ್, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ಬಿ. ನಾರಾಯಣರಾವ, ಕಾಡಾ ಅಧ್ಯಕ್ಷ ಬಾಬು ಹೊನ್ನಾನಾಯಕ, ಕೆಪಿಸಿಸಿ ಸಹಕಾರ ವಿಭಾಗದ ರಾಜ್ಯಾಧ್ಯಕ್ಷ ಧನರಾಜ ತಾಳಂಪಳ್ಳಿ, ಸಹಾಯಕ ಆಯುಕ್ತ ಪ್ರಕಾಶ ಕುದರಿ, ಡಿವೈಎಸ್ಪಿ ಮಡೊಳಪ್ಪ ಪಿ.ಎಸ್. ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ, ದಿಲೀಪಕುಮಾರ ಉತ್ತಮ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಸ್ವಾಮಿ, ರಾಜ್ಯ ಕಾರ್ಯಕಾರಿಣಿ ಸದಸ್ಯ ಅಪ್ಪಾರಾವ ಸೌದಿ, ನಿವೃತ್ತ ಅಭಿಯಂತರ ಚಂದ್ರಶೇಖರ ದುಬೆ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಈ ವೇಳೆ ಸಂಘದ ಜಿಲ್ಲಾ ಪದಾಧಿಕಾರಿಗಳು ಸೇರಿದಂತೆ ಪತ್ರಕರ್ತರಿಗೆ ಗೌರವ ಸನ್ಮಾನ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಿಸಿಲ ನಾಡಿನ ಭೂಮಿಗೆ ಬಂಪರ್ ಬೆಲೆ



**ಅವಲೋಕನ**

● ಸುರೇಶ ಕೆ.ವಿ ಮುದಗಲ್

ರಾಯಚೂರು ಜಿಲ್ಲೆಯ ಮುದಗಲ್ಲ, ಲಿಂಗಸೂಗೂರು, ಹುನಗುಂದ ಗಡಿ ಭಾಗ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭೂಮಿಯ ಬೆಲೆ ಗಗನಕ್ಕೇರಿದೆ..!

ಈ ಭಾಗದಲ್ಲಿ ಅಭಿವೃದ್ಧಿ ಯೋಜನೆಗಳು ವೇಗ ಪಡೆದುಕೊಂಡಿರುವ ಪರಿಣಾಮ ಕೃಷಿ ಭೂಮಿಯ ಬೆಲೆ ಹಾಗೂ ಬೇಡಿಕೆ ಎರಡೂ ಗಣನೀಯವಾಗಿ ಏರಿಕೆಯಾಗಿವೆ. ಯೋಜನೆಗಾಗಿ ಭೂ ಸ್ವಾಧೀನ: ವಸತಿ ನಿವೇಶನ, ರಾಷ್ಟ್ರೀಯ ಹೆದ್ದಾರಿ748ಎ ನಾಲ್ಕು ಪಥ ರಸ್ತೆ ಕಾಮಗಾರಿ, ಹೊಸ ರೈಲ್ವೆ ಮಾರ್ಗಗಳ ಅಭಿವೃದ್ಧಿ, ಸೋಲಾರ ಪ್ಲಾಂಟ್ ಹಾಗೂ ಗಾಳಿ ವಿದ್ಯುತ್ (ವಿಂಡ್ಫಾರ್ಮ್) ಯೋಜನೆಗಳಿಗಾಗಿ ಭೂಸ್ವಾಧೀನ ನಡೆಯುತ್ತಿರುವುದರಿಂದ ಈ ಭಾಗದ ಜಮೀನಿನತ್ತ ಹೂಡಿಕೆದಾರರ ಗಮನ ಸೆಳೆದಿದೆ. ಈ ಹಿಂದೆ ಕೃಷಿಗೆ ಮಾತ್ರ ಸೀಮಿತವಾಗಿದ್ದ ಅನೇಕ ಜಮೀನುಗಳು ಈಗ ಅಭಿವೃದ್ಧಿ ಯೋಜನೆಗಳ ವ್ಯಾಪ್ತಿಗೆ ಬರುತ್ತಿವೆ.

**ಆಗ ಕಡಿಮೆ, ಈಗ ಅಧಿಕ:** ಅತಿಹೆಚ್ಚಾಗಿ ವಸತಿ ವಿನ್ಯಾಸಕ್ಕಾಗಿ ಭೂ ಪರಿವರ್ತನೆ ಮಾಡಲಾಗುತ್ತಿದೆ, ರಸ್ತೆ ಸಂಪರ್ಕ ಸುಧಾರಣೆಯಾಗಲಿರುವ ನಿರೀಕ್ಷೆ, ಕೈಗಾರಿಕೆಗಳ ಬೆಳವಣಿಗೆ ಹಾಗೂ ಭವಿಷ್ಯದ ಹೂಡಿಕೆ ಅವಕಾಶಗಳನ್ನು ಗಮನದಲ್ಲಿಟ್ಟುಕೊಂಡು ಖಾಸಗಿ ಸಂಸ್ಥೆಗಳು ಮತ್ತು ಹೂಡಿಕೆದಾರರು ಭೂಮಿ ಖರೀದಿಸಲು ಮುಂದಾಗುತ್ತಿದ್ದಾರೆ.

**ಎಕರೆಗೆ ಏರಿದ ಭೂಮಿ ಬೆಲೆ:** ಕೆಲ ವರ್ಷಗಳ ಹಿಂದೆ ಕಡಿಮೆ ಬೆಲೆಗೆ ದೊರೆಯುತ್ತಿದ್ದ ಜಮೀನುಗಳಿಗೆ ಈಗ ಹಲವು ಪಟ್ಟು ಹೆಚ್ಚಿನ ಬೆಲೆ ಕೇಳಲಾಗುತ್ತಿದೆ ಎಂದು ಸ್ಥಳೀಯ ಭೂ ಮಾಲೀಕರು ಹೇಳುತ್ತಿದ್ದಾರೆ.

ಪ್ರಮುಖ ರಸ್ತೆಗಳ ಸಮೀಪದ ಜಮೀನುಗಳಿಗೆ ಹೆಚ್ಚಿನ ಬೇಡಿಕೆ ಕಂಡುಬಂದಿದ್ದು, ಮಾರಾಟ ವ್ಯವಹಾರಗಳ ಸಂಖ್ಯೆಯೂ ಹೆಚ್ಚುತ್ತಿದೆ. ಕಳೆದ ಹತ್ತು ವರ್ಷಗಳ ಹಿಂದೆ ಎಕರೆಗೆ 8.10ಲಕ್ಷ ರೂ.ಇದ್ದ ಬೆಲೆ ಈಗ 50ಲಕ್ಷ ದಾಟಿದೆ. ರಸ್ತೆ ಅಕ್ಕಪಕ್ಕದ ಜಮೀನುಗಳು 2ಕೋಟಿಗೂ ಹೆಚ್ಚಾಗಿದೆ.

### ಬಡವರಿಗೆ ಖರೀದಯೇ ಗಗನ ಕುಸುಮ

ಬಡವರು ಜಮೀನು ಖರೀದಿಸುವ ಗೋಜಿಗೆ ಹೋದರೆ ಕೈಗೆಟಕುತ್ತಿಲ್ಲ. 30*40 ಪ್ಲಾಟ ಈಗ ಮುದಗಲ್ಲ ಪಟ್ಟಣದಲ್ಲಿ 18ರಿಂದ 20ಲಕ್ಷಕ್ಕೆ ಮಾರಾಟವಾಗುತ್ತಿದೆ. ಭೂಮಿ ಮಾರಾಟದಿಂದ ಕೆಲ ರೈತರಿಗೆ ಆರ್ಥಿಕ ಲಾಭ ದೊರೆಯುವ ಸಾಧ್ಯತೆ ಇದ್ದರೂ, ಕೃಷಿ ಭೂಮಿಯ ಪ್ರಮಾಣ ಕಡಿಮೆಯಾಗುವ ಬಗ್ಗೆ ಆತಂಕವೂ ವ್ಯಕ್ತವಾಗುತ್ತಿದೆ. ಕೃಷಿಯೇ ಜೀವನಾಧಾರವಾಗಿರುವ ಕುಟುಂಬಗಳು ಪರ್ಯಾಯ ಜೀವನೋಪಾಯ, ನ್ಯಾಯಯುತ ಪರಿಹಾರದ ಅಗತ್ಯವನ್ನು ಒತ್ತಿಹೇಳುತ್ತಿವೆ.





### ಉದ್ಯೋಗಕ್ಕೂ ಅವಕಾಶ,ಸಾರಿಗೆ ಸೌಲಭ್ಯ

ವಿಂಡ್ಫಾರ್ಮ್, ಸೋಲಾರ ಪ್ಲಾಂಟ, ರಸ್ತೆ ಹಾಗೂ ರೈಲ್ವೆ ಯೋಜನೆಗಳು ಪೂರ್ಣಗೊಂಡ ಬಳಿಕ ಸ್ಥಳೀಯರಿಗೆ ಉದ್ಯೋಗ, ಸಾರಿಗೆ ಸೌಲಭ್ಯ, ವ್ಯಾಪಾರ ವಿಸ್ತರಣೆ ಮತ್ತು ಕೈಗಾರಿಕಾ ಹೂಡಿಕೆಗಳಿಗೆ ಹೊಸ ಅವಕಾಶಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ. ಕೃಷಿ ಭೂಮಿಯ ಸಂರಕ್ಷಣೆ, ನ್ಯಾಯಯುತ ಭೂಸ್ವಾಧೀನ ಪರಿಹಾರ, ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವ ಮೂಲಕ ರೈತರ ಹಿತಾಸಕ್ತಿಯ ನಡುವೆ ಸಮತೋಲನ ಕಾಯ್ದುಕೊಳ್ಳಬೇಕೆನ್ನುತ್ತಾರೆ ತಜ್ಞರು.

2021ರಿಂದ2026ರವರೆಗೆ 4ವರ್ಷದಲ್ಲಿಯೇ ಸುಮಾರು 3ಸಾವಿರ ಎಕರೆ ಭೂಮಿ ಖರೀದಿಯಾಗಿದೆ ಎಂದು ಲಿಂಗಸುಗೂರ ಉಪನೋಂದಣಿ ಅದೀಕಾರಿಗಳು ಅಂದಾಜಿಸಿದ್ದಾರೆ. ಮುದಗಲ್ಲ ಪಟ್ಟಣದಲ್ಲಿ ಕಳೆದ 5ವರ್ಷದಲ್ಲಿ ಕಂಕರ ಮೀಷನ ನಿರ್ಮಾಣ, ಗಣಿಗಾರಿಕೆಗೆ, ಜಲಧಾರೆ ಯೋಜನೆ ಸೇರಿದಂತೆ ವಸತಿ ವಿನ್ಯಾಸಕ್ಕೆ ಸುಮಾರು 200ಎಕರೆ ಭೂಮಿ ಪರಿವರ್ತನೆಯಾಗಿ ಲೇಔಟಗಳಾಗಿ ನಿರ್ಮಾಣವಾಗಿವೆ.

–ಪ್ರವೀಣಕುಮಾರ ಭೋಗಾರ, ಮುಖ್ಯಾಧಿಕಾರಿಗಳು ಪುರಸಭೆ ಮುದಗಲ್ಲ

## ಕೂಡಲೇ ಬರ ಘೋಷಿಸದಿದ್ದರೆ ಚಲೋ ಹೊಲ ಗದ್ದೆ ಧರಣಿ ಆರಂಭ: ಸಾಲಮನ್ನಾ ಮಾಡಲು ಆರ್. ಅಶೋಕ ಆಗ್ರಹ!

## ರೈತರು ಉಳಿದರೆ ದೇಶ ಉಳಿಯುತ್ತದೆ

ದೇಶದ ಬೆನ್ನೆಲುಬು ರೈತ. ರೈತನು ಬೆಳೆದ ಅನ್ನವೇ ಪ್ರತಿಯೊಬ್ಬರ ಹೊಟ್ಟೆ ತುಂಬಿಸುತ್ತದೆ. ರೈತರು ಸಂಕಷ್ಟದಲ್ಲಿದ್ದರೆ ದೇಶದ ಆಹಾರ ಭದ್ರತೆಯೇ ಅಪಾಯಕ್ಕೆ ಸಿಲುಕುತ್ತದೆ. ಆದ್ದರಿಂದ ರೈತರ ಸಮಸ್ಯೆಗಳನ್ನು ಕೇವಲ ರೈತರ ಸಮಸ್ಯೆಗಳೆಂದು ನೋಡದೆ, ದೇಶದ ಭವಿಷ್ಯದ ಪ್ರಶ್ನೆಯೆಂದು ಪರಿಗಣಿಸಬೇಕು.

## ಸಂಪಾದಕೀಯ



**ಮಾಣಿಕರೆಡ್ಡಿ ಕೌಡಾಳೆ**
**ಪ್ರಧಾನ ಸಂಪಾದಕರು**
**ಮೊ: 9845028349**

ಬರಗಾಲ, ಅತಿವೃಷ್ಟಿ, ಬೆಳೆ ನಷ್ಟ, ಉತ್ಪಾದನಾ ವೆಚ್ಚದ ಏರಿಕೆ ಹಾಗೂ ಬೆಳೆಗಳಿಗೆ ಸೂಕ್ತ ಬೆಲೆ ಸಿಗದಿರುವುದು ರೈತರ ಬದುಕನ್ನು ಸಂಕಷ್ಟಕ್ಕೆ ತಳ್ಳುತ್ತಿದೆ. ಇಂತಹ ಸಂದರ್ಭದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ರಾಜಕೀಯ ಭೇದ ಮರೆತು ರೈತರ ನೆರವಿಗೆ ತಕ್ಷಣ ಧಾವಿಸಬೇಕು.

ಬೆಳೆ ನಷ್ಟಕ್ಕೆ ಸಮರ್ಪಕ ಪರಿಹಾರ, ಸುಲಭ ಸಾಲ ಸೌಲಭ್ಯ, ಉಚಿತ ಅಥವಾ ರಿಯಾಯಿತಿ ಬೀಜ–ಗೊಬ್ಬರ, ನೀರಾವರಿ ಯೋಜನೆಗಳ ವಿಸ್ತರಣೆ ಹಾಗೂ ಕನಿಷ್ಠ ಬೆಂಬಲ ಬೆಲೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು ಅತ್ಯಗತ್ಯ. ರೈತನ ಕೈ ಬಲವಾದರೆ ದೇಶದ ಆರ್ಥಿಕತೆಯೂ ಬಲವಾಗುತ್ತದೆ.

"ರೈತರು ಉಳಿದರೆ ದೇಶ ಉಳಿಯುತ್ತದೆ" ಎಂಬುದು ಕೇವಲ ಘೋಷಣೆಯಲ್ಲ, ಅದು ದೇಶದ ಅಭಿವೃದ್ಧಿಯ ಮೂಲ ಸತ್ಯ. ಆದ್ದರಿಂದ ಸರ್ಕಾರಗಳು ರೈತರ ನೆರವಿಗೆ ಆದ್ಯತೆ ನೀಡಿ, ಅವರ ಬದುಕನ್ನು ಸುರಕ್ಷಿತಗೊಳಿಸುವ ದಿಟ್ಟ ಕ್ರಮಗಳನ್ನು ಕೈಗೊಳ್ಳಬೇಕು.

## ಭದ್ರೇಶ್ವರ ಗದ್ದುಗೆಗೆ ಸಂಗೀತ ರುದ್ರಾಭಿಷೇಕ ಪೂಜೆ



**ಬೀದರ್:** ತಾಲ್ಲೂಕಿನ ಬಾವಗಿ ಗ್ರಾಮದ ಆರಾಧ್ಯ ದೈವ, ಪವಾಡಪುರುಷ ಶ್ರೀ ಗುರು ಭದ್ರೇಶ್ವರ ಸಂಸ್ಥಾನದಲ್ಲಿ ಗುರು ಪೂರ್ಣಿಮೆ ನಿಮಿತ್ಯವಾಗಿ ಶ್ರೀ ಗುರು ಭದ್ರೇಶ್ವರ ಕರ್ತೃ ಗದ್ದುಗೆಗೆ ಸಂಗೀತ ರುದ್ರಾಭಿಷೇಕ ಪೂಜೆ ಬಿಲ್ವಾರ್ಚನೆ ನೆರವೇರಿಸಲಾಯಿತು. ಬಳಿಕ ಮಾತನಾಡಿದ ಶ್ರೀ ಗುರು ಭದ್ರೇಶ್ವರ ಸಂಸ್ಥಾನ ವೇದ ಮೂರ್ತಿ ಶ್ರೀ ಭದ್ರಯ್ಯ ಸ್ವಾಮಿ ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ದೇವರಷ್ಟೇ ಉನ್ನತ ಸ್ಥಾನವಿದೆ ಗುರುವಿನ ಮಾರ್ಗದರ್ಶನ ವ್ಯಕ್ತಿಯ ಬದುಕಿಗೆ ದಿಕ್ಕು ತೋರಿಸಿ ಜೀವನವು ಸಾರ್ಥಕ ಗೊಳಿಸುತ್ತದೆ ಗುರು ಕೇವಲ ಶಿಕ್ಷಣ ನಿಡುವವರಲ್ಲ ಜಿವನದ ಪ್ರತಿಯೊಂದು ಹಂತದಲ್ಲೂ ದಾರಿ ತೊಲಗಿಸುವ ದಾರಿ ದೀಪ ಜ್ಞಾನ ಸಂಸ್ಕಾರ ಮಾನವಿಯ ಮೌಲ್ಯಗಳು ಹಾಗೂ ಧರ್ಮದ ಮಾರ್ಗವನ್ನು ಗುರುಗಳು ಭೊಧಿಸುತಾರೆ ಗುರು ಪೂರ್ಣಿಮೆಯ ಗುರುವಿನ ಬಗ್ಗೆ ಕೃತಜ್ಞತೆ ಸಲ್ಲಿಸುವ ಪವಿತ್ರ ಹಬ್ಬವಾಗಿದ್ದು ಎಂದು ನುಡಿದರು. ಈ ಸಂದರ್ಭದಲ್ಲಿ ಚಂದ್ರಯ್ಯ ಸ್ವಾಮಿ ಚನಮಲಪ್ಪ ಹಜರಗಿ ಸಂಗಮೆಷ ಹಜರಗಿ ರಾಜಕುಮಾರ್ ಇಡಗಾರ ಲೋಕೇಶ್ ಕನಶೆಟೀ ರೇವಣಪ್ಪ ಭಧ್ರಣ ಶಿವುಕುಮಾರ ರೆಷಟ್ಟಿ ಕಾಶೀನಾಥ್ ಪಕ್ಕಾ ಶರಣಪ್ಪ ಮುದಾ ಗುಂಡಯ್ಯ ಸ್ವಾಮಿ ಆನಂದ್ ಸ್ವಾಮಿ ಅವಿನಾಶ್ ಭಾಲ್ಕಿ ನಾಗೇಶ್ ಕೊಳಾರ ಪ್ರತ್ವಿರಾಜ ಹಜರಗಿ ಅವಿನಾಶ್ ಮುದ ಬಸವರಾಜ ಹೊನಿಕೆರಿ ಜಗನ್ನಾಥ ಜಗದಾಳೆ ಭದ್ರಪ ಹೌರಿ ಶಾಂತಕುಮಾರ್ ಸ್ವಾಮಿ ಸಕಲ ಸದ್ಭಕ್ತರು ಇದ್ದರು.

## ಮಕ್ಕಳ ಕೈಗೆ ಅತಿಯಾಗಿ ಮೊಬೈಲ್ ನೀಡುವುದು ಅವರ ಭವಿಷ್ಯಕ್ಕೆ ಮಾರಕ



**ಬೀದರ್:** ಮೊಬೈಲ್ ಫೋನ್ ನಮ್ಮ ಜೀವನದ ಒಂದು ಭಾಗವಾಗಿದ್ದರೂ, ಚಿಕ್ಕ ಮಕ್ಕಳ ಕೈಗೆ ಅತಿಯಾಗಿ ಮೊಬೈಲ್ ಫೋನ್ ನೀಡುವುದು ಅವರ ದೈಹಿಕ, ಮಾನಸಿಕ ಹಾಗೂ ಶೈಕ್ಷಣಿಕ ಬೆಳವಣಿಗೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಚಂದ್ರಶೇಖರ್ ಆಜಾದ್ ಯುವ ಸಂಘದ ಅಧ್ಯಕ್ಷ ವಿಜಯಕುಮಾರ್ ಭಂಡೆ ತಿಳಿಸಿದ್ದಾರೆ.

ಜುಲೈ 28 ರಂದು ಅವರು ಬೀದರ ನಗರದ ಲಾಡಗೇರಿ ಬಡಾವಣೆಯಲ್ಲಿ ಮಕ್ಕಳಿಗೆ ಫುಟ್‌ಬಾಲ್ ವಿತರಿಸಿ, ಮಾತನಾಡಿದ ಅವರು, ಮಕ್ಕಳು ಗಂಟೆಗಟ್ಟಲೆ ಮೊಬೈಲ್ ಬಳಸುವುದರಿಂದ ಕಣ್ಣಿನ ದೃಷ್ಟಿ ಕುಗ್ಗುವುದು, ನಿದ್ರೆಯ ಸಮಸ್ಯೆ ಉಂಟಾಗುವುದು, ಏಕಾಗ್ರತೆ ಕಡಿಮೆಯಾಗುವುದು, ಓದಿನ ಮೇಲೆ ಆಸಕ್ತಿ ಇಳಿಮುಖವಾಗುವುದು ಹಾಗೂ ದೈಹಿಕ ಚಟುವಟಿಕೆಗಳು ಕಡಿಮೆಯಾಗುವಂತಹ ಸಮಸ್ಯೆಗಳು ಎದುರಾಗುತ್ತವೆ ಎಂದು ಹೇಳಿದರು. ಅಲ್ಲದೇ, ಸ್ನೇಹಿತರೊಂದಿಗೆ ಬೆರೆಯುವ ಗುಣವೂ ಕ್ಷೀಣಿಸಿ, ಸಾಮಾಜಿಕ ಬೆಳವಣಿಗೆಯ ಮೇಲೂ ಪರಿಣಾಮ ಬೀರುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.

ದೈಹಿಕ ಆಟಗಳಿಂದ ಮಕ್ಕಳ ದೇಹ ಸದೃಢಗೊಳ್ಳುವುದರ ಜೊತೆಗೆ ರೋಗನಿರೋಧಕ ಶಕ್ತಿ ಹೆಚ್ಚುತ್ತದೆ. ಆತ್ಮವಿಶ್ವಾಸ ವೃದ್ಧಿಯಾಗುವುದಲ್ಲದೆ, ತಂಡದೊಂದಿಗೆ ಕೆಲಸ ಮಾಡುವ ಗುಣ ಬೆಳೆಯುತ್ತದೆ ಹಾಗೂ ಮನಸ್ಸು ಉಲ್ಲಾಸದಿಂದ ಕೂಡಿರುತ್ತದೆ. ಇಂತಹ ಕ್ರೀಡೆಗಳು ಮಕ್ಕಳ ಮಾನಸಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡುತ್ತವೆ ಎಂದು ಅವರು ಅಭಿಪ್ರಾಯಪಟ್ಟರು.

ಅದೇ ಸಂದರ್ಭದಲ್ಲಿ ಲಾಡಗೇರಿಯ ಬಡಾವಣೆಯ ಮಕ್ಕಳು ಇತರರು ಉಪಸ್ಥಿತರಿದ್ದರು.

# ಸಂಸ್ಕೃತಿಯನ್ನು ಬೆಳೆಸುವುದಕ್ಕಿಂತ ಉಳಿಸಿಕೊಳ್ಳುವುದು ಮುಖ್ಯ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಪ್ರಸ್ತುತ ಸಮಯದಲ್ಲಿ ಪ್ರತಿಯೊಬ್ಬ ಕಲಾವಿದ ಹಾಗೂ ಸಾರ್ವಜನಿಕರು ನಮ್ಮ ನಾಡಿನ ಕಲೆ ಮತ್ತು ಸಂಸ್ಕೃತಿಯನ್ನು ಬೆಳೆಸುವುದಕ್ಕಿಂತ ಅದನ್ನು ಮುಂದಿನ ಪೀಳಿಗೆಗಾಗಿ ಉಳಿಸಿಕೊಂಡು ಹೋಗುವುದು ಅತ್ಯಂತ ಮುಖ್ಯವಾದ ಜವಾಬ್ದಾರಿಯಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕ ಜಡಿಯಪ್ಪ ಗೆದ್ಲಗಟ್ಟಿ ಹೇಳಿದರು.

ಗುರುವಾರ ನಗರದ ಕನ್ನಡ ಸಾಹಿತ್ಯ ಪರಿಷತ್ ಸುವರ್ಣ ಸಭಾ ಭವನದಲ್ಲಿ ಶ್ರೀ ಸಾಯಿ ಜನ ಜಾಗೃತಿ ಕಲಾ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಂಗೀತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಸರಕಾರವು ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಲು ನಿರಂತರವಾಗಿ ಶ್ರಮಿಸುತ್ತಿದೆ. ಬೀದಿ ನಾಟಕ, ಸಂಗೀತ ಕಾರ್ಯಕ್ರಮಗಳು, ರಂಗಾಯಣ ಸಂಸ್ಥೆಗಳ ಮೂಲಕ ಅತ್ಯುತ್ತಮ ಕೃತಿಗಳನ್ನು ರಂಗಭೂಮಿಗೆ ತರುವುದು ಹಾಗೂ ಗ್ರಾಮೀಣ ಮಟ್ಟದಲ್ಲಿ ಜಾನಪದ ಕಲೆಗಳನ್ನು ಪೋಷಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸರಕಾರ ತನ್ನ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ ಎಂದರು.

ಹಿಂದಿನ ಕಾಲದಲ್ಲಿ ಪ್ರತಿಯೊಂದು ಊರಿನಲ್ಲೂ ಭಜನೆ ಮತ್ತು ಶೋಭಾನೆ ಪದಗಳನ್ನು ಹಾಡುವ ಕಲಾವಿದರು ಇಡೀ ಊರಿಗೆ ಪರಿಚಿತರಾಗಿರುತ್ತಿದ್ದರು. ಯಾವುದೇ ಶುಭ ಕಾರ್ಯಗಳಿದ್ದರೂ ಸಂಪೂರ್ಣ ರಾತ್ರಿ ಭಜನೆ ಮತ್ತು ಸೋಬಾನೆ ಪದಗಳನ್ನು ಹಾಡಿ ಸಂಭ್ರಮಿಸುತ್ತಿದ್ದರು.

ಆದರೆ, ಇಂದು ಕಾಲ ಬದಲಾಗಿದೆ. ತಂತ್ರಜ್ಞಾನ ಬೆಳೆದಿದೆ. ಪ್ರತಿಯೊಬ್ಬರ ಕೈಯಲ್ಲೂ ಮೊಬೈಲ್ ಫೋನ್ ಬಂದಿದ್ದು, ಮನೆಗೊಬ್ಬ ಕಲಾವಿದರು ಹುಟ್ಟಿಕೊಳ್ಳುತ್ತಿದ್ದಾರೆ. ಮೊಬೈಲ್, ರೇಡಿಯೋ, ಟಿವಿ ಹಾಗೂ ಸೋಶಿಯಲ್ ಮೀಡಿಯಾಗಳ ಮೂಲಕ ನಮ್ಮ ಕಲೆಯನ್ನು ಕೆಲವೇ ಕ್ಷಣಗಳಲ್ಲಿ ಪ್ರಪಂಚದಾದ್ಯಂತ ತಲುಪಿಸುವ ಸಾಧನಗಳು ನಮಗೆ ಸಿಕ್ಕಿವೆ ಎಂದು ತಿಳಿಸಿದರು.

ಅಭಿವ್ಯಕ್ತಿಗೊಳಿಸುವ ಸಾಧನಗಳು ಬದಲಾಗಿದ್ದರೂ, ಹಾಡು, ನೃತ್ಯ, ನಾಟಕ, ಬೀದಿ ನಾಟಕಗಳಂತಹ ಕಲೆಯ ಮೂಲ ಸತ್ವವು ಎಂದಿನಂತೆಯೇ ಇದೆ. ಮೊಬೈಲ್ ಮತ್ತು ಡಿಜಿಟಲ್ ಮಾಧ್ಯಮಗಳಿಂದಾಗಿ ಇಂದು ಹಳ್ಳಿಯ ಮೂಲೆಯಲ್ಲಿದ್ದ ಕಲಾವಿದನೊಬ್ಬ ಅಮೆರಿಕದವರೆಗೂ ಕ್ಷಣಮಾತ್ರದಲ್ಲಿ ಪ್ರಸಿದ್ಧಿ ಪಡೆಯಲು ಸಾಧ್ಯವಾಗಿದೆ ಎಂದು ಹೇಳಿದರು.

ಸರಕಾರ ಹಮ್ಮಿಕೊಳ್ಳುವ ಕಲಾ ಕಾರ್ಯಕ್ರಮಗಳು ಹೆಚ್ಚಿನ ಜನರನ್ನು ತಲುಪುವಂತಾಗಬೇಕು. ಕಲಾ ಕಾರ್ಯಕ್ರಮಗಳಲ್ಲಿ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ನಮ್ಮ ಪೂರ್ವಜರಿಂದ ಬಳುವಳಿಯಾಗಿ ಬಂದಿರುವ ಜಾನಪದ, ಡೊಳ್ಳು, ಕಂಸಾಳೆ ಸೇರಿದಂತೆ ಎಲ್ಲಾ ಸಾಂಪ್ರದಾಯಿಕ ಕಲಾ ಪ್ರಕಾರಗಳ ಮೂಲ ಗುಣವನ್ನು ಕಾಪಾಡಿಕೊಂಡು ಉಳಿಸಿಕೊಳ್ಳಬೇಕಿದೆ ಎಂದರು. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಿಜಯಕುಮಾರ ತೇಗಲತಿಪ್ಪಿ, ರಂಗಭೂಮಿ ಹಾಗೂ ಚಲನಚಿತ್ರ ಕಲಾವಿದ ಸುಭಾಷ ಬನ್ನಪಟ್ಟಿ, ಮಣ್ಣೂರ ಗಂಗಾ ಮಾತೋಶ್ರೀ ಅಂಗವಿಕಲರ ಸಂಘ ಕಾರ್ಯದರ್ಶಿ ವೆಂಕಟೇಶ ಮಾಲಿಪಾಟೀಲ, ಮನೀಷ್ ಕನ್ನಡ ದಿನ ಪತ್ರಿಕೆ ಸಂಪಾದಕ ರಾಜು ದೇಶಮುಕ, ಮಿನುಗುತಾರೆ ಮಹಿಳಾ ಕಲಾವಿದರ ಸಂಘ ಅಧ್ಯಕ್ಷೆ ಕಲ್ಪನಾ ಗೋಲ್ಡ್ ಸ್ಮಿತ್, ಆಕಾಶವಾಣಿ ಕಲಾವಿದ ಬಸಯ್ಯ ಗುತ್ತೇದಾರ, ಜಯಶ್ರೀ ವಿ. ಗುತ್ತೇದಾರ, ನಿವೃತ್ತ ಶಿಕ್ಷಕ ಸುಗಂಧಾಬಾಯಿ ವೀರಭದ್ರಪ್ಪ ಪಸಾರ, ಪಿ.ಆರ್. ಪಾಂಡು, ಮಲ್ಲಿಕಾರ್ಜುನ ಆರ್.ಜಾನೆ ಉಪಸ್ಥಿತರಿದ್ದರು.

# ಸಿವಿವಿ 111ನೇ ಜಯಂತಿ, ಕೆವಿ ಪಂಚಗಿರಿ ದತ್ತಿ ದಿನಾಚರಣೆ ಅದ್ದೂರಿ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ



ಜಿಲ್ಲೆಯ ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟಸೇವೆ ಸಲ್ಲಿಸುತ್ತಿರುವ ಕೆವಿ ಮತ್ತು ಪಂಚಗಿರಿ ವಿದ್ಯಾದತ್ತಿಗಳ 30ನೇ ದತ್ತಿ ದಿನಾಚರಣೆ ಹಾಗೂ ಸಿವಿವಿ ಅವರ 111ನೇ ಜಯಂತಿಯನ್ನು ನಗರದ ಕೆವಿ ಕ್ಯಾಂಪಸ್ ಒಳಾಂಗಣ ಕ್ರೀಡಾಂಗಣದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಕೆವಿ ನವೀನ್ ಕಿರಣ್, ಸಿವಿವಿ ಅವರು ಜಿಲ್ಲೆಯ ಪ್ರತಿಯೊಬ್ಬರಿಗೂ ಶಿಕ್ಷಣ ದೊರಕಬೇಕು ಎಂಬ ಸಂಕಲ್ಪದೊಂದಿಗೆ ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸಿದ್ದರು. ಅವರ ಆದರ್ಶವನ್ನು ಮುಂದುವರಿಸಿಕೊಂಡು ಟ್ರಸ್ಟ್‌ನ ಚಟುವಟಿಕೆಗಳನ್ನು ವರ್ಷದಿಂದ ವರ್ಷಕ್ಕೆ ಇನ್ನಷ್ಟು ವಿಸ್ತರಿಸುತ್ತಿದ್ದೇವೆ. ಮುಂದಿನ ವರ್ಷ ಈ ವರ್ಷಕ್ಕಿಂತಲೂ ಹೆಚ್ಚು ಅರ್ಥಪೂರ್ಣ ಹಾಗೂ ವೈಭವಯುತವಾಗಿ ದತ್ತಿ ದಿನಾಚರಣೆಯನ್ನು ಆಯೋಜಿಸಲಾಗುವುದು ಎಂದು ಹೇಳಿದರು.

ಟ್ರಸ್ಟ್ ಡೇ ಎಂದರೆ ಇಡೀ ಕೆವಿ ಕ್ಯಾಂಪಸ್‌ನಲ್ಲಿ ಒಂದು ತಿಂಗಳ ಹಬ್ಬದ ವಾತಾವರಣ ನಿರ್ಮಾಣವಾಗುತ್ತದೆ. ಕ್ರೀಡೆ, ಸಾಂಸ್ಕೃತಿಕ, ಸಮಾಜಮುಖಿ ಹಾಗೂ ಸೇವಾ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದೆ. ವಿಶೇಷವಾಗಿ ರಕ್ತದಾನ ಶಿಬಿರಕ್ಕೆ ಹೆಚ್ಚಿನ ಒತ್ತು ನೀಡುವುದು ನಮ್ಮ ಪ್ರಮುಖ ಗುರಿಯಾಗಿದೆ. ಸಮಾಜದ ಅಗತ್ಯಗಳಿಗೆ ಸ್ಪಂದಿಸುವ ಇಂತಹ ಕಾರ್ಯಕ್ರಮಗಳನ್ನು ಇನ್ನಷ್ಟು ಬಲಪಡಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಒಂದು ತಿಂಗಳ ಕಾಲ ನಡೆದ ವಿವಿಧ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ನಡೆಯಿತು. ದಾಖಲೆ ಪ್ರಮಾಣದ ರಕ್ತದಾನ ಶಿಬಿರ, ಸಾಧಕರಿಗೆ ಸನ್ಮಾನ, ಗುರುಕುಲ ಆಶ್ರಮದ ಮಕ್ಕಳಿಗೆ ವಸ್ತ್ರದಾನ, ನಿವೃತ್ತ ಸಿಬ್ಬಂದಿಗೆ ಗೌರವ ಹಾಗೂ ಸಿವಿವಿ ಅಭಿಮಾನಿಗಳಿಗೆ ಸನ್ಮಾನ ಸಲ್ಲಿಸುವ ಕಾರ್ಯಕ್ರಮಗಳು ಗಮನ ಸೆಳೆದವು.

ಸನ್ಮಾನ ಸ್ವೀಕರಿಸಿದ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಮಾತನಾಡಿ, ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಕಲಾವಿದರು, ಸಾಹಿತಿಗಳು, ಹೋರಾಟಗಾರರು, ವೈದ್ಯರು, ಶಿಕ್ಷಣ ತಜ್ಞರು ಹಾಗೂ ಸಮಾಜಸೇವಕರನ್ನು ಗುರುತಿಸಿ ಟ್ರಸ್ಟ್ ಡೇ ಸಂದರ್ಭದಲ್ಲಿ ಗೌರವಿಸುತ್ತಿರುವುದು ಕೆವಿ ನವೀನ್ ಕಿರಣ್ ಅವರ ದೊಡ್ಡಗುಣವಾಗಿದೆ. ಇಂತಹ ಗೌರವಗಳು ಸಾಧಕರಿಗೆ ಮತ್ತಷ್ಟು ಸೇವೆ ಮತ್ತು ಸಾಧನೆಗೆ ಪ್ರೇರಣೆಯಾಗುತ್ತವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವೈದ್ಯಕೀಯ ಸೇವೆಯಲ್ಲಿ ತೊಡಗಿರುವ ಡಾ. ಪ್ರಶಾಂತ್ ಮೂರ್ತಿ, ಹೆನ್ರಿ ಪ್ರಸನ್ನಕುಮಾರ್, ಬಿ.ಎಸ್. ವೆಂಕಟಾಚಲಪತಿ, ಗಂಜಿಗುಂಟೆ ಲಕ್ಷ್ಮೀದೇವಮ್ಮ, ವಿ.ಆರ್. ಚಂದ್ರಶೇಖರ್, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಪ್ರೊ.ಎನ್.ಚಂದ್ರಪ್ಪ, ವಿಜಯಾ ಜೇಮ್ಸ್ ಹಾಗೂ ಸಕಾಲ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಕೆಎಎಸ್ ಅಧಿಕಾರಿ ಬಿ.ಎನ್.ವರಪ್ರಸಾದ್ ರೆಡ್ಡಿ, ಹೆನ್ರಿ ಪ್ರಸನ್ನ ಕುಮಾರ್ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

# ಹೊಳಸಮುದ್ರದಲ್ಲಿ ಕಂಗೊಳಿಸಿದ ಆಷಾಢ ಜಾತ್ರಾ ಮಹೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ



ತಾಲೂಕಿನ ಪ್ರಸಿದ್ಧ ಆಧ್ಯಾತ್ಮಿಕ ಕೇಂದ್ರವಾದ ಹೊಳಸಮುದ್ರ ಗ್ರಾಮದಲ್ಲಿ ಶ್ರೀ ಹರಿನಾಥ ಮಹಾರಾಜರ ಸಂಜೀವಿನಿ ಸಮಾಧಿ ಮಂದಿರದಲ್ಲಿ ಆಷಾಢ ಜಾತ್ರಾ ಮಹೋತ್ಸವವು ಅತ್ಯಂತ ಶ್ರದ್ಧಾ–ಭಕ್ತಿ ಹಾಗೂ ಉಲ್ಲಾಸ–ಉತ್ಸಾಹಗಳಿಂದ ಶನಿವಾರ ವೈಭವವಾಗಿ ಜರುಗಿತು. ಸರ್ವಧರ್ಮ ಸಮನ್ವಯತೆಯ ಪ್ರತೀಕವಾಗಿರುವ ಈ ಮಂದಿರವು ಈ ಭಾಗದ ಭಕ್ತರ ಆರಾಧ್ಯ ದೈವವಾಗಿದೆ.

ಗುರು–ಶಿಷ್ಯರಾದ ಶ್ರೀ ಹರಿನಾಥ ಮಹಾರಾಜರು ಹಾಗೂ ಶ್ರೀ ಕೇಶವನಾಥ ಮಹಾರಾಜರ ದಿವ್ಯ ನೆನಪಿನಲ್ಲಿ ಪ್ರತಿವರ್ಷದಂತೆ ಈ ಬಾರಿಯೂ ಸಮಾಧಿ ಮಂದಿರದಲ್ಲಿ ವಿಶೇಷ ಅಭಿಷೇಕ, ಮಹಾಪೂಜೆ ಮತ್ತು ವಿವಿಧ ಧಾರ್ಮಿಕ ವಿಧಿ–ವಿಧಾನಗಳನ್ನು ನೆರವೇರಿಸಲಾಯಿತು. ತದನಂತರ ಭವ್ಯ ಉತ್ಸವ, ಭಜನೆ ಹಾಗೂ ಪುರಾಣ ಪ್ರವಚನ ಕಾರ್ಯಕ್ರಮಗಳು ಶ್ರದ್ಧಾಳುಗಳ ಮನಸೆಳೆದವು.

ಈ ವೇಳೆ ಮಾತನಾಡಿದ ಮುಖಂಡ ರಾಹುಲ ಪಾಟೀಲ ಗ್ರಾಮೀಣ ಭಾಗದ ಶ್ರದ್ಧಾಕೇಂದ್ರವಾದ ಹೊಳಸಮುದ್ರದ ಆಷಾಢ ಜಾತ್ರೆಯು ಮೂರೂ ರಾಜ್ಯಗಳ ಭಕ್ತರ ಸಾಮರಸ್ಯ ಮತ್ತು ಆಧ್ಯಾತ್ಮಿಕ ಮಿಲನಕ್ಕೆ ಸಾಕ್ಷಿಯಾಯಿತು ಎಂದು ಹೇಳಿದರು.

ಈ ಮಹೋತ್ಸವಕ್ಕೆ ಕೇವಲ ಕರ್ನಾಟಕ ಮಾತ್ರವಲ್ಲದೆ ನೆರೆಯ ಮಹಾರಾಷ್ಟ್ರ ಹಾಗೂ ತೆಲಂಗಾಣ ರಾಜ್ಯಗಳಿಂದಲೂ ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ದರ್ಶನ ಪಡೆದರು. ಮಹಾ ಅನ್ನದಾಸೋಹ: ಹುಣ್ಣಿಮೆಯ ಪವಿತ್ರ ದಿನದಂದು ಆಗಮಿಸಿದ ಸಕಲ ಭಕ್ತಾದಿಗಳಿಗೆ ರಾಮ ನೀಲಕಂಠರಾವ ಶಿಂಧೆ ಅವರ ವತಿಯಿಂದ ಭವ್ಯ ಅನ್ನಸಂತರ್ಪಣೆ (ಅನ್ನದಾಸೋಹ) ಸೇವೆ ನೆರವೇರಿತು. ಆಕರ್ಷಕ ಪುಷ್ಪಾಲಂಕಾರ: ಸಂಜೀವಿನಿ ಸಮಾಧಿ ಮಂದಿರಕ್ಕೆ ಸವಿತಾ ದಯಾನಂದ ಮಾನೆ (ಚಾಕುರ) ಅವರು ಮನಮೋಹಕ ಹೂಗಳ ಅಲಂಕಾರ ಮಾಡಿ ಭಕ್ತಿ ಸಮರ್ಪಿಸಿದರು.

# ಕಳಪೆ ಉಪಹಾರ: 21ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಅಸ್ವಸ್ಥ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು





ಒಳಬಳ್ಳಾರಿ ರಸ್ತೆಯಲ್ಲಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ನಿಲಯದ ವಿದ್ಯಾರ್ಥಿನಿಯರು ಕಳಪೆ ಮಟ್ಟದ ಉಪಹಾರ ಸೇವಿಸಿ ಫುಡ್ ಪಾಯಿಸನ್‌ಗೆ ಒಳಗಾಗಿ, ತಾಯಿ–ಮಕ್ಕಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಆಘಾತಕಾರಿ ಘಟನೆ ಗುರುವಾರ ನಡೆದಿದೆ.

ವಸತಿ ನಿಲಯದ ಸುಮಾರು 21ಕ್ಕೂ ಹೆಚ್ಚು ವಿದ್ಯಾರ್ಥಿಗಳು ಗುರುವಾರ ಬೆಳಿಗ್ಗೆ ಎಂದಿನಂತೆ ಉಪಹಾರವಾಗಿ ವೆಜ್ ಪಲಾವ್ ಸೇವಿಸಿದ್ದಾರೆ. ಆದರೆ, ಈ ಪಲಾವಿನಲ್ಲಿ ಬಾಳು ಹುಳಗಳು ಪತ್ತೆಯಾಗಿದ್ದು, ಇದನ್ನು ಸೇವಿಸಿದ ಕೆಲವೇ ಕ್ಷಣಗಳಲ್ಲಿ ವಿದ್ಯಾರ್ಥಿನಿಯರಿಗೆ ವಾಂತಿ, ತಲೆನೋವು ಹಾಗೂ ಹೊಟ್ಟೆನೋವು ಕಾಣಿಸಿಕೊಂಡಿದೆ. ವಸತಿ ಶಾಲೆಗಳಿಗೆ ಆಗಮಿಸಿದ ಪಾಲಕರು ತಮ್ಮ ಖಾಸಗಿ ವಾಹನಗಳಲ್ಲಿ ಅಸ್ವಸ್ಥಗೊಂಡ ವಿದ್ಯಾರ್ಥಿನಿಯರನ್ನು ನಗರದ ಸರ್ಕಾರಿ ತಾಯಿ–ಮಕ್ಕಳ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುತ್ತಿದ್ದಾರೆ.

ಕಲ್ಯಾಣ ಕರ್ನಾಟಕ ಅಭಿವೃದ್ಧಿಗಾಗಿ ಸರ್ಕಾರಗಳು ಕೋಟ್ಯಂತರ ರೂಪಾಯಿ ಅನುದಾನ ನೀಡುತ್ತಿವೆ ಮತ್ತು ಬಡ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ವಸತಿ ನಿಲಯಗಳನ್ನು ಆರಂಭಿಸಿವೆ. ಆದರೆ, ವಸತಿ ನಿಲಯದ ವಾರ್ಡನ್ ಹಾಗೂ ಸಂಬಂಧಪಟ್ಟ ಅಡುಗೆ ಸಿಬ್ಬಂದಿಯ ದಿವ್ಯ ನಿರ್ಲಕ್ಷ್ಯದಿಂದಾಗಿ ವಿದ್ಯಾರ್ಥಿಗಳ ಆರೋಗ್ಯದೊಂದಿಗೆ ಚೆಲ್ಲಾಟವಾಡಲಾಗುತ್ತಿದೆ ಎಂದು ಪಾಲಕರು ಮತ್ತು ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ ಘಟನೆ ಕಂಡು ಬಂತು.

ಈ ವಸತಿ ನಿಲಯದಲ್ಲಿ ಒಟ್ಟು 560 ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದು, ನಿತ್ಯವೂ ಕಳಪೆ ಮಟ್ಟದ ಆಹಾರ ಪೂರೈಸಲಾಗುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿವೆ. ಬಡ ಮತ್ತು ಮಧ್ಯಮ ವರ್ಗದ ಪಾಲಕರು ತಮ್ಮ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಕಷ್ಟಪಟ್ಟು ವಸತಿ ನಿಲಯಗಳಿಗೆ ಕಳುಹಿಸಿದರೆ, ಇಲ್ಲಿನ ಕಳಪೆ ಆಹಾರ ವ್ಯವಸ್ಥೆಯಿಂದಾಗಿ ಪಾಲಕರು ಆತಂಕಕ್ಕೀಡಾಗಿದ್ದಾರೆ.

ಘಟನಾ ಸ್ಥಳಕ್ಕೆ ಭೇಟಿ ನೀಡಿ ಅಸ್ವಸ್ಥ ವಿದ್ಯಾರ್ಥಿನಿಯರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿದ ಬಿಜೆಪಿ ಮುಖಂಡ ಕೆ. ಕರಿಯಪ್ಪ ಅವರು ಆಡಳಿತ ವ್ಯವಸ್ಥೆಯನ್ನು ತೀವ್ರವಾಗಿ ಖಂಡಿಸಿ ಮಾತನಾಡಿದವರು ಕಳಪೆ ಮಟ್ಟದ ಆಹಾರ ಪೂರೈಸಿದ್ದರಿಂದಲೇ ಈ ದುರ್ಘಟನೆ ಸಂಭವಿಸಿದೆ. ಶಾಸಕರಗಳ ಬೆಂಬಲಿಗರೆಂದೇ ಹೇಳಿಕೊಳ್ಳುವವರೇ ಗುತ್ತಿಗೆ (ಟೆಂಡರ್) ಪಡೆದು ಕಳಪೆ ಆಹಾರ ಪೂರೈಸುತ್ತಿದ್ದಾರೆ. ಕೂಡಲೇ ಸಂಬಂಧಪಟ್ಟ ವಾರ್ಡನ್ ಹಾಗೂ ಅಡುಗೆದಾರರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಮತ್ತು ಕಳಪೆ ಆಹಾರ ಪೂರೈಸುತ್ತಿರುವ ಟೆಂಡರ್ ದಾರರ ಲೈಸೆನ್ಸ್ ಅನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿದರು.

ಜೊತೆಗೆ ಜೆಡಿಎಸ್ ಯುವ ಮುಖಂಡರಾದ ಚಂದ್ರುಭೂಪಾಲ್ ನಾಡಗೌಡ ಬೇಟಿ ನೀಡಿ ವಿಧ್ಯಾರ್ಥಿಗಳಿಗೆ ಆರೋಗ್ಯ ವಿಚಾರಿಸಿ ಸಾಂತ್ವನ ನೀಡಿದರು.

ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಇನ್ನು ಮುಂದೆಯಾದರೂ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚೆತ್ತುಕೊಂಡು, ವಸತಿ ನಿಲಯಗಳಲ್ಲಿ ಗುಣಮಟ್ಟದ ಆಹಾರ ವಿತರಿಸುವಂತೆ ಜನಪ್ರತಿನಿಧಿಗಳು ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳತ್ತಾರಾ ಎಂದು ಕಾದು ನೋಡಬೇಕಾಗಿದೆ.

ಈ ಸಂಧರ್ಭದಲ್ಲಿ ಬಿಜೆಪಿ ನಗರ ಮಂಡಲ ಅಧ್ಯಕ್ಷರಾದ ಸಿದ್ಧರಾಮೇಶ ಮನ್ನಾಪುರ, ಮುತ್ತು ಬರ್ಸಿ, ಹಸೇನಪ್ಪ ಸೂಲಂಗಿ, ರಾಜು ಅಡವಿಭಾವಿ, ಕರವೇ ಮುಖಂಡರಾದ ಬಸವರಾಜ ಬಡಿಗೇರ್, ವೀರೇಶ ಬಾವಿಮನಿ, ಮಲ್ಲಿಕಾರ್ಜುನ ಕುನ್ನಟಗಿ, ರುದ್ರಗೌಡ, ಡಿವಿಪಿ ದುರ್ಗೇಶ್ ಕಲ್ಮಂಗಿ, ಹನುಮಂತ ಕರ್ನಿ, ವಿನೋದ್ ಗಿಣಿವಾರ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಗುರು ಚರಣದಲ್ಲಿ ಕೃತಜ್ಞತೆ ವ್ಯಕ್ತಪಡಿಸುವ ದಿನವೇ ಗುರುಪೂರ್ಣಿಮೆ : ಪೂಜ್ಯ ಡಾ. ಅಭಿನವ ಶ್ರೀ

• ಮಲ್ಲಮ್ಮ ನುಡಿ ವಾರ್ತೆಬಸವಕಲ್ಯಾಣ



ಗುರುಪೂರ್ಣಿಮೆ (ವ್ಯಾಸಪೂರ್ಣಿಮೆ) ಜೀವನದಲ್ಲಿ ಅತ್ಯಂತ ಮಹತ್ವದ ದಿನವಾಗಿದೆ. ಸಂಕಷ್ಟದ ಸಮಯದಲ್ಲಿ ಶಿಷ್ಯನಿಗೆ ನಿರಪೇಕ್ಷ ಪ್ರೀತಿಯಿಂದ ಆಶೀರ್ವದಿಸಿ, ಧೈರ್ಯ ತುಂಬಿ, ಜೀವನದ ಸಂಕಟಗಳಿಂದ ಪಾರು ಮಾಡುವವರು ಗುರುಗಳು. ಅಂತಹ ಸದ್ಗುರುಗಳ ಚರಣದಲ್ಲಿ ಕೃತಜ್ಞತಾಭಾವವನ್ನು ವ್ಯಕ್ತಪಡಿಸುವುದೇ ಗುರುಪೂರ್ಣಿಮೆಯ ವಿಶೇಷತೆಯಾಗಿದೆ ಎಂದು ತಿಪುರಾಂತಿನ ಗವಿಮಠದ ಪೂಜ್ಯ ಶ್ರೀ ಷ.ಬ್ರ. ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು ಹೇಳಿದರು.

ಇಲ್ಲಿನ ಗವಿಮಠದಲ್ಲಿ ನಡೆದ ಗುರುಪೂರ್ಣಿಮೆ ಮಹೋತ್ಸವದಲ್ಲಿ ಆಶೀರ್ವಚನ ನೀಡಿದ ಅವರು ಗುರುತತ್ವದ ಮಹತ್ವವನ್ನು ಮನಮುಟ್ಟುವಂತೆ ವಿವರಿಸಿದರು. ಇದೇ ಸಂದರ್ಭದಲ್ಲಿ ಕವಿ ವೀರಶೆಟ್ಟಿ ಎಂ. ಪಾಟೀಲ ರಚಿಸಿರುವ ಗುರುತತ್ವಕ್ಕೆ ಕಾವ್ಯನಮನ ಸಲ್ಲಿಸುವ "ಹೆಜ್ಜೆಗಳೇ ವಚನವಾದಾಗ" ಎಂಬ ಭಾವಪೂರ್ಣ ಕವನವನ್ನು ವಾಚಿಸಿ ಭಕ್ತರನ್ನು ಭಾವವಿಭೋರಗೊಳಿಸಿದರ.

ಕಲ್ಯಾಣನಾಡು ಜನಪದ ಕಲಾ ಬಳಗದ ದಿಲೀಪ್ ಕುಮಾರ್ ದೇಸಾಯಿ, ಸುರೇಖಾಂತ್ ಬಿರಾದಾರ್ ಹಾಗೂ ಸಂಗಡಿಗರು ಭಕ್ತಿಗೀತೆಗಳ ಗಾಯನವನ್ನು ನಡೆಸಿಕೊಟ್ಟರು.

ಶ್ರೀಶೈಲ ವಾತಡೆ ದಂಪತಿ ಗುರುಪಾದಪೂಜೆಯನ್ನು ನೆರವೇರಿಸಿದರು. ವೇ. ಸಿದ್ದಯ್ಯ ಸ್ವಾಮಿ ಧನ್ನೂರು (ಕೆ) ಅವರು ಪಾದಪೂಜೆಯ ನೆರವೇರಿಸಿದರು.

ಈ ಸಂದರ್ಭದಲ್ಲಿ ಶಾಂತ ವಿಜಯ ಪಾಟೀಲ, ಬಲವಂತ ಚಾಕುರೆ, ಬಸವರಾಜ ಶಾಸ್ತ್ರಿ, ವಿಟ್ಠಲ್ ಡೋಮೆ, ರಾಜಪ್ಪ ಹಲಂಗಿ, ಬಸವರಾಜ ಬಡೂರೆ, ಶ್ಯಾಮಸುಂದರ ಮೂಡಬಿ, ಬಸವಂತಪ್ಪ ಲವಾರೆ, ವೀರಣ್ಣ ಶೀಲವಂತ, ವೀರಶೆಟ್ಟಿ ಮಲಶೆಟ್ಟಿ, ಶರಣಬಸಪ್ಪ ಅಲಗೂಡೆ ಸೇರಿದಂತೆ ಅನೇಕ ಭಕ್ತರು ಉಪಸ್ಥಿತರಿದ್ದರು.

# ನನ್ನ ಸ್ವತ್ತು ನನ್ನ ಹಕ್ಕು ಅಭಿಯಾನಕ್ಕೆ ಚಾಲನೆ




• ಮಲ್ಲಮ್ಮ ನುಡಿ ವಾರ್ತೆ ಔರಾದ

ತಾಲೂಕಿನ ಸಂತಪೂರ ಗ್ರಾಮ ಪಂಚಾಯತಿ ವತಿಯಿಂದ ಗ್ರಾಮಸ್ಥರಿಗೆ ಆಸ್ತಿ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ ಇ–ಸ್ವತ್ತು ಪಡೆಯಲು ಅನುಕೂಲವಾಗುವ ಉದ್ದೇಶದಿಂದ "ನನ್ನ ಸ್ವತ್ತು ನನ್ನ ಹಕ್ಕು" ಅಭಿಯಾನಕ್ಕೆ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಕಿರಣ ಪಾಟೀಲ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ಮನೆಗಳ ಮಾಲೀಕರು ತಮ್ಮ ಆಸ್ತಿ ಸಂಬಂಧಿತ ದಾಖಲೆಗಳನ್ನು ಗ್ರಾಮ ಪಂಚಾಯತಿಗೆ ಸಲ್ಲಿಸಿ, ಆಸ್ತಿಗಳ ಡಿಜಿಟಲೀಕರಣ ಖಾತೆಯನ್ನು ಪಡೆಯಲು ತಿಳಿಸಿದರು.

ಇಂದು ಒಟ್ಟು 47 ಅರ್ಜಿಗಳು ಸ್ವೀಕರಿಸಲಾಗಿದ್ದು, 9 ಇ–ಸ್ವತ್ತು ದಾಖಲೆಗಳನ್ನು ವಿತರಿಸಲಾಗಿದೆ. ಉಳಿದ ಅರ್ಜಿಗಳ ಪರಿಶೀಲನೆ ಹಾಗೂ ಪ್ರಕ್ರಿಯೆ ಪ್ರಗತಿಯಲ್ಲಿದೆ. ಗ್ರಾಮಸ್ಥರು ಈ ಅಭಿಯಾನದ ಸದುಪಯೋಗ ಪಡೆದುಕೊಂಡು ತಮ್ಮ ಮನೆಗಳ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ ಇ–ಸ್ವತ್ತು ಖಾತೆ ಪಡೆಯುವಂತೆ ಮನವಿ ಮಾಡಿದರು.ತಾಲೂಕು ಪಂಚಾಯತ್ ಸಹಾಯಕ ನಿರ್ದೇಶಕರು (ಗ್ರಾ.ಉ) ಶಿವಕುಮಾರ ಘಾಟೆ ಅವರು ಮಾತನಾಡಿ,

"ನನ್ನ ಸ್ವತ್ತು ನನ್ನ ಹಕ್ಕು" ಈ ಮಹತ್ವಾಕಾಂಕ್ಷಿ ಅಭಿಯಾನದಲ್ಲಿ ಸಾರ್ವಜನಿಕರು ಪಾಲ್ಗೊಂಡು, ಅಗತ್ಯ ದಾಖಲೆಗಳನ್ನು ಗ್ರಾಮ ಪಂಚಾಯತಿಗೆ ಸಲ್ಲಿಸಿ ತಮ್ಮ ಆಸ್ತಿಯ ಇ–ಸ್ವತ್ತು ಮೂಲಕ ಡಿಜಿಟಲ್ ಖಾತೆ ಪಡೆಯಲು ಮನವಿ ಮಾಡಿದರು. ಈಗಾಗಲೇ ಗ್ರಾಮ ಪಂಚಾಯತಿ ಅಧಿಕಾರಿಗಳು ಗ್ರಾಮದ ಮನೆ–ಮನೆಗೆ ಭೇಟಿ ನೀಡಿ ಜಾಗೃತಿ ಮೂಡಿಸುತ್ತಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸಂತೋಷ ಪಾಟೀಲ್, ಅಮರ ಬಿರಾದಾರ್,

ಶಂಕರಸ್ವಾಮಿ, ರಾಜಕುಮಾರ್, ನಸೀರೊದ್ದಿನ್, ಗುಂಡಪ್ಪ, ಇರ್ಫಾನ್, ಕುಂದನಾಬಾಯಿ, ಶೋಭಾವತಿ, ಸುಮಿತ್ರಾದೇವಿ, ಗ್ರಾಮ ಪಂಚಾಯತಿ ಸಿಬ್ಬಂದಿಯವರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಶ್ರೀ ಹಡಪದ ಅಪ್ಪಣ್ಣನವರ 892 ನೆ ಜಯಂತ್ಯೋತ್ಸವ ರಕ್ತದಾನ ಶಿಬಿರ, ಪ್ರತಿಭಾ ಪುರಸ್ಕಾರ

• ಮಲ್ಲಮ್ಮ ನುಡಿ ವಾರ್ತೆಯಲಬುರ್ಗಾ



ಹಡಪದ ಅಪ್ಪಣ್ಣ ಅವರು 12ನೇ ಶತಮಾನದ ವಚನ ಚಳುವಳಿ ಮತ್ತು ಸಾಮಾಜಿಕ ಕ್ರಾಂತಿಯ ಹರಿಕಾರರಲ್ಲಿ ಒಬ್ಬರಾಗಿದ್ದರೆ, ಅಪ್ಪಣ್ಣನವರು, ಬಸವಣ್ಣನವರ ಬಾಲ್ಯದ ಒಡನಾಡಿಗಳಾಗಿದ್ದರು, ಇವರು ವಿಶ್ವದ ಪ್ರಪ್ರಥಮ ಪ್ರಜಾಪ್ರಭುತ್ವದ ಸಂಸತ್ತು ಎಂದೇ ಹೆಸರಾದ ಅನುಭವ ಮಂಟಪದಲ್ಲಿ ಬಸವಣ್ಣನವರಿಗೆ ಪ್ರಧಾನ ಕಾರ್ಯದರ್ಶಿಗಳಾಗಿದ್ದರು ಎಂದು ಗ್ರೇಡ 2 ತಹಶಿಲ್ದಾರ ಮಹಾಂತಗೌಡ ಪಾಟೀಲ್ ಅವರು ಪಟ್ಟಣದ ಬುದ್ದ ಬಸವ ಅಂಬೇಡ್ಕರ್ ಭವನದಲ್ಲಿ ಜರುಗಿದ ಶ್ರೀ ಹಡಪದ ಅಪ್ಪಣ್ಣನವೆರ 892 ನೇ ಜಯಂತ್ಯೋತ್ಸದಲ್ಲಿ ದೀಪ ಬೆಳಗಿಸಿ ಮಾತನಾಡಿದರು. ಹಡಪದ ಅಪ್ಪಣ್ಣನವರು 242 ವಚನಗಳನ್ನು ರಚನೆ ಮಾಡಿ,ಅವುಗಳಲ್ಲಿ ಕಾಯಕ,ಆತ್ಮಶುದ್ದಿ,ಸತ್ಯ ನಿಷ್ಠೆ, ಪ್ರಮಾಣಿಕತೆ,ಮತ್ತು ಮಾನವೀಯ ಮೌಲ್ಯಗಳನ್ನು ಅತ್ಯಂತ ಸರಳ ಹಾಗು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ ಎಂದು ಅವರ ಜೀವನ ಚರಿತ್ರೆ ಬಗ್ಗೆ ಉಪನ್ಯಾಸಕ ಬಸವರಾಜ ಕೊಂಡಗುರಿ ಶಿಕ್ಷಕರು ಉಪನ್ಯಾಸ ನೀಡಿದರು. ಜಯಂತಿ ಆಚರಣೆ ಅಂಗವಾಗಿ ರಕ್ತ ದಾನ ಶಿಬಿರ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ಸಾಗಿಬಂದವು. ಪ್ರಾರಂಬದಲ್ಲಿ ಪಟ್ಟಣದ ಶ್ರೀ ಮೋಗ್ಗಿ ಬಸವೇಶ್ವರ ದೇವಸ್ಥಾನದಿಂದ ಪ್ರಮುಖ ರಾಜ ಬೀದಿಯಲ್ಲಿ ಹಡಪದ ಅಪ್ಪಣ್ಣನವರ ಭಾವಚಿತ್ರ ಇರುವ ಮೇರವಣಿಗೆ 101 ಕುಂಭ ಕಳಸಗಳೊಂದಿಗೆ ಹಾಗು ಡೋಳ್ಳು,ಕೋಲಾಟ, ಸಕಲ ವಾದ್ಯಗಳೊಂದಿಗೆ ಮೇರವಣಿಗೆ ವೇದಿಕೆಗೆ ಸಾಗಿಬಂದಿತು. ಮೇರವಣಿಗೆ ಕಾರ್ಯಕ್ರಮಕ್ಕೆ ಜಿಲ್ಲಾ ಬಿಜೆಪಿ ಅಧ್ಯಕ್ಷ ನವಿನಕುಮಾರ ಗುಳಗಣ್ಣನವರು ಹಾಗು ಡಾ.ನಂದಿತಾ ದಾನರಡ್ಡಿ ಚಾಲನೆ ನೀಡಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು . ಶ್ರೀ ಹಡಪದ ಅಪ್ಪಣ್ಣ ಅವರು ಸಮಾಜದಲ್ಲಿ ಸಮಾನತೆ, ಶ್ರಮದ ಮಹತ್ವ ಹಾಗೂ ಮಾನವೀಯ ಮೌಲ್ಯಗಳನ್ನು ಸಾರಿದ ಮಹಾನ್ ಸಂತರು. ಅವರ ಆದರ್ಶಗಳನ್ನು ಯುವಜನತೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮುಖಂಡರಾದ ಶಿವಣ್ಣ ರಾಯರಡ್ಡಿ, ಆನಂದ ಉಳ್ಳಾಗಡ್ಡಿ, ಸಂಗಣ್ಣ ಟೆಂಗಿನಕಾಯಿ,ಹಾಗು ಸಮಾಜದ ಅಧ್ಯಕ್ಷ ವೀರಣ್ಣ ಹಡಪದ ಅವರು ಮಾತನಾಡಿ, ಸಮಾಜದ ಏಳಿಗೆಗಾಗಿ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು ಎಂದರು.

ಮುಖಂಡರಾದ ಶಿವಪ್ಪ ಶಾಸ್ತ್ರೀ,ಡಾ.ಶಿವನಗೌಡ ದಾನರಡ್ಡಿ,ಶರಣಪ್ಪ ಹಡಪದ,ರೇವಣೆಪ್ಪ ಹಿರೇಕುರಬರ,ಎಂ.ಎಫ್.ನಧಾಪ್,ಮುಖ್ಯಾಧಿಕಾರಿ ನಾಗೇಶ ,ಕಂದಾಯ ಇಲಾಖೆಯ ಹನುಮಂತಗೌಡ ಪಾಟೀಲ್,ಶಿಕ್ಷಕ ಶರಣಪ್ಪ ವೀರಾಪೂರ, ಹಾಗು ಬಾಳಪ್ಪ ಹಡಪದ, ಕೊಟ್ರೇಶ ಮೈನಳ್ಳಿ, ದೇವಪ್ಪ ಹಡಪದ,ಪ್ರಭುರಾಜ ಮಾರನಾಳ,ವೀರೇಶ ಹಡಪದ,ಆನಂದ ಹಡಪದ,ಶರಣಪ್ಪ ಮನ್ನಾಪೂರ ಮತ್ತು ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.ಶಿಕ್ಷಕ ದೇವಪ್ಪ ವಾಲ್ಮೀಕಿ ನಿರೂಪಿಸಿದರು

# ಗುರುವಿನ ಸ್ಥಾನ ಶ್ರೇಷ್ಠ ಸ್ಥಾನ: ಮುರುಗೇಂದ್ರ ದೇವರು

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ



ತಾಲೂಕಿನ ಮುದನಾಳ–ರಾಂಪುರ ಕ್ರಾಸ್ ಹತ್ತಿರ ಇರುವ ಸಂತ ಮಡಿವಾಳೇಶ್ವರರು ಪೂಜೆ ಹಾಗೂ ಅನುಷ್ಠಾನ ಮಾಡಿದ ಗವಿಯಲ್ಲಿ ಮಹಿಳಾ ಭಕ್ತರು ಭಕ್ತಿ ಭಾವದಿಂದ ಭಜನೆ ಮಾಡುತ್ತ ಗುರು ಪೂರ್ಣಿಮಾ ಕಾರ್ಯಕ್ರಮವನ್ನು ಆಚರಿಸಿದರು. ಮುಂದೆ ಗುರಿ ಹಿಂದೆ ಗುರು ಇದ್ದಾಗ ಮಾತ್ರ ಮಾನವ ಕುಲದ ಉದ್ಧಾರವಾಗಲು ಸಾಧ್ಯ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಋಷಿ ಮುನಿಗಳು ವೇದೋಪನಿಷತ್ತಿನ ಕಾಲದಿಂದಲೂ ಗುರುವಿನ ಮಾರ್ಗದರ್ಶನದಲ್ಲಿ ನಡೆದು ವಿಶಿಷ್ಟವಾದ ಮತ್ತು ಅತ್ಯಂತ ಶ್ರೀಮಂತವಾದ ಸಂಸ್ಕೃತಿ ಇಡೀ ಜಗತ್ತಿಗೆ ಕೊಟ್ಟಿರುವುದು ನಮ್ಮೆಲ್ಲರ ಹೆಮ್ಮೆಯ ಸಂಸ್ಕೃತಿ ನಮ್ಮದಾಗಿದೆ ಎಂದು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ, ಮುದನಾಳ ರಾಂಪುರ ಹಿರೇಮಠದ ಪೂಜ್ಯ ಶ್ರೀ108 ಮುರುಗೇಂದ್ರ ದೇವರು ತಿಳಿಸಿದರು. ಪ್ರತಿಯೊಬ್ಬರೂ ತಮ್ಮ ಜನ್ಮ ದಿನದಂದು ಗಿಡ ಮರಗಳನ್ನು ಬೆಳೆಸುವುದರ ಮೂಲಕ ಪ್ರಕೃತಿಯೊಂದಿಗೆ ಒಡನಾಟವನ್ನು ಉತ್ತಮಗೊಳಿಸಿಕೊಳ್ಳಲು ತಿಳಿಸಿದರು. ಪತ್ರಕರ್ತ ರಾಜಕುಮಾರ್ ಆರ್. ಹಡಪದ ಮಾತನಾಡಿ, ಪ್ರಕೃತಿಯ ಮಡಿಲಿನಲ್ಲಿರುವ ಈ ವಿಶಿಷ್ಟವಾದ ಗವಿ ಮುಂಬರುವ ದಿನಗಳಲ್ಲಿ ಬೆಳೆದು ಭಕ್ತಾದಿಗಳ ನೆರವಿನೊಂದಿಗೆ ಅತ್ಯಂತ ಹೆಮ್ಮೆಯ ತಾಣವಾಗಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಾಮಾಜಿಕ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ ರವರ 60ನೆಯ ಜನ್ಮದಿನವನ್ನು ಆಚರಣೆ ಸಸಿ ನೆಡುವುದರ ಮೂಲಕ ಆಚರಿಸಲಾಯಿತ್ತು. ರೇವಣಸಿದ್ದಪ್ಪ ಪಡಶೆಟ್ಟಿ ಕಾರ್ಯಕ್ರಮವನ್ನು ನಿರೂಪಿಸಿದರು. ಹಿರಿಯ ಪತ್ರಕರ್ತ ಶ್ರೀಮಂತರಾವ ಇಂಚೂ–ರೇ, ವೀರಶೆಟ್ಟಿ ಹಳ್ಳಿ ಐನಾಪುರ, ಈರಣ್ಣ ಚಿಂತಕೋಟಿ, ಗಣೇಶ ಇಟಗಾ ಸೇರಿದಂತೆ ಮುದ್ನಾಳ್ ರಾಂಪುರ ಗ್ರಾಮದ ಭಕ್ತಾದಿಗಳು ಉಪಸ್ಥಿತರಿದ್ದರು.

# ಇಂದು ಕಮಲನಗರದಲ್ಲಿ ತಾಲೂಕು ಮಟ್ಟದ ಪತ್ರಿಕಾ ದಿನಾಚರಣೆ

ಮಲ್ಲಮ್ಮನುಡಿ ವಾರ್ತೆಕಮಲನಗರ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಮಲನಗರ ತಾಲೂಕು ಘಟಕದ ವತಿಯಿಂದ ಜುಲೈ 31 ಶುಕ್ರವಾರ ರಂದು ಬೆಳಿಗ್ಗೆ 11 ಗಂಟೆಗೆ ಪಟ್ಟಣದ ಡಾ. ಚನ್ನಬಸವ ಪಟ್ಟದ್ದೇವರು ಪ್ರೌಢ ಶಾಲೆಯ ಸಭಾಂಗಣದಲ್ಲಿ 'ಪತ್ರಿಕಾ ದಿನಾಚರಣೆ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ತಾಲೂಕು ಘಟಕದ ಅಧ್ಯಕ್ಷ ಮನೋಜಕುಮಾರ ಹಿರೇಮಠ ತಿಳಿಸಿದ್ದಾರೆ.ದಿವ್ಯ ಸಾನಿಧ್ಯ ಹಾಗೂ ಉದ್ಘಾಟನೆ:ಕಾರ್ಯಕ್ರಮದಲ್ಲಿ ಬಸವಕಲ್ಯಾಣ ಮಂಟಪದ ಅಧ್ಯಕ್ಷರಾದ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು ದಿವ್ಯ ಸಾನಿಧ್ಯ ವಹಿಸಲಿದ್ದು, ಭಾಲ್ಕಿ ಹಿರೇಮಠ ಸಂಸ್ಥಾನ ಪೀಠಾಧಿಪತಿಗಳಾದ ಶ್ರೀ ಗುರುಬಸವ ಪಟ್ಟದ್ದೇವರು ನೇತೃತ್ವ ವಹಿಸಲಿದ್ದಾರೆ. ಔರಾದ್–ಕಮಲನಗರ ಕ್ಷೇತ್ರದ ಶಾಸಕರಾದ ಪ್ರಭು ಚವಾಣ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ತಾಲೂಕು ಘಟಕದ ಅಧ್ಯಕ್ಷ ಮನೋಜಕುಮಾರ ಹಿರೇಮಠ ಅಧ್ಯಕ್ಷತೆ ವಹಿಸಲಿದ್ದಾರೆ.ಪ್ರಮುಖ ಅತಿಥಿಗಳ ಉಪಸ್ಥಿತಿ:

ಮುಖ್ಯ ಅತಿಥಿಗಳಾಗಿ ಸಂಘದ ಜಿಲ್ಲಾಧ್ಯಕ್ಷ ಆನಂದ ದೇವಪ್ಪ, ಪ್ರಧಾನ ಕಾರ್ಯದರ್ಶಿ ಶಿವಕುಮಾರ ಸ್ವಾಮಿ, ಸೋನಾಳದ ಯುವ ಉದ್ಯಮಿ ವಿಜಯಕುಮಾರ ಬಿರಾದಾರ, ತಹಶೀಲ್ದಾರ್ ಅಮಿತಕುಮಾರ ಕುಲಕರ್ಣಿ, ತಾ.ಪಂ. ಇಒ ಹಣಮಂತರಾಯ ಕೌಟಗೆ, ಸಿಪಿಐ ಶ್ರೀಕಾಂತ ಅಲ್ಲಾಪುರೆ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸುನೀಲ ಕಸ್ತೂರೆ, ಶಿಕ್ಷಕರ ಸಂಘದ ಅಧ್ಯಕ್ಷ ವಿಜಯಕುಮಾರ ನುದನೂರೆ, ರೈತ ಸಂಘದ ಅಧ್ಯಕ್ಷ ಪ್ರವೀಣ ಕುಲಕರ್ಣಿ, ಆಡಳಿತ ವೈದ್ಯಾಧಿಕಾರಿ ಡಾ. ಶ್ರೀಮಂತ ಮಡಿವಾಳ ಹಾಗೂ ಗೌರವಾಧ್ಯಕ್ಷ ಡಾ. ಎಸ್.ಎಸ್. ಮೈನಾಳೆ ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ನಿರ್ವಹಣೆ:ಮಹಾದೇವ ಮಡಿವಾಳ ನಿರೂಪಣೆ ಮಾಡಲಿದ್ದು, ಕಸಾಪ ಅಧ್ಯಕ್ಷ ಪ್ರಶಾಂತ ಮಠಪತಿ ಸ್ವಾಗತಿಸಲಿದ್ದಾರೆ. ಆಡಳಿತಾಧಿಕಾರಿ ಚನ್ನಬಸವ ಘಾಳೆ ವಂದನಾರ್ಪಣೆ ನೆರವೇರಿಸಲಿದ್ದಾರೆ.

ಸಂಘದಿಂದ ಮನವಿ:ಕಮಲನಗರ ತಾಲೂಕು ಘಟಕದ ಪತ್ರಕರ್ತರ ಸಂಘದ ಪದಾಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ಸಂಘ–ಸಂಸ್ಥೆಗಳ ಪ್ರಮುಖರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ತಾಲೂಕು ಅಧ್ಯಕ್ಷ ಮನೋಜಕುಮಾರ ಹಿರೇಮಠ, ಪ್ರಧಾನ ಕಾರ್ಯದರ್ಶಿ ಮಹಾದೇವ ಬಿರಾದಾರ ಹಾಗೂ ಸಂಘದ ಪದಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಔರಾದನಲ್ಲಿ ವಿಜೃಂಭಣೆಯ ಪತ್ರಿಕಾ ದಿನಾಚರಣೆ





• ಮಲ್ಲಮ್ಮ ನುಡಿ ವಾರ್ತೆ ಔರಾದ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಔರಾದ್ ತಾಲೂಕು ಘಟಕದ ವತಿಯಿಂದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಪತ್ರಿಕಾ ದಿನಾಚರಣೆ ಹಾಗೂ ಸನ್ಮಾನ ಕಾರ್ಯಕ್ರಮವನ್ನು ಅತ್ಯಂತ ವಿಜೃಂಭಣೆಯಿಂದ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಪ್ರಭು ಚವ್ಹಾಣ, "ಪಟ್ಟಣದಲ್ಲಿ ಪತ್ರಕರ್ತರ ಬಹುದಿನಗಳ ಬೇಡಿಕೆಯಾದ ಪತ್ರಿಕಾ ಭವನ ನಿರ್ಮಾಣಕ್ಕೆ ಸರ್ಕಾರಿ ಹಾಗೂ ವೈಯಕ್ತಿಕ ಮಟ್ಟದಲ್ಲಿ ಅಗತ್ಯ ಸಹಕಾರ ನೀಡುವುದಾಗಿ" ಭರವಸೆ ನೀಡಿದರು. ಪತ್ರಕರ್ತರು ಯಾವುದೇ ಆಸೆ–ಆಮಿಷಗಳಿಗೆ ಒಳಗಾಗದೆ ಗ್ರಾಮೀಣ ಭಾಗದ ಸಮಸ್ಯೆಗಳನ್ನು ಬೆಳಕಿಗೆ ತರುವ ಜವಾಬ್ದಾರಿಯುತ ಕೆಲಸ ಮಾಡುತ್ತಿದ್ದಾರೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಪ್ರಮುಖ ಮುಖ್ಯಾಂಶಗಳು:

ಸಮಾಜದ ಕನ್ನಡಿ ಪತ್ರಿಕೋದ್ಯಮ: ಭಾಲ್ಕಿ ಹಿರೇಮಠ ಸಂಸ್ಥಾನದ ಶ್ರೀ ಮಹಾಲಿಂಗ ದೇವರು ದಿವ್ಯ ಸಾನಿಧ್ಯ ವಹಿಸಿ, "ಸತ್ಯ ಮತ್ತು ನ್ಯಾಯವನ್ನು ಎತ್ತಿಹಿಡಿಯುವಲ್ಲಿ ಪತ್ರಕರ್ತರ ಪಾತ್ರ ಅನನ್ಯ" ಎಂದು ಆಶೀರ್ವಚನ ನೀಡಿದರು.

ಬಾಬುರಾವ ಯಡ್ರಾಮಿಗೆ ಗೌರವ: ಮೂರು ದಶಕಗಳಿಗೂ ಅಧಿಕ ಕಾಲ ಪತ್ರಿಕಾ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಗುರುತಿಸಿ, ಹಿರಿಯ ಪತ್ರಕರ್ತರಾದ ಬಾಬುರಾವ ಯಡ್ರಾಮಿ ಅವರಿಗೆ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು ಅವರ ಅಮೃತ ಮಹೋತ್ಸವದ ಸ್ಮರಣಾರ್ಥ 'ರಾಜ್ಯ ಮಟ್ಟದ ಕನ್ನಡ ಜಂಗಮ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ನಂತರ ಅವರು ಪತ್ರಿಕೋದ್ಯಮದ ಸವಾಲುಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಆಡಳಿತ ಹಾಗೂ ಮಾಧ್ಯಮದ ಬಾಂಧವ್ಯ: ಡಿವೈಎಸ್ಪಿ ಬಲ್ಲಪ್ಪ ನಂದಗಾಂವೆ ಮಾತನಾಡಿ, ಸಮಾಜದಲ್ಲಿ ಶಾಂತಿ–ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆ ಹಾಗೂ ಮಾಧ್ಯಮಗಳ ನಡುವೆ ಉತ್ತಮ ಬಾಂಧವ್ಯ ಅಗತ್ಯ ಎಂದರು.

ಅಧ್ಯಕ್ಷತೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆನಂದ ದೇವಪ್ಪ ಅಧ್ಯಕ್ಷತೆ ವಹಿಸಿದ್ದರು. ತಾಲೂಕು ಅಧ್ಯಕ್ಷ ಶಿವಾನಂದ ಮೊಕ್ತೆದಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಗಮನಸೆಳೆದ ನಾಲಿಗೆಗೆ ರುಚಿ ನೀಡಿದ ಭೋಜನ ವ್ಯವಸ್ಥೆ:

ಕಾರ್ಯಕ್ರಮದ ಯಶಸ್ಸಿನ ಜೊತೆಗೆ ಆಯೋಜಕರು ಸಿದ್ಧಪಡಿಸಿದ್ದ ಸಾಂಪ್ರದಾಯಿಕ ಊಟದ ವ್ಯವಸ್ಥೆಯು ಎಲ್ಲರ ಗಮನ ಸೆಳೆಯಿತು. ಹುಗ್ಗಿ, ರೊಟ್ಟಿ, ಚಪಾತಿ, ಪಲ್ಯ, ಅನ್ನ–ಸಾಂಬಾರು, ಚನ್ನಿ ಹಾಗೂ ಮೊಸರು ಒಳಗೊಂಡ ವಿಶೇಷ ಭೋಜನವನ್ನು ಸಾರ್ವಜನಿಕರು ಮತ್ತು ಗಣ್ಯರು ಮುಕ್ತಕಂಠದಿಂದ ಶ್ಲಾಘಿಸಿದರು.


ಪ್ರಮುಖರ ಉಪಸ್ಥಿತಿ:

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಮಹೇಶ್ ಪಾಟೀಲ್, ಇಒ ಕಿರಣ ಪಾಟೀಲ್, ಸಹಾಯಕ ನಿರ್ದೇಶಕ ಶಿವಕುಮಾರ ಘಾಟೆ, ಸಂಘದ ಕಾರ್ಯದರ್ಶಿ ಅನಿಲಕುಮಾರ ದೇಶಮುಖ, ಹಿರಿಯ ಪತ್ರಕರ್ತರಾದ ಶರಣಪ್ಪ ಚಿಟಮೇ, ಚನ್ನಬಸವ ಮೊಕ್ತೆದಾರ್, ರತಿಕಾಂತ ಖರ–ಜಿಗೆ ಸೇರಿದಂತೆ ಅನೇಕ ಗಣ್ಯರು ಹಾಗೂ ಪತ್ರಕರ್ತರು ಭಾಗವಹಿಸಿದ್ದರು. ಮಲ್ಲಪ್ಪಗೌಡಾ ಸ್ವಾಗತಿಸಿದರು, ರಿಯಾಜಪಾಶಾ ಕೊಳ್ಳುರ್ ನಿರೂಪಣೆ ಮಾಡಿದರು,

ವಂದನಾರ್ಪಣೆಯನ್ನು ಮನ್ಮಥ ಸ್ವಾಮಿ ನೆರವೇರಿಸಿದರು.

# ಬುದ್ಧರ ತತ್ವ–ಸಿದ್ಧಾಂತಗಳ ಕುರಿತು ವಿಶೇಷ ಉಪನ್ಯಾಸ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ




ವಿಶ್ವಮನವ ಕಲಾ ಟ್ರಸ್ಟ್ (ರಿ.), ಇಬ್ರಾಹಿಂಪುರ ಗ್ರಾಮ ವತಿಯಿಂದ ಗುರುಪೌರ್ಣಿಮೆ ಪ್ರಯುಕ್ತ ಭಗವಾನ್ ಬುದ್ಧರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕಾರ್ಯಕ್ರಮಕ್ಕೆ ವಿಶ್ವಮನವ ಕಲಾ ಟ್ರಸ್ಟ್ ಅಧ್ಯಕ್ಷರಾದ ಎರಿಸ್ವಾಮಿ ಇಬ್ರಾಹಿಂಪುರ ಅವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ರಮೇಶ್ ವನ್ನಳ್ಳಿ, ಪದ್ಮಮ್ಮ ಹಾಗೂ ಲೋಕೇಶ್ ಬಸವಪುರ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದು, ಭಗವಾನ್ ಬುದ್ಧರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ನಮನ ಅರ್ಪಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶಿಕ್ಷಕರಾದ ಶ್ರೀ ಯೇಸು ಅವರು ಭಗವಾನ್ ಬುದ್ಧರ ಜೀವನ, ತತ್ವ, ಅಹಿಂಸೆ, ಕರುಣೆ, ಸಮಾನತೆ ಹಾಗೂ ಮಾನವೀಯ ಮೌಲ್ಯಗಳ ಕುರಿತು ಸವಿಸ್ತಾರ ಉಪನ್ಯಾಸ ನೀಡಿ, ಬುದ್ಧರ ಸಂದೇಶಗಳು ಇಂದಿನ ಸಮಾಜಕ್ಕೂ ಅತ್ಯಂತ ಪ್ರಸ್ತುತವಾಗಿವೆ ಎಂದು ತಿಳಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶ್ರೀ ಹುಲುಗಪ್ಪ ಎಸ್. ಎಂ. ಅವರು ಬುದ್ಧನ ಕುರಿತು ಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ವಿಜಯ್ ಅವರು ತಮಟೆ ವಾದನದ ಮೂಲಕ ಕಾರ್ಯಕ್ರಮದ ಮೆರುಗು ಹೆಚ್ಚಿಸಿದರು.

ಕಾರ್ಯಕ್ರಮವನ್ನು ಸುಂಕಪ್ಪ ಹೊಸಯರಗುಡಿ ಅವರು ಅಚ್ಚುಕಟ್ಟಾಗಿ ನಿರೂಪಿಸಿದರು. ಗ್ರಾಮದ ಮುಖಂಡರು, ಯುವಕರು, ಮಹಿಳೆಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಕೊನೆಯಲ್ಲಿ ಬುದ್ಧರ ಶಾಂತಿ, ಸೌಹಾರ್ದತೆ ಮತ್ತು ಮಾನವೀಯತೆಯ ಸಂದೇಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪದೊಂದಿಗೆ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

# ಡ್ರಗ್ ಬೇಡ ಬ್ರೋ ಸಂದೇಶ ಸಾರಿದ ಪೊಲೀಸ್ ಇಲಾಖೆ ಮಾದಕ ವ್ಯಸನದಿಂದ ದೂರವಿರಿ ಎಂದು ಯುವಜನತೆಗೆ ಕಿವಿಮಾತು

• **ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್**

: ಜು 30 : ಮಾದಕ ವಸ್ತುಗಳ ದುರುಪಯೋಗ ಹಾಗೂ ಅಕ್ರಮ ಸಾಗಾಣಿಕೆ ವಿರುದ್ಧ ಯುವಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಯಾದಗಿರಿ ಜಿಲ್ಲಾ ಪೊಲೀಸ್ ಮತ್ತು ಗುರುಮಠಕಲ್ ಪೊಲೀಸ್ ಠಾಣೆ ವತಿಯಿಂದ ಗುರುವಾರ ಪಟ್ಟಣದ ವಿಎನ್‌ಆರ್ ಗಾರ್ಡನ್‌ನಲ್ಲಿ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಲಾಯಿತು. ಬಳಿಕ 'ಡ್ರಗ್ ಬೇಡ ಬ್ರೋ' ಕರಪತ್ರವನ್ನು ಬಿಡುಗಡೆ ಮಾಡಿ, ಮಾದಕ ವ್ಯಸನದ ವಿರುದ್ಧ ಜಾಗೃತಿ ಮೂಡಿಸಲಾಯಿತು.ಅಧ್ಯಕ್ಷತೆ ವಹಿಸಿದ್ದ ಯಾದಗಿರಿ ಉಪ ವಿಭಾಗದ ಉಪ ಪೊಲೀಸ್ ಉಪಾಧೀಕ್ಷಕ ಎಂ. ಸುರೇಶ್ ಮಾತನಾಡಿ, ಮಾದಕ ವ್ಯಸನವು ಯಾವುದೇ ವಯಸ್ಸು, ಲಿಂಗ ಅಥವಾ ಸಾಮಾಜಿಕ ಹಿನ್ನೆಲೆಯ ಭೇದವಿಲ್ಲದೆ ಎಲ್ಲರನ್ನೂ ಬಲಿಯಾಗಿಸಬಲ್ಲ ಅಪಾಯಕಾರಿ ಪಿಡುಗಾಗಿದೆ. ವಿದ್ಯಾರ್ಥಿಗಳು ಹಾಗೂ ಯುವಕರು ವ್ಯಸನದಿಂದ ದೂರವಿರಬೇಕು. ಮಾದಕ ದ್ರವ್ಯಗಳಿಗೆ ಸಂಬಂಧಿಸಿದ ಅಪರಾಧಗಳಿಗೆ ಎನ್‌ಡಿಪಿಎಸ್ ಕಾಯ್ದೆಯಡಿ ಕಠಿಣ ಶಿಕ್ಷೆಗಳಿದ್ದು, ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳ ಉದಾಹರಣೆಗಳ ಮೂಲಕ ವಿದ್ಯಾರ್ಥಿಗಳಿಗೆ ಕಾನೂನು ಅರಿವು ಮೂಡಿಸಿದರು.ವಿಶೇಷ ಉಪನ್ಯಾಸ ನೀಡಿದ ನಾಗಭೂಷಣ ಶೆಟ್ಟಿ, ಮಾದಕ ದ್ರವ್ಯಗಳ ವಿಧಗಳು, ಅವುಗಳ ದೈಹಿಕ ಮತ್ತು ಮಾನಸಿಕ




ದುಷ್ಪರಿಣಾಮಗಳು, ಯುವಕರು ವ್ಯಸನಕ್ಕೆ ಒಳಗಾಗುವ ಕಾರಣಗಳು ಹಾಗೂ ಅದರಿಂದ ಹೊರಬರುವ ಮಾರ್ಗಗಳ ಕುರಿತು ವಿದ್ಯಾರ್ಥಿಗಳಿಗೆ ಚಿತ್ರ ಸಹಿತ ವಿವರಿಸಿದರು.

ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ನೀಲಾಂಬಿಕಾ ಮಣ್ಣೂರ್ ಮಾತನಾಡಿ, ಮಾದಕ ವ್ಯಸನವು ಮೆದುಳಿನ ಕಾರ್ಯಕ್ಷಮತೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ವ್ಯಸನದಿಂದ ಮುಕ್ತರಾಗಲು ಸರ್ಕಾರದ ಟೆಲಿ ಮಾನಸ 14416 ಸಹಾಯವಾಣಿಯನ್ನು ಬಳಸಿಕೊಳ್ಳಬಹುದು ಎಂದು ತಿಳಿಸಿದರು.

ಮುಖ್ಯಗುರು ಹಣಮಂತ್ ರಾವ್ ಗೊಂಗ್ಲೆ ಮಾತನಾಡಿ, ಜೀವನದ ಆರಂಭದಲ್ಲಿ ಮಾಡುವ ಒಂದು ತಪ್ಪು ಇಡೀ ಬದುಕನ್ನೇ ಹಾಳು ಮಾಡಬಹುದು. ಆದ್ದರಿಂದ ವಿದ್ಯಾರ್ಥಿಗಳು ಕೆಟ್ಟ ಚಟಗಳಿಂದ ದೂರವಿದ್ದು ಉತ್ತಮ ಜೀವನ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಎಪಿಡಿ ಸಂಸ್ಥೆಯ ತಾಲೂಕ ಸಂಯೋಜಕ ವಿರುಪಾಕ್ಷ ಮಾಲಿ ಪಾಟೀಲ್ ಮಾತಾನಾಡಿ ಪಟ್ಟಣದಲ್ಲಿ ಈಗಾಗಲೇ 89 ಜನ ಮಾನಸಿಕ ಅಸ್ವಸ್ಥತೆಯಿಂದ ಇರುವವರನ್ನು ಗುರುತಿಸಿದ್ದು ಅದರಲ್ಲಿ 28 ಜನ ಮಾದಕ ವಸ್ತುಗಳ ಬಳಕೆಯಿಂದ ಬಳಲುತ್ತಿದ್ದಾರೆ, ಮಾದಕ ವಸ್ತುಗಳ ಬಳಕೆ ಮಾನಸಿಕ ಅಸ್ವಸ್ಥತೆ ಕಾರಣವಾಗ ಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗ್ರೇಡ್–2 ತಹಶೀಲ್ದಾರ್ ನರಸಿಂಹಸ್ವಾಮಿ, ಶಿಕ್ಷಣ ಸಂಯೋಜಕ ರವೀಂದ್ರ, ಗುರುಮಠಕಲ್ ಪೊಲೀಸ್ ಠಾಣೆ–ಯ ವೃತ್ತ ಆರಕ್ಷಕ ನಿರೀಕ್ಷಕ ದೌಲತ್ ಎನ್. ಕುರಿ, ಸೈದಾಪುರ ಪಿಎಸ್‌ಐ ಭೀಮರಾಯ, ಗುರುಮಠಕಲ್ ಪಿಎಸ್‌ಐ ಅಲ್ಲಾಪಕ್ಷ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಶಿಕ್ಷಕರು ಹಾಗೂ ಗಣ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶ್ರೀಮತಿ ಜ್ಯೋತಿಲತಾ ತಡಿಬಿಡಿಮಠ ನಿರೂಪಿಸಿದರು.

ಫ್ರಂಟ್‌ಲೈನ್, ಪ್ರಗತಿ, ಎಸ್ ಎಲ್ ಟಿ, ಸರಕಾರಿ ಪದವಿ ಪೂರ್ವ ಸೇರಿದಂತೆ ವಿವಿಧ ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾದಕ ವ್ಯಸನದ ದುಷ್ಪರಿಣಾಮಗಳ ಕುರಿತು ಮಾಹಿತಿ ಪಡೆದರು,ಸಾಮೂಹಿಕವಾಗಿ ಮಾದಕ ವಸ್ತುಗಳಿಂದ ದೂರ ಇರುವದಾಗಿ ಪ್ರತಿಜ್ಞೆ ಮಾಡುವದರ ಮುಖಾಂತರ ಕಾರ್ಯಕ್ರಮ ಸಮಾರೋಪಗೊಂಡಿತು.

## ರೈತ ಸಂಘ ಮತ್ತು ಕಾರ್ಮಿಕ ಸೇನೆ ಉಪಾಧ್ಯಕ್ಷರಾಗಿ ಮಸ್ತೆಪ್ಪ ನಾಯ್ಕೋಡಿ ನೇಮಕ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಕಾರ್ಮಿಕ ಸೇನೆಯ ಜಿಲ್ಲಾ ಉಪಾಧ್ಯಕ್ಷರನ್ನಾಗಿ ಗುರುವಾರ ನಗರದ ಜಿಲ್ಲಾ ಕಚೇರಿಯಲ್ಲಿ ಮಸ್ತೆಪ್ಪ ನಾಯ್ಕೋಡಿ ಅವರನ್ನು ಆದೇಶ ಪತ್ರ ನೀಡಿ ನೇಮಕ ಮಾಡಲಾಯಿತು.

ಈ ಕುರಿತು ಆದೇಶ ಪತ್ರ ನೀಡಿ ಮಾತನಾಡಿದ ಜಿಲ್ಲಾಧ್ಯಕ್ಷ ಪೋಲಪ್ಪ ಎಮ್. ನಾರಾಯಣಪ್ಪೋರ್, ಅವರು ಸಾಮಾಜಿಕ ಸೇವೆಯನ್ನು ಪರಿಗಣಿಸಿ ಸಂಘದ ರಾಜ್ಯಾಧ್ಯಕ್ಷರ ಅಪ್ಪಣೆ ಮೇರೆಗೆ ಜಿಲ್ಲಾ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ರೈತರ ಸಂಪೂರ್ಣ ಹಿತ ಕಾಪಾಡುವ ಮೂಲಕ ಮತ್ತು ಸಂಘದ ತತ್ವ–ಸಿದ್ಧಾಂತಗಳಿಗೆ ರೈತರ ಏಳಿಗೆಗಾಗಿ ಬದ್ಧರಾಗಿ ಕೂಡಲೇ ಸಂಘ ಬಲಪಡಿಸುವ ಕಾರ್ಯಮಾಡಬೇಕು ಹಾಗೂ ಸಂಘದ ದೇಯೋದ್ದೇಶಗಳನ್ನು ಮತ್ತು ಕಾರ್ಯ ಚಟುವಟಿಕೆಗಳನ್ನು ಸಂಘದ ನಿಯಮಗಳಿಗೆ ಬದ್ಧರಾಗಿ ರೈತ ಸಮುದಾಯದ ಅಭಿವೃದ್ಧಿಗೆ ಕಾಯಾ, ವಾಚಾ, ಮನಸಾ ಸಂಘಟನೆಯಲ್ಲಿ ತೊಡಗಿಸಿಕೊಂಡು ರೈತ ಸಂಘ ಬಲಪಡಿಸಲು ಶ್ರಮಿಸಬೇಕು ಎಂದರು.ಈ ಸಂಧರ್ಭದಲ್ಲಿ, ವಡಿಗೇರಾ ತಾಲ್ಲೂಕು ಅಧ್ಯಕ್ಷ ಕಾಡಪ್ಪ ಹೂಗಾರ್, ಕಾರ್ಯದರ್ಶಿ ಚನ್ನಬಸವ,ಅನೀಲ್ ಕುಮಾರ್ ಬೊಂಬಾಯಿ ಸೇರಿದಂತೆ ಅನೇಕರು ಇದ್ದರು.

## ಕರ್ನಾಟಕ ಚಾಲಕರ ಒಕ್ಕೂಟದಿಂದ ಗುರುತಿನ ಚೀಟಿ, ಆಯ್ಕೆ ಪತ್ರ ವಿತರಣೆ



ಸೈದಾಪುರ : ಕರ್ನಾಟಕ ಚಾಲಕರ ಒಕ್ಕೂಟ ಸೈದಾಪುರ ಹೋಬಳಿ ಘಟಕದ ವತಿಯಿಂದ ಆಟೋ ಹಾಗೂ ಗೂಡ್ಸ್ ವಾಹನ ಚಾಲಕರಿಗೆ ಗುರುತಿನ ಚೀಟಿ ಮತ್ತು ನೂತನ ಪದಾಧಿಕಾರಿಗಳಿಗೆ ಆಯ್ಕೆ ಪತ್ರ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಒಕ್ಕೂಟದ ಜಿಲ್ಲಾಧ್ಯಕ್ಷ ಬಸ್ಸುಗೌಡ ಚಟ್ನಳ್ಳಿ ಅವರು ಮಾತನಾಡಿ ಚಾಲಕರ ಒಗ್ಗಟ್ಟು, ಕ್ಷೇಮಾಭಿವೃದ್ಧಿ ಹಾಗೂ ಅವರ ಹಕ್ಕುಗಳ ಹೋರಾಟದ ಕುರಿತು ಪ್ರಾಮುಖ್ಯವಾಗಿ ಬೆಳಕು ಚೆಲ್ಲಿದರು. ಚಾಲಕರ ವೃತ್ತಿ ಗೌರವವನ್ನು ಎತ್ತಿಹಿಡಿಯುವಲ್ಲಿ ಒಕ್ಕೂಟದ ಪಾತ್ರ ಹಿರಿದಾಗಿದ್ದು, ಪ್ರತಿಯೊಬ್ಬ ಚಾಲಕರೂ ಸಂಘಟಿತರಾಗಿ ಮುಂದೆ ಸಾಗಬೇಕೆಂದು ಅವರು ಕರೆ ನೀಡಿದರು.ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಸೈದಾಪುರ ಪೊಲೀಸ್ ಠಾಣೆಯ ಎಎಸ್‌ಐ ಅಯ್ಯಪ್ಪ ಆಗಮಿಸಿದ್ದರು. ಒಕ್ಕೂಟದ ರಾಜ್ಯ ಪ್ರಚಾರ ಸಮಿತಿಯ ಉಪಾಧ್ಯಕ್ಷ ಮಲ್ಲಣ್ಣಗೌಡ, ಆಟೋ ಘಟಕದ ಅಧ್ಯಕ್ಷ ಸಾಂಗ್ಲಿಯಾನ, ಶಹಾಪುರ ತಾಲೂಕು ಅಧ್ಯಕ್ಷ ಹೊನ್ನಪ್ಪ ಜಂಗ್ಲಿ, ಗೋಗಿ ಗ್ರಾಮ ಘಟಕದ ಅಧ್ಯಕ್ಷ ತಿರುಪತಿ ಹಾಗೂ ಕಡೆಚೂರು ಗ್ರಾಮ ಘಟಕದ ಅಧ್ಯಕ್ಷ ರಾಜು ಮಡಿವಾಳ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸೈದಾಪುರ ಹೋಬಳಿ ಘಟಕದ ಅಧ್ಯಕ್ಷ ಸನ್ವೀರ ನಾಯಕ ಹಾಗೂ ಗೌರವಾಧ್ಯಕ್ಷ ಶರಣಗೌಡ ಹುಣಸೆಮರ ಅವರಿಗೆ ನೂತನ ಜವಾಬ್ದಾರಿಯ ಆಯ್ಕೆ ಪತ್ರಗಳನ್ನು ನೀಡಿ ಗೌರವಿಸಲಾಯಿತು. ಇದರ ಜೊತೆಗೆ ಸ್ಥಳೀಯ ಆಟೋ ಮತ್ತು ಗೂಡ್ಸ್ ಚಾಲಕರಿಗೆ ಒಕ್ಕೂಟದ ಅಧಿಕೃತ ಗುರುತಿನ ಚೀಟಿಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಒಕ್ಕೂಟದ ವಿವಿಧ ಮಟ್ಟದ ಪದಾಧಿಕಾರಿಗಳು ಹಾಗೂ ಸದಸ್ಯರು ಸೇರಿದಂತೆ ಇನ್ನಿ

## ಶಾಲಾ ಮಕ್ಕಳಿಗೆ ನೀಡುವ ಮೊಟ್ಟೆಯ ದರ ಪರಿಷ್ಕರಿಸುವಂತೆ ರಮೇಶ ಚವ್ಹಾಣ ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ವಿತರಿಸಲಾಗುತ್ತಿರುವ ಮೊಟ್ಟೆಗೆ ಸರ್ಕಾರ ನೀಡುತ್ತಿರುವ ಅನುದಾನವನ್ನು ಪ್ರಸ್ತುತ ಮಾರುಕಟ್ಟೆ ದರಕ್ಕೆ ಅನುಗುಣವಾಗಿ ಪರಿಷ್ಕರಿಸಿ, ಶಿಕ್ಷಕರ ಮೇಲಿನ ಆರ್ಥಿಕ ಹೊರೆ ನಿವಾರಿಸಲು ರಾಜ್ಯ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಮಾಜಿ ಲೋಕಸಭಾ ಅಭ್ಯರ್ಥಿ ರಮೇಶ ಜೆ. ಚವ್ಹಾಣ ಆಗ್ರಹಿಸಿದರು.

ಪ್ರಸ್ತುತ ಸರ್ಕಾರವು ಪ್ರತಿ ಮೊಟ್ಟೆಗೆ ?5 ಅನುದಾನ ನಿಗದಿಪಡಿಸಿದ್ದು, ಆದರೆ ಮಾರುಕಟ್ಟೆಯಲ್ಲಿ ಒಂದು ಮೊಟ್ಟೆಯ ಬೆಲೆ ಸುಮಾರು ?9 ಆಗಿರುವುದರಿಂದ ಪ್ರತಿ ಮೊಟ್ಟೆಗೆ ?4ರಷ್ಟು ಹೆಚ್ಚುವರಿ ವೆಚ್ಚವನ್ನು ಶಿಕ್ಷಕರು ಅಥವಾ ಶಾಲೆಯವರು ಭರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅವರು ತಿಳಿಸಿದರು.

ಇದರಿಂದ ಶಿಕ್ಷಕರ ಮೇಲೆ ಅನಗತ್ಯ ಆರ್ಥಿಕ ಹೊರೆ ಬೀಳುತ್ತಿದ್ದು, ಮಧ್ಯಾಹ್ನದ ಬಿಸಿಯೂಟ ಯೋಜನೆಯ ಸಮರ್ಪಕ ಅನುಷ್ಠಾನಕ್ಕೂ ತೊಂದರೆ ಉಂಟಾಗುತ್ತಿದೆ. ಆದ್ದರಿಂದ ಸರ್ಕಾರವು ಪ್ರಸ್ತುತ ಮಾರುಕಟ್ಟೆ ದರಕ್ಕೆ ಅನುಗುಣವಾಗಿ ಮೊಟ್ಟೆಯ ಅನುದಾನವನ್ನು ಪರಿಷ್ಕರಿಸಿ, ಶಿಕ್ಷಕರಿಗೆ ಯಾವುದೇ ಆರ್ಥಿಕ ನಷ್ಟವಾಗದಂತೆ ಶೀಘ್ರ ನಿರ್ಧಾರ ಕೈಗೊಂಡು ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ರಮೇಶ ಜೆ. ಚವ್ಹಾಣ ಒತ್ತಾಯಿಸಿದರು.

## ಡಾ. ಸುಲೋಚನಾ ಮತ್ತು ಕಿರಣ್ ಕುಮಾರ್ ರನ್ನು ಕರ್ತವ್ಯದಿಂದ ವಜಾಗೊಳಿಸುವಂತೆ ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು**

ಪಟ್ಟಣದ ಸರ್ಕಾರಿ ಸಮುದಾಯಕ್ಕೆ ಜಿಲ್ಲಾ ತನಿಖಾಧಿಕಾರಿಗಳಾದ ಡಾ ರಾಧಿಕಾ ಅವರ ನೇತೃತ್ವದ ತಂಡ ಬುದುವಾರ ಭೇಟಿ ನೀಡಿ ಪರಿಶೀಲನೆ ಮತ್ತು ಸಿಬ್ಬಂದಗಳೊಂದಿಗೆ ಸಮಾಲೋಚನೆ ನಡೆಸಿದರು ನಂತರ ಪಟ್ಟಣದ ದಲಿತ ಸಂಘರ್ಷ ಸಮಿತಿಯ ತಾಲ್ಲೂಕು ಸಂಚಾಲಕ ಟಿ ಹನುಮಂತಪ್ಪ ಮಾತನಾಡಿ ಇಲ್ಲಿನ ಸಿಬ್ಬಂದಿಯ ವರ್ತನೆ ಬಗ್ಗೆ ತೀವ್ರವಾಗಿ ಖಂಡಿಸಿದರು ಇಲ್ಲಿನ ಮಹಿಳಾ ವೈದ್ಯರಾದ

ಸುಲೋಚನಾ ಅವರು ಸರಿಯಾದ ಸಮಯಕ್ಕೆ ಬಾರದಿರುವುದು ಪ್ರತಿ ದಿನ ಬಡ ರೋಗಿಗಳ ಇವರ ಕಾಯುವಿಕೆಯನ್ನು ಬೇಸತ್ತು ಹೋಗಿದ್ದಾರೆ. ಎಂದರು ಹಾಗೂ ಸರ್ಕಾರಿಯ ದೃಢೀಕರಣ, ವೃದ್ಧಾಪ ವೇತನ ಸಹಿಗಾಗಿ ಅಂಗವಿಕಲರ ಮತ್ತು ಇತರ ಹಣದ ಬೇಡಿಕೆಯನ್ನು ನೀಡುತ್ತಾರೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು ಇಂತಹ ವೈದ್ಯರನ್ನು ಕರ್ತವ್ಯದಿಂದ ವಜಾ ಗೊಳಿಸಬೇಕೆಂದು ಆಗ್ರಹಿಸಿದರು ಮತ್ತೊಬ್ಬ ಸ್ಟಾಪ್ ನರ್ಸ್ ಸಿಬ್ಬಂದಿಯಾದ ಕಿರಣ್ ಕುಮಾರ್ ಇವರು ಅಸಭ್ಯ ವರ್ತನೆ ಹಾಗೂ ಬೇಜವಾಬ್ದಾರಿತನದಿಂದ ರೋಗಿಗಳಿಗೆ ಏರು ಧ್ವನಿಯಲ್ಲಿ ಗದರಿಸುತ್ತಾರೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ



ಸಂಚಾಲಕರಾದ ಗುಡಿಯರ್ ಮಲ್ಲಿಕಾರ್ಜುನ ರವರು ಮಾತನಾಡಿದರು ಹಾಗೂ ಇಲ್ಲಿನ ಬಡ ರೋಗಿಗಳಿಗೆ ಅನುಕೂಲವಾಗುವಂತೆ ಡಾಕ್ಟರ್ ಸುಲೋಚನಾ ಮತ್ತು ಕಿರಣ್ ಕುಮಾರ್ ಇವರನ್ನು ಕರ್ತವ್ಯದಿಂದ ವಜಾ ಗೊಳಿಸುವಂತೆ ಆಗ್ರಹಿಸಿ ಮನವಿ ಸಲ್ಲಿಸಿದರು. ದಲಿತ ಮುಖಂಡರಾದ ಪಿ ಚಂದ್ರಶೇಖರ್ ಮಾತನಾಡಿ

ಅತಿ ಶೀಘ್ರದಲ್ಲಿ ಇವರನ್ನು ಇವರ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಸರ್ಕಾರಿ ಸಮುದಾಯದ ಆರೋಗ್ಯ ಕೇಂದ್ರ ಎದುರುಗಡೆ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು ಈ ಸಂದರ್ಭದಲ್ಲಿ ಡಾಕ್ಟರ್ ದೇವೇಂದ್ರಪ್ಪ ಶಿವಪ್ಪ ಸೀನಿಯರ್ ಹೆಲ್ತ್ ಇನ್ಸ್ಪೆಕ್ಟರ್ ಮತ್ತು ಇಲ್ಲಿನ ವೈದ್ಯಾಧಿಕಾರಿಯಾದ ಭಾಷಾ ಮತ್ತು ಇತರರು ಇದ್ದರು.

## ಕೊಪ್ಪಳ ತಾಲೂಕಿನ 38 ಗ್ರಾಮ ಪಂಚಾಯತಿಗಳಲ್ಲಿ ಸಹಾಯ ಮತ್ತು ಸೌಲಭ್ಯ ಕೇಂದ್ರ ಸ್ಥಾಪನೆ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಜಿಲ್ಲಾ ಪಂಚಾಯತ್ ಕೊಪ್ಪಳ ಹಾಗೂ ತಾಲೂಕು ಪಂಚಾಯತ್ ಕೊಪ್ಪಳ ಇವುಗಳ ಸಹಯೋಗದೊಂದಿಗೆ ಕೊಪ್ಪಳ ತಾಲೂಕಿನ ಒಟ್ಟು 38 ಗ್ರಾಮ ಪಂಚಾಯತಿಗಳಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ 'ಸಹಾಯ ಮತ್ತು ಸೌಲಭ್ಯ ಕೇಂದ್ರ' (ಹೆಲ್ಪ್ & ಫೆಸಿಲಿಟೇಷನ್ ಸೆಂಟರ್ – ಹೆಚ್.ಎಫ್.ಸಿ) ಗಳನ್ನು ಯಶಸ್ವಿಯಾಗಿ ಸ್ಥಾಪಿಸಲಾಗಿದೆ.



ಗ್ರಾಮೀಣ ಭಾಗದ ಜನರಿಗೆ ವಿವಿಧ ಸರ್ಕಾರಿ ಸೇವೆಗಳು, ಶಾಶ್ವತ ವಾಸಸ್ಥಳ ಪ್ರಮಾಣ ಪತ್ರ ಸೇರಿದಂತೆ ಹಲವು ಸೌಲಭ್ಯಗಳು ಮತ್ತು ಅರ್ಜಿ ಸಲ್ಲಿಕೆ ಪ್ರಕ್ರಿಯೆಗಳು ಸುಲಭವಾಗಿ ದೊರೆಯುವಂತೆ ಮಾಡಲು ಈ ಕೇಂದ್ರಗಳನ್ನು ಕಾರ್ಯಾರಂಭಗೊಳಿಸಲಾಗಿದೆ.

*ಸಹಾಯವಾಣಿ ಸೌಲಭ್ಯ:* ಸಾರ್ವಜನಿಕರ ಕುಂದುಕೊರತೆಗಳು ಹಾಗೂ ಮಾಹಿತಿಗಾಗಿ ಪಂಚಮಿತ್ರ ಸಹಾಯವಾಣಿ ಸಂಖ್ಯೆ: 8277506000 ಅನ್ನು ಪ್ರಕಟಿಸಲಾಗಿದೆ.

*ಸೇವೆಗಳ ಲಭ್ಯತೆ:* ಗ್ರಾಮೀಣ ನಾಗರಿಕರು ತಮಗೆ ಬೇಕಾದ ಸೌಲಭ್ಯಗಳಿಗೆ ಪಂಚಾಯತ್ ಮಟ್ಟದಲ್ಲೇ ನೇರವಾಗಿ ಅರ್ಜಿ ಸಲ್ಲಿಸಲು ವ್ಯವಸ್ಥೆ ಕಲ್ಪಿಸಲಾಗಿದೆ.*ಹೆಚ್.ಎಫ್.ಸಿ ಅಳವಡಿಸಲಾದ ಪ್ರಮುಖ ಗ್ರಾಮ ಪಂಚಾಯತಿಗಳು:* ಅಗಳಕೇರಾ, ಅಳವಂಡಿ, ಬಹದ್ದೂರಬಂಡಿ, ಬಂಡಿಹರ್ಲಾಪುರ, ಬೆಟಗೇರಿ, ಬೇವಿನಹಳ್ಳಿ, ಬಿಸರಳ್ಳಿ, ಬೋಚನಹಳ್ಳಿ, ಬೂದಗುಂಪಾ, ಚಿಕ್ಕಬೊಮ್ಮನಾಳ, ಗಿಣಿಗೇರಾ, ಗೊಂಡಬಾಳ, ಗುಳದಳ್ಳಿ, ಹಲಗೇರಿ, ಹಾಲವರ್ತಿ, ಹಾಸಗಲ್, ಹಟ್ಟಿ, ಹಿರೇಬಗನಾಳ, ಹಿರೇಸಿಂಧೋಗಿ, ಹಿಟ್ನಾಳ, ಹೊಸಳ್ಳಿ, ಹುಲಿಗಿ, ಇಂದರಗಿ, ಇರಕಲ್ಲಗಡಾ, ಕಲಕೇರಾ, ಕಲ್ಲತಾವರಗೇರಾ, ಕಾತರಕಿ–ಗುಡ್ಲಾನೂರು, ಕವಲೂರು, ಕಿನ್ನಾಳ, ಕೋಳೂರು, ಕುಣಿಕೇರಿ, ಲೇಬಗೇರಿ, ಮಾದಿನೂರು, ಮತ್ತೂರು, ಮುನಿರಾಬಾದ್ ಡ್ಯಾಂ, ಓಜನಹಳ್ಳಿ, ಶಿವಪುರ ಮತ್ತು ವನಬಳ್ಳಾರಿ ಸೇರಿದಂತೆ ತಾಲೂಕಿನಾದ್ಯಂತ ಹೆಚ್. ಎಫ್.ಸಿ ಕೇಂದ್ರಗಳನ್ನು ತೆರೆಯಲಾಗಿದೆ.ಸಹಾಯ ಮತ್ತು ಸೌಲಭ್ಯ ಕೇಂದ್ರಗಳ ಸ್ಥಾಪನೆಯಿಂದಾಗಿ ಗ್ರಾಮೀಣ ಜನರು ವಿವಿಧ ಪ್ರಮಾಣ ಪತ್ರಗಳು ಹಾಗೂ ಇತರೆ ಸೇವೆಗಳಿಗಾಗಿ ದೂರದ ತಾಲೂಕು ಕೇಂದ್ರಗಳಿಗೆ ಅಲೆಯುವುದು ತಪ್ಪಲಿದ್ದು, ಪಂಚಾಯತ್ ಮಟ್ಟದಲ್ಲೇ ತ್ವರಿತ ಸೇವೆ ಸಿಗಲಿದೆ ಎಂದು ಕೊಪ್ಪಳ ತಾಲ್ಲೂಕು ಪಂಚಾಯತ ಇಓ ದುಂಡಪ್ಪ ತುರಾದಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಡಿಎಚ್‌ಒ ಡಾ. ನಂದಿತಾ ಧಿಡೀರ್ ಭೇಟಿ, ಪರಿಶೀಲನೆ

• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ನೂತನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ನಂದಿತಾ ಅವರು ತಾಲೂಕಿನ ಸಾರ್ವಜನಿಕ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ, ಆಸ್ಪತ್ರೆಯ ಸ್ಥಿತಿಗತಿಗಳನ್ನು ಪರಿಶೀಲಿಸಿದರು. ಈ ವೇಳೆ ಕಂಡುಬಂದ ಲೋಪದೋಷಗಳನ್ನು ಕೂಡಲೇ ಸರಿಪಡಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.ಬಳಿಕ ಆಸ್ಪತ್ರೆಯ ಸಭಾಂಗಣದಲ್ಲಿ ವಿವಿಧ ಸಂಘಟನೆಗಳಿಂದ ನಡೆದ ಸನ್ಮಾನ ಸ್ವೀಕರಿಸಿ, ಇಲಾಖೆಯ ವಿವಿಧ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಆರೋಗ್ಯ ಕಾರ್ಯಕ್ರಮಗಳ



ಪ್ರಗತಿ ಪರಿಶೀಲನಾ ಸಭೆ ನಡೆಸಿ, ಸಾರ್ವಜನಿಕರಿಗೆ ಸಿಗುತ್ತಿರುವ ವೈದ್ಯಕೀಯ ಸೇವೆಗಳ ಗುಣಮಟ್ಟವನ್ನು ಪರಿಶೀಲಿಸಿ, ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಸುಧಾರಣೆಗಳ ಕುರಿತು ಸಿಬ್ಬಂದಿಗೆ ಮಾರ್ಗದರ್ಶನ ನೀಡಿದರು.

ಸಭೆಯಲ್ಲಿ ಜಿಲ್ಲಾ ಮಲೇರಿಯಾ ಅಧಿಕಾರಿ ಡಾ. ಚಂದ್ರಶೇಖರಯ್ಯ, ಕ್ಷಯರೋಗ ನಿಯಂತ್ರಣಾಧಿಕಾರಿ ಡಾ. ಯಶೋದಾ, ಕುಟುಂಬ ಕಲ್ಯಾಣ ಅಧಿಕಾರಿ ಡಾ. ಶಿವುಕುಮಾರ ನಾರ, ತಾಲೂಕಾ ಆರೋಗ್ಯಾಧಿಕಾರಿ ಡಾ. ಅಯ್ಯನಗೌಡ ಹಾಗೂ ವಿವಿಧ ವಿಭಾಗಗಳ ವೈದ್ಯರು, ಮೇಲ್ವಿಚಾರಕರು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ಸಮಾಜದಲ್ಲಿ ಶಿಕ್ಷಕನ ಪಾತ್ರ ಅಮೂಲ್ಯ: ಡಾ. ಶರಣಬಸವರಾಜ ಪಾಟೀಲ್

• ಮಲ್ಲಮ್ಮ ನುಡಿ ವಾರ್ತೆಮುದಗಲ್



ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಶಿಕ್ಷಕನ ಪಾತ್ರ ಸಮಾಜದಲ್ಲಿ ಅತ್ಯಾಮೂಲ್ಯವಾಗಿದೆ ಎಂದು ನಾಗಲಾಪೂರು ವಿಎಸ್ಎಸ್ಎನ್ ಅಧ್ಯಕ್ಷ ಡಾ. ಶರಣಬಸವರಾಜ ಪಾಟೀಲ್ ವ್ಯಾಕರನಾಳ ಹೇಳಿದರು.

ಪಟ್ಟಣದ ಹಳೇಪೇಟೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮುಖ್ಯಶಿಕ್ಷಕರಾಗಿ ಬಡ್ತಿಯಾದ ವೀರಯ್ಯ ಗೆಜ್ಜಲಗಟ್ಟಿಮಠರ ಸ್ವಾಗತ ಸಮಾರಂಭ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಕರು ವಿದ್ಯಾರ್ಥಿಗಳಿಗೆ ಪಠ್ಯಜ್ಞಾನದ ಜತೆಗೆ ಬದುಕಿನ ಮೌಲ್ಯಗಳನ್ನು ಕಲಿಸುತ್ತಾರೆ. ಮಕ್ಕಳನ್ನು ದೇಶದ ಪ್ರಬುದ್ಧ ನಾಗರೀಕರನ್ನಾಗಿಸಲು ಶ್ರಮಿಸುತ್ತಾರೆ. ಉತ್ತಮ ಸಮಾಜ ನಿರ್ಮಾಣದಲ್ಲಿ ಶಿಕ್ಷಕನ ಪಾತ್ರ ಮುಖ್ಯವಾಗಿದೆ. ನಾನು ವೀರಯ್ಯ ಗೆಜ್ಜಲಗಟ್ಟಿಮಠ ಶಿಕ್ಷಕರ ಶಿಷ್ಯನಾಗಿದ್ದು. ಅವರು ಮಕ್ಕಳೊಂದಿಗೆ ಒಳ್ಳೆಯ ಬಾಂಧವ್ಯ ಬೆಸೆಯುವ ಮೂಲಕ ಬದುಕಿನ ಮಾರ್ಗದರ್ಶನ ಮಾಡುತ್ತಾರೆ ಎಂದು ಹೇಳಿದರು.ಶಾಲೆಗೆ ಮುಖ್ಯಶಿಕ್ಷಕರಾಗಿ ಅಧಿಕಾರ ಸ್ವೀಕರಿಸಿ ಮಾತನಾಡಿದ ವೀರಯ್ಯ ಗೆಜ್ಜಲಗಟ್ಟಿಮಠ

ಎಸ್ಡಿಎಂಸಿಯವರ, ಪಾಲಕರ, ಹಿರಿಯರ ಸಹಕಾರ ಪಡೆದು ಶಾಲಾ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಕಾರ್ಯಕ್ರಮ ಕುರಿತು ಮುಖಂಡ ರಾಘವೇಂದ್ರ ದೇಶಪಾಂಡೆ, ಎಸ್ಡಿಎಂಸಿ ಅಧ್ಯಕ್ಷ ಅಬ್ದುಲ್ ಸಾಬ ಬಿಲಕೇರಿ, ಮುಖ್ಯಶಿಕ್ಷಕರಾದ ಮಹಾಂತೇಶ ಹಳ್ಳೂರು, ಅಮರಪ್ಪ ಕುಂಬಾರ ಮಾತನಾಡಿದರು.

ಕಾರ್ಯಕ್ರಮದಲ್ಲಿ ಹಡಪದ ಅಪ್ಪಣ್ಣ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿ ಜಯಂತಿ ಆಚರಿಸಿದರು.

ಮುಖ್ಯಶಿಕ್ಷಕಹುದ್ದೆಸ್ವೀಕರಿಸಿದ ವೀರಯ್ಯಗೆಜ್ಜಲಗಟ್ಟಿಮಠರಿಗೆ ಶಾಲೆ ಮೇಲುಸ್ತುವಾರಿ ಸಮಿತಿಯವರು, ಹಿತೈಷಿಗಳು, ಸ್ನೇಹಿತರು, ವಿವಿಧ ಶಾಲಾ ಮುಖ್ಯಶಿಕ್ಷಕರು ಹಾಗೂ ಸಹಶಿಕ್ಷಕರು, ಹಳೇಪೇಟೆಯ ಗಣ್ಯರು, ಮುಖಂಡರು ಸನ್ಮಾನಿಸಿದರು.

ಕಾರ್ಯಕ್ರಮ ನಿರೂಪಣೆ ಶಿಕ್ಷಕರಾದ ಹುಸೇನಸಾಬ, ಮಹೇಶ ಬೂದಿಹಾಳಮಠ ನೆರವೇರಿಸಿದರು.

ಪುರಸಭೆ ಮಾಜಿ ಅಧ್ಯಕ್ಷರಾದ ಅಮೀರಬೇಗ್ ಉಸ್ತಾದ್, ರಜ್ಜಬಲಿ ಟಿಂಗ್ರಿ, ಮಾಜಿ ಉಪಾಧ್ಯಕ್ಷ ಮಹಿಬೂಬಸಾಬ, ಮುಖಂಡರಾದ ಸುರೇಶ ಸೇಠ್, ಪರನಗೌಡ ಆದಾಪೂರು, ಎಂಡಿ ರಫೀ, ರಾಮನಗೌಡ ವ್ಯಾಕರನಾಳ, ಉರ್ದುಪ್ರೌಶಾಲೆ ಮುಖ್ಯಶಿಕ್ಷಕ ಮಹ್ಮದ್ ಶರೀಫ್, ತಾಪಂ ಅಧಿಕಾರಿ ಅಮರೇಶ ಗೌಡೂರು, ನಿವೃತ್ತ ಪೋಲಿಸ್ ವಲಿಸಾಬ, ಸಿಆರ್ಪಿ ರಾಮಚಂದ್ರ ಢವಳೆ, ನಿದೈಶಿ ಎಸ್ ಎನ್ ಅಕ್ಕಿ, ಜೋಶೆಫ್ ಇರ್ಲಾ, ವಿರುಪಾಕ್ಷಯ್ಯವಸ್ತದ್, ಬುಡ್ಡೇಸಾಬ, ಸಾಹೇಬಹುಸೇನ ಮುಲ್ಲಾ, ಖಾಜಾಸಾಬ, ಉರ್ದು ಶಾಲೆ ಎಸ್ಡಿಎಂಸಿ ಅಧ್ಯಕ್ಷ ಪೂಲ್ ಸಾಬ್, ದೈಶಿ ಮಲ್ಲಿಕಾರ್ಜುನಯ್ಯ, ನೀಲಕಂಠಗೌಡ, ಕೇಶವರೆಡ್ಡಿ ಯರದಿಹಾಳ, ಮುಖ್ಯಶಿಕ್ಷಕರಾದ ಹುಲಿಗೆಮ್ಮ, ಮನೋಹರ್ ಬಡಿಗೇರ್, ರಿಯಾಜ್, ಸುಗೂರೇಶ, ಸುಭಾಸ್, ಮಹಾಂತೇಶ, ಬಸವರಾಜ್, ಶರಣಬಸವ, ಸಾವಿತ್ರಿ ಹಾಗೂ ಮುಖಂಡರು, ಗಣ್ಯರು, ವಿವಿಧ ಶಾಲಾ ಶಿಕ್ಷಕರು, ಅಂಜುಮನ್ ಕಮಿಟಿಯವರು, ಶಾಲಾಶಿಕ್ಷಕ ವೃಂದ, ಬಿಸಿಯೂಟದ ಸಿಬ್ಬಂದಿಗಳು, ವಿದ್ಯಾರ್ಥಿಗಳು ಹಾಗೂ ಇತರರು ಇದ್ದರು.

# ಸುರಕ್ಷತಾ ಬೇಲಿ ಇಲ್ಲದ ಟ್ರಾನ್ಸ್‌ಫಾರ್ಮರ್‌ಗಳಿಂದ ಪಟ್ಟಣದಲ್ಲಿ ಅವಘಡಗಳ ಸರಣಿ





• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಜು. 30: ಪಟ್ಟಣದಲ್ಲಿ ಒಟ್ಟು 102 ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿದ್ದು, ಅವುಗಳಲ್ಲಿ ಬಹುತೇಕ ಟ್ರಾನ್ಸ್‌ಫಾರ್ಮರ್‌ಗಳಿಗೆ ಅಗತ್ಯವಾದ ತಂತಿಬೇಲಿ ಹಾಗೂ ಸುರಕ್ಷತಾ ವ್ಯವಸ್ಥೆ ಇಲ್ಲದಿರುವುದು ಸಾರ್ವಜನಿಕರ ಆತಂಕಕ್ಕೆ ಕಾರಣವಾಗಿದೆ.

ಮಳೆಗಾಲದಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ಸುತ್ತಮುತ್ತ ವಿದ್ಯುತ್ ಸೋರಿಕೆಯ ಅಪಾಯ ಹೆಚ್ಚಾಗುತ್ತಿದ್ದು, ಇದರಿಂದ ಈಗಾಗಲೇ ಹಲವು ಹಸುಗಳು, ಎತ್ತುಗಳು ಹಾಗೂ ಆಡುಗಳು ಸೇರಿದಂತೆ ಸಾಕಷ್ಟು ಮೂಕ ಪ್ರಾಣಿಗಳು ವಿದ್ಯುತ್ ಸ್ಪರ್ಶಿಸಿ ಸಾವನ್ನಪ್ಪಿವೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಸ್ಥಳೀಯ ರೈತರ ಪ್ರಕಾರ, ಕಳೆದ ಹತ್ತು ವರ್ಷಗಳಿಂದ ಟ್ರಾನ್ಸ್‌ಫಾರ್ಮರ್‌ಗಳಿಗೆ ಸುರಕ್ಷತಾ ಬೇಲಿ ಅಳವಡಿಸುವಂತೆ ಜೆಸ್ಕಾಂ ಅಧಿಕಾರಿಗಳಿಗೆ ಅನೇಕ ಬಾರಿ ಮನವಿ ಸಲ್ಲಿಸಲಾಗಿದೆ. ಆದರೂ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಯಾವುದೇ ಶಾಶ್ವತ ಕ್ರಮ ಕೈಗೊಳ್ಳಲಾಗಿಲ್ಲ ಎನ್ನಲಾಗಿದೆ.

ಇತ್ತೀಚೆಗೆ ಗುರುಮಠಕಲ್ ಪಟ್ಟಣದ ಹೊರವಲಯದಲ್ಲಿ ಗುರುವಾರ ಮತ್ತೊಂದು ಹಸು ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿರುವ ಘಟನೆ ರೈತರ ಆಕ್ರೋಶಕ್ಕೆ ಕಾರಣವಾಗಿದೆ. ಒಂದೆಡೆ ಸಾಕು ಪ್ರಾಣಿಗಳನ್ನು ಕಳೆದುಕೊಂಡ ನೋವು, ಮತ್ತೊಂದೆಡೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ರೈತರು ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದ್ದು, ಕೂಡಲೇ ಎಲ್ಲ ಟ್ರಾನ್ಸ್‌ಫಾರ್ಮರ್‌ಗಳಿಗೆ ಸುರಕ್ಷತಾ ತಂತಿಬೇಲಿ ಅಳವಡಿಸಿ, ಜೀವಹಾನಿ ತಡೆಯಲು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯೆ ನೀಡಿದ ಅಧಿಕಾರಿಗಳು ಕಳೆದ ಹತ್ತು ವರ್ಷಗಳಿಂದ ಅಸುರಕ್ಷಿತ ಟ್ರಾನ್ಸ್‌ಫಾರ್ಮರ್‌ಗಳ ಮಾಹಿತಿ ನೀಡಿಲಾಗಿದೆ, ಟೆಂಡರ್ ಪ್ರಕ್ರಿಯೆ ಮುಗಿದಿಲ್ಲದ ಕಾರಣ ತಂತಿ ಬೇಲಿ ಹಾಕುವ ಕೆಲಸ ವಿಳಂಬವಾಗುತ್ತಿದೆ ಎನ್ನುವ ಕಾರಣ ನೀಡುತ್ತಿದ್ದು ಇವರ ನಿರ್ಲಕ್ಷ್ಯದ ಬೆಲೆ ಮೂಕ ಪ್ರಾಣಿಗಳ ಜೀವ ಕಳೆದು ಕೊಳ್ಳುವ ಹಾಗಾಗಿದೆ.

# ಇ-ಸ್ವತ್ತು 2.0 ದೋಷ ಸರಿಪಡಿಸಲು ಕ್ರಮಕ್ಕೆ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್



ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜಾರಿಯಲ್ಲಿರುವ ಇ–ಸ್ವತ್ತು 2.0 ಹಾಗೂ ಇ–ಖಾತಾ ವ್ಯವಸ್ಥೆಯ ತಾಂತ್ರಿಕ ದೋಷಗಳಿಂದ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಶೀಘ್ರ ಪರಿಹರಿಸಬೇಕು ಹಾಗೂ ಈ ವಿಷಯವನ್ನು ಮುಂಬರುವ ವಿಧಾನಸಭೆ ಅಧಿವೇಶನದಲ್ಲಿ ಪ್ರಸ್ತಾಪಿಸಬೇಕು ಎಂದು ಒತ್ತಾಯಿಸಿ, ಜಯ ಕರ್ನಾಟಕ ಸಂಘಟನೆಯ ಗುರುಮಠಕಲ್ ತಾಲೂಕು ಘಟಕವು ಗ್ರೇಡ್ 2 ತಹಸೀಲ್ದಾರ್ ನರಸಿಂಹ ಸ್ವಾಮಿ ಮೂಲಕ ಶಾಸಕ ಶರಣಗೌಡ ಕಂದಕೂರ ಅವರಿಗೆ ಗುರುವಾರ ಮನವಿ ಸಲ್ಲಿಸಿತು.

ಈ ಸಂದರ್ಭದಲ್ಲಿ ಮಾತನಾಡಿದ ತಾಲೂಕು ಅಧ್ಯಕ್ಷ ನಾಗೇಶ್ ಗದ್ದಿಗಿ, ಇ–ಖಾತಾ ವ್ಯವಸ್ಥೆಯ ತಾಂತ್ರಿಕ ದೋಷಗಳಿಂದ ಕಳೆದ ಹಲವು ತಿಂಗಳುಗಳಿಂದ ಅರ್ಜಿಗಳ ವಿಲೇವಾರಿ ವಿಳಂಬವಾಗುತ್ತಿದ್ದು, ಸಾವಿರಾರು ಅರ್ಜಿಗಳು ಬಾಕಿ ಉಳಿದಿವೆ. ಇದರಿಂದ ಗ್ರಾಮೀಣ ಭಾಗದ ಜನರು ಪಂಚಾಯಿತಿ ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿಸಿದರು.

ನಿರಂತರ ಸರ್ವರ್ ಸಮಸ್ಯೆ, ಲಾಗಿನ್ ದೋಷ, ಜಿಪಿಎಸ್ ಲೊಕೇಶನ್ ತೊಂದರೆ, ಡೇಟಾ ಅಪ್‌ಲೋಡ್ ವಿಫಲವಾಗುವುದು ಹಾಗೂ ಅರ್ಜಿ ಸಲ್ಲಿಸುವ ಹಂತದಲ್ಲೇ ತಂತ್ರಾಂಶ ಸ್ಥಗಿತಗೊಳ್ಳುವುದು ಪ್ರಮುಖ ಸಮಸ್ಯೆಗಳಾಗಿವೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಈ ತಾಂತ್ರಿಕ ತೊಂದರೆಗಳಿಂದ ಆಸ್ತಿ ಖರೀದಿ–ಮಾರಾಟ ಪ್ರಕ್ರಿಯೆಗೂ ಅಡ್ಡಿಯಾಗಿದ್ದು, ಶಿಕ್ಷಣ, ವೈದ್ಯಕೀಯ ಚಿಕಿತ್ಸೆ ಹಾಗೂ ಇತರ ತುರ್ತು ಅಗತ್ಯಗಳಿಗೆ ಬ್ಯಾಂಕ್ ಸಾಲ ಪಡೆಯಲು ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ ಎಂದು ತಿಳಿಸಲಾಗಿದೆ.

ಇ–ಸ್ವತ್ತು 2.0 ತಂತ್ರಾಂಶದ ಸರ್ವರ್ ಸಾಮರ್ಥ್ಯವನ್ನು ಹೆಚ್ಚಿಸಿ ದೋಷಗಳನ್ನು ಶಾಶ್ವತವಾಗಿ ಸರಿಪಡಿಸಬೇಕು, ಬಾಕಿ ಅರ್ಜಿಗಳ ಶೀಘ್ರ ವಿಲೇವಾರಿಗೆ ವಿಶೇಷ ಅಭಿಯಾನ ಹಮ್ಮಿಕೊಳ್ಳಬೇಕು ಹಾಗೂ ಸಮಸ್ಯೆ ಬಗೆಹರಿಯುವವರೆಗೆ ಪರ್ಯಾಯ ನೋಂದಣಿ ವ್ಯವಸ್ಥೆಗೆ ಅವಕಾಶ ಕಲ್ಪಿಸಬೇಕು ಎಂದು ಸಂಘಟನೆ ಮನವಿ ಮಾಡಿದೆ.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಮಲ್ಲಿಕಾರ್ಜುನ ಕಾಕಲವರ, ನರಸಿಂಹಲು ಗಂಗನೋಳ, ಕಾಶಪ್ಪ ಬೋಯಿ, ರಾಮುಲು ಕೋಡಿಗಂಟಿ, ಬಿ.ಎಸ್. ತಲಾರಿ, ಆಯಾಜ್ ಅಲಿ, ರವಿಕುಮಾರ್ ವಾರದ, ಅಂಜಿ ಮಂಗಮೋಳ, ಸಿದ್ದಪ್ಪ ಮದ್ದೂರು, ಬನ್ನು ಮಡುಗು, ಸಾಬು ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಸಂಕಷ್ಟ ಸಮನ್ವಯ ಸೂತ್ರ ಮಾಡಿ ರೈತರಿಗೆ ನೀರು ಒದಗಿಸಿ : ದೊಡ್ಡಪ್ಪ ದೇಸಾಯಿ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ




ಮಳೆ ಕೊರತೆಯಿಂದ ಭೀಕರ ಬರ ಪರಿಸ್ಥಿತಿ ಅನುಭವಿಸುವಂಥ ಸಮಸ್ಯೆ ರೈತರಿಗೆ ಎದುರಾಗಿದೆ ತುಂಗಭದ್ರಾ ಜಲಾಶಯದ ನಮ್ಮ ಭಾಗದಲ್ಲಿ ಬರುವ ರೈತರ ಬೆಳೆಗಳಿಗೆ ಅನುಕೂಲವಾಗಲು ನೀರು ಒದಗಿಸಲು ರೈತ ಮುಖಂಡ ಹಾಗೂ ಪಿ ಎಲ್ ಬ್ಯಾಂಕ್ ಮಾಜಿ ಅಧ್ಯಕ್ಷ ದೊಡ್ಡಪ್ಪ ದೇಸಾಯಿ ಒತ್ತಾಯಿಸಿದ್ದಾರೆ,

ಅವರು ಗುರುವಾರ ನಗರದಲ್ಲಿರುವ ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘದ ಪತ್ರಿಕಾ ಭವನದಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾಧ್ಯಮದೊಂದಿಗೆ ಮಾತನಾಡುತ್ತಾ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ ಅವರು ಸಂಕಷ್ಟ ಸಮನ್ವಯ ಸೂತ್ರ ಮಾಡಿ ರೈತರಿಗೆ ಅನುಕೂಲ ದೊರಕಿಸಿಕೊಡಲು ಸರ್ಕಾರ ಮುಂದಾಗಬೇಕು ರೈತರ ಬೆಳೆಗಳಿಗೆ ನೀರು ಕೊಡಬೇಕು ಎಂದು ಅವರು ಒತ್ತಾಯಿಸಿದರು, ಮಳೆ ಇಲ್ಲದೆ ನೀರಿನ ಕೊರತೆ ಇರುವುದು ಸಹಜ ಮುಂಬರುವ ದಿನಗಳಲ್ಲಿ ದನ ಕರುಗಳಿಗೆ ಮೇವಿನ ಕೊರತೆ ಕೂಡ ಎದುರಾಗಬಹುದು ಆಹಾರಧಾನ್ಯದ ಕೊರತೆ ಬರಬಹುದು ಇದರಿಂದ ಆರ್ಥಿಕತೆಗೆ ಧಕ್ಕೆ ಉಂಟಾಗುತ್ತದೆ ನೀರಿನ ಲಭ್ಯತೆಯ ಆಧಾರದ ಮೇರೆಗೆ ಎಷ್ಟು ಎಕರೆಗಳಿಗೆ ನೀರು ಕೊಡಬಹುದು ಎಂಬುದನ್ನು ಲೆಕ್ಕಾಚಾರ ಹಾಕಿಕೊಂಡು ರೈತರೊಂದಿಗೆ ಸಮಾಲೋಚನೆ ನಡೆಸಿ ಎಲ್ಲರಿಗೆ ಎಲ್ಲ ರೀತಿಯ ಅನುಕೂಲತೆ ಇರುವ ವೆವಸ್ಥೆಯಲ್ಲಿ ವ್ಯವಸ್ಥೆ ಮಾಡಿಕೊಳ್ಳುವ ದಿಶೆಯಲ್ಲಿ ಸರ್ಕಾರ ಮತ್ತು ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಂಡು ಒಟ್ಟಾರೆ ರೈತರಿಗೆ ಅನುಕೂಲತೆಗಳನ್ನು ದೊರಕಿಸಿಕೊಡಬೇಕು ರೈತರ ಸಮಸ್ಯೆಗಳಿಗೆ ನೇರ ಸ್ಪಂದನೆ ನೀಡಲು ಸ್ಥಳೀಯ ದಲ್ಲಿಯೇ ಸಭೆ ಕರೆದು ಚರ್ಚಿಸಬೇಕು ಪದೇಪದೇ ನೀರಾವರಿ ಸಲಹಾ ಸಮಿತಿ ಬೆಂಗಳೂರಿನಲ್ಲಿ ಕರಿಯುವುದರಿಂದ ಈ ಭಾಗದ ರೈತರಿಗೆ ನ್ಯಾಯ ಸಿಗುವುದು ಕಷ್ಟ ಕಾರಣ ಜನಪ್ರತಿನಿಧಿಗಳು ಅತ್ಯಂತ ಮುತುವರ್ಜಿ ವಹಿಸಿ ರೈತರ ಸಮಸ್ಯೆಗಳಿಗೆ ನೇರ ಸ್ಪಂದನೆ ನೀಡಬೇಕೆಂದು ರೈತ ಮುಖಂಡ ದೊಡ್ಡಪ್ಪ ದೇಸಾಯಿ ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ರೈತ ಮುಖಂಡರುಗಳಾದ ಗಂಗಾವತಿಯ ಪ್ರಸಾದ ರೆಡ್ಡಿ, ಕಾರಟಗಿಯ ನಾಗಪ್ಪ ಸಿಂಗನಾಳ, ಚಂದ್ರಶೇಖರ್ ಗೋನಾಳ್ ಹೇರೂರು ,ಪಂಪಾಪತಿ ಕಾರಟಗಿ ಅನೇಕರಿದ್ದರು,

# ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಹುದ್ದೆಗಳಿಗೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ತುರುವಿಹಾಳ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ 05 ಅಂಗನವಾಡಿ ಕಾರ್ಯಕರ್ತೆಯರು ಮತ್ತು 11 ಅಂಗನವಾಡಿ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಆಫ್‌ಲೈನ್ (ಮ್ಯಾನ್ಯುವಲ್) ಮೂಲಕ ಸಲ್ಲಿಸಬೇಕಾಗಿದ್ದು, ಜುಲೈ 30, 2026 ರಿಂದ ಆಗಸ್ಟ್ 28, 2026 ರವರೆಗೆ ಕಚೇರಿ ಸಮಯದಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುವುದು ಎಂದು ಸಿಡಿಪಿಓ ತಿಳಿಸಿದರು.

ಹೆಚ್ಚಿನ ಮಾಹಿತಿಗಾಗಿ ಪಿ.ಡಬ್ಲ್ಯೂ.ಡಿ. ರಾಯಚೂರು ರಸ್ತೆಯಲ್ಲಿರುವ ತುರುವಿಹಾಳ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯನ್ನು ಅಥವಾ ದೂರವಾಣಿ ಸಂಖ್ಯೆ: 08535–295086 ಮೂಲಕ ಸಂಪರ್ಕಿಸುವಂತೆ

ಪತ್ರಿಕೆ ಪ್ರಕಟಣೆಗೆ ತಿಳಿಸಿದರು.

# ಕುರುಗೋಡು ಬಸ್‌ಡಿಪೋದಿಂದ ಬೆಂಗಳೂರಿಗೆ 2 ಹೊಸ ಅಮೋಘ ಎಸಿ.ಸ್ಲೀಪರ್‌ಬಸ್



• ಮಲ್ಲಮ್ಮ ನುಡಿ ವಾರ್ತೆಕುರುಗೋಡು

ಜು.30 ಪಟ್ಟಣದ ಬಸ್‌ಡಿಪೋ ಘಟಕದಿಂದ ನೂತನವಾಗಿ 2 ಹೊಸ ಎಸಿ ಸ್ಲೀಪರ್‌ಬಸ್‌ಗಳನ್ನು ಕುರುಗೋಡು–ಬೆಂಗಳೂರು ಪಟ್ಟಣದ ನೂತನವಾಗಿ ಸಂಚಾರವನ್ನು ಆರಂಭಿಸಲಾಯಿತು.

ಕುರುಗೋಡು ತಹಶೀಲ್ದಾರ್ ನರಸಪ್ಪ ಅವರು ನೂತನ ಎಸಿ.ಸ್ಲೀಪರ್‌ಬಸ್‌ಗಳಿಗೆ ಹಸಿರುನಿಶಾನೆ ಹಾರಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಕುರುಗೋಡು ಮತ್ತು ಕಂಪ್ಲಿ ತಾಲೂಕಿನ ಜನರಿಗೆ ಬೆಂಗಳೂರು ಪಟ್ಟಣಕ್ಕೆ ಸಂಚಾರ ಮಾಡಲು ಅನುಕೂಲವಾಗುತ್ತಿದೆ ಎಂದು ನುಡಿದರು. ಅಲ್ಲದೆ ಕುರುಗೋಡು ಡಿಪೋದಿಂದ ಹೊರಟ 2 ಬಸ್ಸುಗಳು ಕಂಪ್ಲಿಯಿಂದ ಕುರುಗೋಡು ಮಾರ್ಗವಾಗಿ ಬಳ್ಳಾರಿಗೆ ತೆರಳಿ ಬೆಂಗಳೂರಿಗೆ ತಲುಪಲಿವೆ ಎಂದು ನುಡಿದರು.

ಕುರುಗೋಡು ಪುರಸಭೆ ಮುಖ್ಯಾಧಿಕಾರಿ ದತ್ತಾತ್ರೇಯಹೆಗೆಡೆ, ಗ್ಯಾರಂಟಿಯೋಜನೆ ಅಧ್ಯಕ್ಷ ಬಸವನಗೌಡ, ವಿಭಾಗೀಯ ಸಂಚಲನ ಅಧಿಕಾರಿ, ಡಿಟಿಓ. ಇಂದ್ರಸೇನಾಬಿರದಾರ್, ಕುರುಗೋಡು ಡಿಪೋಮ್ಯಾನೇಜರ್ ಕೆಎಂ.ತಿರುಮಲೇಶ, ಡಿಎಂಇ. ಮೇಘಾಕುಂಬಾರ್, ಕುರುಗೋಡು ಟಿಸಿ. ದೇವರೆಡ್ಡಿ, ಚರ್ಚೆನ್ ಶ್ರೀನಿವಾಸ್, ಸೇರಿದಂತೆ ಕುರುಗೋಡು ಮುಖಂಡರು, ಮತ್ತು ಡಿಪೋದ ಸಿಬ್ಬಂದಿವರ್ಗದವರು ಇದ್ದರು.

# ಕುರುಗೋಡು ಶ್ರೀದೊಡ್ಡಬಸವೇಶ್ವರ ದೇವಸ್ಥಾನದಲ್ಲಿ ಹುಂಡಿಎಣಿಕೆ



• ಮಲ್ಲಮ್ಮ ನುಡಿ ವಾರ್ತೆಕುರುಗೋಡು

ಜು.30 ಪಟ್ಟಣದ ಆರಾಧ್ಯದೈವ ಕುರುಗೋಡು ಶ್ರೀದೊಡ್ಡಬಸವೇಶ್ವರಸ್ವಾಮಿದೇವಸ್ಥಾನದಲ್ಲಿಕುರುಗೋಡು ತಹಶೀಲ್ದಾರ್ ಮಾರ್ಗಸೂಚನೆಯಂತೆ ದೇವಸ್ಥಾನದ ಅಧ್ಯಕ್ಷರು, ಸದಸ್ಯರು, ಬ್ಯಾಂಕ್‌ಮ್ಯಾನೇಜರ್, ಪೋಲೀಸ್‌ಇಲಾಖೆ ಹಾಗು ಊರಿನ ಹಿರಿಯರ ಸಮಕ್ಷದಲ್ಲಿ ಹುಂಡಿ ಎಣಿಕೆಕಾರ್ಯ ಬೆಳಿಗ್ಗೆಯಿಂದ ಆರಂಭವಾಗಿ ಸಂಜೆ ಮುಕ್ತಾಯಗೊಂಡಿತು.

ಕೊನೆಗೆ ಹುಂಡಿ ಎಣಿಕೆಯಲ್ಲಿ ಒಟ್ಟು ರೂ. 21.65000 ಹಣ ಸಂಗ್ರಹವಾಗಿದೆ ಎಂದು ಕುರುಗೋಡು ಶ್ರೀದೊಡ್ಡಬಸವೇಶ್ವರ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಆಂಜನೇಯಲು ಎಲ್ಲರ ಸಮಕ್ಷದಲ್ಲಿ ತಿಳಿಸಿದರು. ಈ ಸಂದರ್ಭದಲ್ಲಿ ದೇವಸ್ಥಾನದ ಸೇವಾಸಮಿತಿ ಅಧ್ಯಕ್ಷಚಾನಾಳುಆನಂದ, ಬ್ಯಾಂಕ್‌ಮ್ಯಾನೇಜರ್ ಪಿ.ಪವನ್, ಪೋಲೀಸ್‌ಗೋವಿಂದ, ದೇವಸ್ಥಾನದ ಸಮಿತಿ ಸದಸ್ಯ ಎಸ್.ಸಿದ್ದನಗೌಡ, ಗಿರೀಶ್, ಕಗ್ಗಲ್‌ಬಸವರಾಜ, ಪವನಕುಮಾರಿ, ಬಸವರಾಜ, ಚಾನಾಳುಪಲ್ಲವಿವಿಜಯಕುಮಾರ್, ಭೂಪತಿನಾಗರತ್ನ, ದೇವಸ್ಥಾನದ ಸಹಾಯಕರಾದ ಮಾಂತೇಶ, ಪ್ರಭುಸ್ವಾಮಿ, ಶ್ರೀನಿವಾಸ್, ಮಹಿಳೆಯರು ಸೇರಿದಂತೆ ಊರಿನ ಭಕ್ತರು ಇದ್ದರು.

# ಅಲ್ಪಸಂಖ್ಯಾತರ ಮೊರಾರ್ಜಿ ವಸತಿ ನಿಲಯದ ವಿದ್ಯಾರ್ಥಿನಿಯರು ಅಸ್ವಸ್ಥ : ಕ್ರಮಕ್ಕೆ ದಸಂಸ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು



ಒಳಬಳ್ಳಾರಿ ರಸ್ತೆಯಲ್ಲಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ನಿಲಯದ ಸುಮಾರು 21 ವಿದ್ಯಾರ್ಥಿನಿಯರು ಕಳಪೆ ಮಟ್ಟದ ಉಪಹಾರ ಸೇವಿಸಿ ಫುಡ್ ಪಾಯಿಸನ್‌ಗೆ ಒಳಗಾಗಿ, ತಾಯಿ–ಮಕ್ಕಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಆಘಾತಕಾರಿ ಘಟನೆ ಜರುಗಿದೆ. ಈ ಘಟನೆಯನ್ನು ದಲಿತ ಸಂಘರ್ಷ ಸಮಿತಿ (ದಸಂಸ) ತಾಲೂಕು ಅಧ್ಯಕ್ಷರಾದ ಮರಿಯಪ್ಪ (ಚಿರು) ಅವರು ತೀವ್ರವಾಗಿ ಖಂಡಿಸಿದರು.ಈ ಕುರಿತು ಮಾತನಾಡಿದವರು,

ವಿದ್ಯಾರ್ಥಿಗಳಿಗೆ ಪೌಷ್ಟಿಕ ಹಾಗೂ ಗುಣಮಟ್ಟದ ಆಹಾರ ನೀಡಬೇಕಾದ ವಸತಿ ನಿಲಯಗಳಲ್ಲಿ ಕಳಪೆ ಆಹಾರ ನೀಡುವುದು ಅಕ್ಷಮ್ಯ ಅಪರಾದವಾಗಿದೆ. ಈ ಕೂಡಲೇ ಉನ್ನತ ಮಟ್ಟದ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಮತ್ತು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ವಿದ್ಯಾರ್ಥಿನಿಯರಿಗೆ ಉತ್ತಮ ವೈದ್ಯಕೀಯ ಚಿಕಿತ್ಸೆ ದೊರಕಿಸಿಕೊಡಬೇಕು.ಜೊತೆಗೆ

ವಸತಿ ನಿಲಯಗಳ ಅಡುಗೆ ಮನೆಗಳು ಮತ್ತು ಆಹಾರ ಸಾಮಗ್ರಿಗಳ ಗುಣಮಟ್ಟವನ್ನು ನಿಯಮಿತವಾಗಿ ಪರಿಶೀಲಿಸಬೇಕು ಹಾಗೂ ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಸಂಬಂಧಪಟ್ಟ ಇಲಾಖೆಯು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮರಿಯಪ್ಪ ಚಿರು ಅವರು ಆಗ್ರಹಿಸಿದರು.

# ಆರೋಗ್ಯ ರಕ್ಷಣೆಗೆ ಮುನ್ನೆಚ್ಚರಿಕೆ ಅಗತ್ಯ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ನಮ್ಮ ಪ್ರತಿಯೊಬ್ಬರ ಜೀವನದಲ್ಲಿ ಆರೋಗ್ಯ ಅತ್ಯಂತ ಪ್ರಮುಖವಾಗಿದ್ದು, ಪ್ರತಿಯೊಬ್ಬರೂ ತಮ್ಮ ಮತ್ತು ತಮ್ಮ ಕುಟುಂಬದ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದು ಅಗತ್ಯ ಎಂದು ಬಳ್ಳಾರಿ ಮಹಾನಗರ ಪಾಲಿಕೆಯ ಮಹಾಪೌರರಾದ ಪಿ. ಗಾದೆಪ್ಪ ಅವರು ಹೇಳಿದರು.

ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್,ಜಿಲ್ಲಾ ಆಯುಷ್ ಇಲಾಖೆ ಮತ್ತು ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ರಾಜ್ ಕುಮಾರ್ ರಸ್ತೆಯ ಬಿಡಿಎಎ ಮೈದಾನದ ಸಭಾಂಗಣದಲ್ಲಿ ಪೌರಕಾರ್ಮಿಕರಿಗೆ ಗುರುವಾರ ಆಯೋಜಿಸಿದ್ದ ಬೃಹತ್ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಯಿಲೆಗಳು ಬಂದ ನಂತರ ಚಿಕಿತ್ಸೆ ಪಡೆಯುವುದಕ್ಕಿಂತ, ರೋಗಗಳು ಬರುವ ಮುನ್ನವೇ ಸೂಕ್ತ ಮುನ್ನೆಚ್ಚರಿಕೆ ವಹಿಸುವುದು ಅತ್ಯಂತ ಮುಖ್ಯ. ಸರ್ಕಾರದಿಂದ ಸಾರ್ವಜನಿಕರ ಆರೋಗ್ಯಕ್ಕಾಗಿ ಉಚಿತವಾಗಿ ಮತ್ತು ರಿಯಾಯಿತಿ ದರದಲ್ಲಿ ಲಭ್ಯವಿರುವ ಹತ್ತಾರು ಯೋಜನೆಗಳು ಮತ್ತು ಸೌಲಭ್ಯಗಳನ್ನು ಸಾರ್ವಜನಿಕರು ಸರಿಯಾಗಿ ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಆರೋಗ್ಯ ಕಾಪಾಡಿಕೊಳ್ಳುವ ಕುರಿತು ಸಾರ್ವಜನಿಕರಲ್ಲಿ ಸಂಪೂರ್ಣ ಅರಿವು ಮೂಡಿಸಲು ಪ್ರತಿದಿನ ಕನಿಷ್ಠ ಒಂದು ಗ್ರಾಮಕ್ಕಾದರೂ ಭೇಟಿ ನೀಡಿ ನಿರಂತರ ತರಬೇತಿ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶಶಿಕಾಂತ್ ಶಿವಪುರೆ ಅವರು ಮಾತನಾಡಿ, ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ನಗರದ ನೈರ್ಮಲ್ಯಕ್ಕಾಗಿ ಶ್ರಮಿಸುವ ಪೌರಕಾರ್ಮಿಕರು ತಮ್ಮ ಆರೋಗ್ಯದ ಕುರಿತು ನಿರ್ಲಕ್ಷ ?? ವಹಿಸಬಾರದು. ಸರ್ಕಾರ ನೀಡುವ ಭದ್ರತಾ ಪರಿಕರಗಳನ್ನು ಕಡ್ಡಾಯವಾಗಿ ಬಳಸಬೇಕು. ಸರ್ಕಾರ ಹಾಗೂ ಜಿಲ್ಲಾಡಳಿತದ ಮಾರ್ಗದರ್ಶನದಂತೆ ಪ್ರತಿಯೊಬ್ಬ ಪೌರಕಾರ್ಮಿಕರು ಉಚಿತ ಆರೋಗ್ಯ ತಪಾಸಣಾ ಶಿಬಿರದ ಸೌಲಭ್ಯವನ್ನು ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.*ವಿಶೇಷ ಸಮಗ್ರ ಪರಿಷ್ಕರಣೆ ಜಾಗೃತಿ:*

ಭಾರತೀಯ ಪ್ರಜೆಯಾಗಿ ಚುನಾವಣೆಯಲ್ಲಿ ಮತದಾನ ಮಾಡುವುದು ಪ್ರತಿಯೊಬ್ಬರ ಕಡ್ಡಾಯ ಕರ್ತವ್ಯ. ಈ ನಿಟ್ಟಿನಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ನಡೆಯುತ್ತಿದ್ದು, ಬಿಎಲ್‌ಒ ವಿತರಿಸಿರುವ ಅರ್ಜಿ ಫಾರ್ಮ್ಗಳನ್ನು ಭರ್ತಿ ಮಾಡಿ ತಕ್ಷಣ ಸಲ್ಲಿಸಬೇಕು. ಹಿಂದೆ ಅರ್ಜಿ ಸಲ್ಲಿಕೆಗೆ ನೀಡಲಾಗಿದ್ದ ಅಂತಿಮ ಗಡುವನ್ನು ವಿಸ್ತರಿಸಲಾಗಿದ್ದು, ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು. ಅರ್ಜಿ ಸಲ್ಲಿಕೆಯಲ್ಲಿ ತೊಂದರೆಗಳಿದ್ದರೆ ಸಮೀಪದ ತಹಶೀಲ್ದಾರ್ ಕಚೇರಿ, ಗ್ರಾಮ ಪಂಚಾಯತಿ ಅಥವಾ ಸ್ಥಳೀಯ ಮಹಾನಗರಪಾಲಿಕೆ ಕಚೇರಿಗೆ ಭೇಟಿ ನೀಡಿ ನೆರವು ಪಡೆಯಬಹುದು ಎಂದು ತಿಳಿಸಿದರು.

ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್. ಮಂಜುನಾಥ್ ಅವರು ಮಾತನಾಡಿ,ನಗರದ ನೈರ್ಮಲ್ಯ ಹಾಗೂ ಸ್ವಚ್ಛತೆಯನ್ನು ಕಾಪಾಡಲು ಹಗಲಿರುಳು ಶ್ರಮಿಸುವ ಪೌರಕಾರ್ಮಿಕರ ದೈಹಿಕ ಮತ್ತು ಮಾನಸಿಕ ಆರೋಗ್ಯ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಆಯುಷ್ ಇಲಾಖೆಯ ವತಿಯಿಂದ ಪ್ರತಿಯೊಬ್ಬ ಪೌರಕಾರ್ಮಿಕರ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಕರ್ನಾಟಕ ಹಾಗೂ ಭಾರತ ಸರ್ಕಾರದ ನೂತನ ನಿಯಮಗಳಂತೆ ಇನ್ಮುಂದೆ ತ್ಯಾಜ್ಯವನ್ನು 4 ಭಾಗಗಳಾಗಿ ಬೇರ್ಪಡಿಸಿ ಸಂಗ್ರಹಿಸಬೇಕು. ಹಸಿರು ಡಬ್ಬಿ (ಹಸಿ ತ್ಯಾಜ್ಯ), ನೀಲಿ ಡಬ್ಬಿ (ಒಣ ತ್ಯಾಜ್ಯ), ಕಂದು/ಕಪ್ಪು ಡಬ್ಬಿ (ವಿಶೇಷ ಕಾಳಜಿಯ ತ್ಯಾಜ್ಯ), ಕೆಂಪು ಡಬ್ಬಿ (ಸಾನಿಟರಿ ತ್ಯಾಜ್ಯ) ಎಂದು ವಿಂಗಡಿಸಲಾಗಿದ್ದು, ಮನೆ ಮನೆಗೆ ತೆರಳುವಾಗ ಸಾರ್ವಜನಿಕರಿಗೆ ಈ 4 ಪ್ರಕಾರಗಳ ವಿಂಗಡಣೆ ಬಗ್ಗೆ ಅರಿವು ಮೂಡಿಸುವಂತೆ ಪೌರಕಾರ್ಮಿಕರಿಗೆ ಹಾಗೂ ಜಾಗೃತಿ ಸಿಬ್ಬಂದಿಗೆ ಸೂಚಿಸಿದರು.

ಅದೇರೀತಿಯಾಗಿ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಪ್ರತಿಯೊಬ್ಬ ಪೌರಕಾರ್ಮಿಕರು ಕಡ್ಡಾಯವಾಗಿ ಅರ್ಜಿ ನಮೂನೆ ಭರ್ತಿ ಮಾಡಿ ಸಲ್ಲಿಸಬೇಕು. ಭರ್ತಿ ಮಾಡದಿದ್ದಲ್ಲಿ ಮತದಾರರ ಪಟ್ಟಿಯಿಂದ ಹೆಸರು ಕೈಬಿಡುವ ಸಾಧ್ಯತೆ ಇರುತ್ತದೆ. ಪೌರಕಾರ್ಮಿಕರು ಬೆಳಿಗ್ಗೆ ಮನೆ ಮನೆಗೆ ಕಸ ಸಂಗ್ರಹಣೆಗೆ ತೆರಳಿದಾಗ, ಸಾರ್ವಜನಿಕರು ಮತದಾರರ ಪಟ್ಟಿ ಪರಿಷ್ಕರಣೆಯ ಫಾರ್ಮ್ಗಳನ್ನು ಭರ್ತಿ ಮಾಡಿ ವಾಪಸ್ ನೀಡಿದ್ದಾರೆಯೇ ಎಂಬುದನ್ನು ವಿಚಾರಿಸಬೇಕು. ಒಂದು ವೇಳೆ ನೀಡದಿದ್ದರೆ ತಕ್ಷಣವೇ ಹೆಲ್ತ್ ಇನ್ಸ್ಪೆಕ್ಟರ್ ಅಥವಾ ಸೂಪರ್‌ವೈಸರ್‌ಗಳ ಗಮನಕ್ಕೆ ತರಬೇಕು ಎಂದು ತಿಳಿಸಿದರು.ಜಿಲ್ಲಾ ಆಯುಷ್ ಅಧಿಕಾರಿ ಡಾ. ಟಿ. ಫಣೇಂಧರ್ ಅವರು ಮಾತನಾಡಿ, ಸ್ವಚ್ಛ ಭಾರತ ಕಲ್ಪನೆಯೊಂದಿಗೆ ಪ್ರತಿಯೊಬ್ಬರ ಆರೋಗ್ಯ ಕಾಪಾಡುವುದು ಈ ಶಿಬಿರದ ಮುಖ್ಯ ಉದ್ದೇಶವಾಗಿದ್ದು, ಪೌರಕಾರ್ಮಿಕರು ಸಕ್ರಿಯವಾಗಿ ಪಾಲ್ಗೊಂಡು ಈ ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರದ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಬಳಿಕ ಶಿಬಿರದಲ್ಲಿ ಸಾರ್ವಜನಿಕರಿಗೆ ರಕ್ತದೊತ್ತಡ, ಮಧುಮೇಹ ಹಾಗೂ ಸಾಮಾನ್ಯ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಸೌಲಭ್ಯಗಳನ್ನು ಉಚಿತವಾಗಿ ನೀಡಲಾಯಿತು.

ಈ ಸಂದರ್ಭದಲ್ಲಿ ಮುಖಂಡರಾದ ವೆಂಕಟರೆಡ್ಡಿ, ಜಿಪಂ, ಜಿಲ್ಲಾ ಆಯುಷ್ ಇಲಾಖೆ ಮತ್ತು ಮಹಾನಗರ ಪಾಲಿಕೆಯ ಅಧಿಕಾರಿ– ಸಿಬ್ಬಂದಿ ಸೇರಿದಂತೆ ಪೌರಕಾರ್ಮಿಕರು ಉಪಸ್ಥಿತರಿದ್ದರು.

# ಕಟ್ಟಡ ತ್ಯಾಜ್ಯ ಎಲ್ಲೆಂದರಲ್ಲಿ ಚೆಲ್ಲಿದರೆ, ನಿಷೇಧಿತ ಪ್ಲಾಸ್ಟಿಕ್ ಬಳಸಿದರೆ ಭಾರೀ ದಂಡ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಕುರುಗೋಡು ಮತ್ತು ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿ ಪರಿಸರ ಮಾಲಿನ್ಯ ತಡೆಯಲು ಮತ್ತು ಸಾರ್ವಜನಿಕ ನೈರ್ಮಲ್ಯ ಕಾಪಾಡುವ ನಿಟ್ಟಿನಲ್ಲಿ ಪುರಸಭೆಯು ಬಿಗಿ ಕ್ರಮ ಕೈಗೊಂಡಿದೆ. ಕಟ್ಟಡ ನಿರ್ಮಾಣ ಮತ್ತು ತೆರವು ತ್ಯಾಜ್ಯಗಳನ್ನು ಅನಧಿಕೃತವಾಗಿ ಎಸೆಯುವವರ ವಿರುದ್ಧ ಹಾಗೂ ನಿಷೇಧಿತ ಏಕಬಳಕೆ ಪ್ಲಾಸ್ಟಿಕ್ ಬಳಸುವವರ ವಿರುದ್ಧ ಕಠಿಣ ದಂಡ ಮತ್ತು ಕಾನೂನು ಕ್ರಮ ಜರುಗಿಸುವುದಾಗಿ ಕುರುಗೋಡು ಮತ್ತು ಕಂಪ್ಲಿ ಪುರಸಭೆ ಕಾರ್ಯಾಲಯಗಳು ತಿಳಿಸಿವೆ.*ಕಟ್ಟಡ ತ್ಯಾಜ್ಯ ಅನಧಿಕೃತ ವಿಲೇವಾರಿಗೆ ತಡೆ:*ಕುರುಗೋಡು ಮತ್ತು ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ, ನೆಲಸಮ ಹಾಗೂ ದುರಸ್ತಿ ಕಾಮಗಾರಿಗಳಿಂದ ಉಂಟಾಗುವ ತ್ಯಾಜ್ಯವನ್ನು ರಸ್ತೆ ಬದಿ, ಚರಂಡಿ, ಖಾಲಿ ನಿವೇಶನ ಹಾಗೂ ಸರ್ಕಾರಿ ಜಾಗಗಳಲ್ಲಿ ಅನಧಿಕೃತವಾಗಿ ವಿಲೇವಾರಿ ಮಾಡುತ್ತಿರುವುದು ಕಂಡುಬಂದಿದೆ. ಇದು 'ಕನ್ ಸ್ಟ್ರಕ್ಷನ್ ಆಂಡ್ ಡಿಮಾಲಿಷನ್ ವೇಸ್ಟ್ ಮ್ಯಾನೇಜ್‌ಮೆಂಟ್ ರೂಲ್ಸ್, 2016' ಮತ್ತು 'ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ರೂಲ್ಸ್, 2026'ರ ನಿಯಮಗಳಿಗೆ ವಿರುದ್ಧವಾಗಿದ್ದು, ಸಾರ್ವಜನಿಕ ಆರೋಗ್ಯ ಸಮಸ್ಯೆ ಹಾಗೂ ಸಂಚಾರಕ್ಕೆ ಅಡಚಣೆ ಉಂಟುಮಾಡುತ್ತಿದೆ.ನಿಯಮಗಳ ಪ್ರಕಾರ 'ಕಠಟಟಣಜಡಿ ಕಚಿಥಿ ಕಡುಟಿಟಭಿಟಿಟಜ' (ಮಾಲಿನ್ಯಕಾರಕರೇ ದಂಡ ತೆರಬೇಕು) ಆಧಾರದ ಮೇಲೆ ಸ್ಥಳೀಯ ಸಂಸ್ಥೆಗಳಿಗೆ ಪರಿಸರ ಪರಿಹಾರ/ದಂಡ ವಿಧಿಸಲು ಅಧಿಕಾರ ನೀಡಲಾಗಿದೆ. ಹಾಗಾಗಿ ಕಟ್ಟಡ ಮಾಲೀಕರು ಮತ್ತು ಗುತ್ತಿಗೆದಾರರು ತ್ಯಾಜ್ಯವನ್ನು ಪುರಸಭೆ ಸೂಚಿಸಿದ ಸ್ಥಳಗಳಿಗೆ ಮಾತ್ರ ಸಾಗಿಸಬೇಕು.*ನಿಯಮಿತ ಬಳಕೆದಾರರ ಶುಲ್ಕ:*ವಸತಿ ಮನೆಗಳು (0–300 ಚ.ಮೀ.): ರೂ.4/ಚ.ಮೀ.ವಸತಿ ಮನೆಗಳು (300 ಚ.ಮೀ. ಮೇಲ್ಪಟ್ಟು): ರೂ.12/ ಚ.ಮೀ.ವಾಣಿಜ್ಯ ಕಟ್ಟಡಗಳು (0–300 ಚ.ಮೀ. ವರೆಗೆ): ರೂ.10/ಚ.ಮೀ.ವಾಣಿಜ್ಯ ಕಟ್ಟಡಗಳು (300 ಚ.ಮೀ. ಮೇಲ್ಪಟ್ಟು): ರೂ.16/ಚ.ಮೀ.*ಉಲ್ಲಂಘನೆಗೆ ವಿಧಿಸಲಾಗುವ ದಂಡ:*ರಸ್ತೆ, ಚರಂಡಿ, ಖಾಲಿ ನಿವೇಶನ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ತ್ಯಾಜ್ಯ ಹಾಕಿದರೆ ರೂ.3,000 ದಂಡ ವಿಧಿಸಲಾಗುತ್ತದೆ. ಪುರಸಭೆ ಸೂಚನೆಯ ನಂತರವೂ ತ್ಯಾಜ್ಯ ತೆರವುಗೊಳಿಸದಿದ್ದರೆ ರೂ.2,000 (ಪ್ರತಿ ಟ್ರಿಪ್‌ಗೆ) ದಂಡದ ಜೊತೆಗೆ ತೆರವು ವೆಚ್ಚವನ್ನು ಪ್ರತ್ಯೇಕವಾಗಿ ವಸೂಲಿ ಮಾಡಲಾಗುತ್ತದೆ.

(ಅ&ಆ ತ್ಯಾಜ್ಯ ಸಂಗ್ರಹಿಸುವ ಸೇವಾ ಸಂಸ್ಥೆ ಸಂಪರ್ಕ ಸಂಖ್ಯೆ: ಪುರಸಭೆ ಕಾರ್ಯಾಲಯ, ಕುರುಗೋಡು – ಮೊ. 8660771816)(ಅ&ಆ ತ್ಯಾಜ್ಯ ಸಂಗ್ರಹಿಸುವ ಸೇವಾ ಸಂಸ್ಥೆ ಸಂಪರ್ಕ ಸಂಖ್ಯೆ: ಪುರಸಭೆ ಕಾರ್ಯಾಲಯ, ಕಂಪ್ಲಿ – ಮೊ. 9611226509)*ನಿಷೇಧಿತ ಪ್ಲಾಸ್ಟಿಕ್ ಬಳಕೆಗೆ ಜಾರಿಗೊಳಿಸಿದ ದಂಡದ ವಿವರ:*ಕುರುಗೋಡು ಮತ್ತು ಕಂಪ್ಲಿ ಪಟ್ಟಣಗಳಲ್ಲಿ ನಿಷೇಧಿತ ಪ್ಲಾಸ್ಟಿಕ್ ಪ್ರಮಾಣ ಹಾಗೂ ಮಾರಾಟ ಸ್ಥಳ ಆಧರಿಸಿ ಪ್ರತ್ಯೇಕ ದಂಡ ಮತ್ತು ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

*ಪ್ಲಾಸ್ಟಿಕ್ ಪ್ರಮಾಣ ಆಧರಿಸಿ ವಿಧಿಸುವ ದಂಡ:*

01 ಕೆ.ಜಿ. ಗಿಂತ ಕಡಿಮೆ: ಮೊದಲ ಬಾರಿಗೆ ರೂ.500, ಎರಡನೇ ಬಾರಿಗೆ ರೂ.1,00001 ರಿಂದ 10 ಕೆ.ಜಿ.ವರೆಗೆ: ಮೊದಲ ಬಾರಿಗೆ ರೂ.5,000, ಎರಡನೇ ಬಾರಿಗೆ ರೂ.10,000.10 ರಿಂದ 50 ಕೆ.ಜಿ.ವರೆಗೆ: ಮೊದಲ ಬಾರಿಗೆ ರೂ.10,000, ಎರಡನೇ ಬಾರಿಗೆ ರೂ.20,000.

50 ರಿಂದ 100 ಕೆ.ಜಿ.ವರೆಗೆ: ಮೊದಲ ಬಾರಿಗೆ ರೂ.20,000, ಎರಡನೇ ಬಾರಿಗೆ ರೂ.40,000.

100 ಕೆ.ಜಿ.ಗಿಂತ ಹೆಚ್ಚಿದ್ದರೆ: ಮೊದಲ ಬಾರಿಗೆ ರೂ.40,000, ಎರಡನೇ ಬಾರಿಗೆ ರೂ.80,000.ಪುನರಾವರ್ತಿತ ಉಲ್ಲಂಘನೆ ಕಂಡುಬಂದಲ್ಲಿ ಉದ್ದಿಮೆ ಪರವಾನಗಿಯನ್ನು ರದ್ದುಗೊಳಿಸಲಾಗುವುದು ಮತ್ತು/ಅಥವಾ ಕಾನೂನಾತ್ಮಕ ಕ್ರಮ ಜರುಗಿಸಲಾಗುವುದು.*ಮಾರಾಟ ಮತ್ತು ಬಳಕೆಯ ಸ್ಥಳಗಳಲ್ಲಿ ವಿಧಿಸುವ ದಂಡ:*ಪ್ಲಾಸ್ಟಿಕ್ ಉತ್ಪಾದಕರಿಗೆ: ಮೊದಲ ಬಾರಿಗೆ ರೂ.25,000/–, ಪುನರಾವರ್ತನೆಯಾದರೆ ರೂ.50,000.ಉಗ್ರಾಣದಲ್ಲಿ (ಗೋದಾಮು) ಸಂಗ್ರಹಿಸಿದ್ದರೆ: ಮೊದಲ ಬಾರಿಗೆ ರೂ.15,000, ಪುನರಾವರ್ತನೆಯಾದರೆ ರೂ.20,000.ಪ್ಲಾಸ್ಟಿಕ್ ಮಾರಾಟ ಮಾಡಿದರೆ / ವಾಣಿಜ್ಯ ಬಳಕೆಗೆ: ಮೊದಲ ಬಾರಿಗೆ ರೂ.10,000, ಪುನರಾವರ್ತನೆಯಾದರೆ ರೂ.15,000. ತಳ್ಳುವ ಗಾಡಿಯಲ್ಲಿ ಬಳಸಿದರೆ: ಮೊದಲ ಬಾರಿಗೆ ರೂ.1,000, ಪುನರಾವರ್ತನೆಯಾದರೆ ರೂ.2,500. ಗೃಹ ಬಳಕೆ ಮಾಡಿದರೆ: ಮೊದಲ ಬಾರಿಗೆ ರೂ.500, ಪುನರಾವರ್ತನೆಯಾದರೆ ರೂ.1,000.ಸಾರ್ವಜನಿಕರು ಕೈಯಲ್ಲಿ ಹಿಡಿದು ಬಳಸಿದರೆ: ಮೊದಲ ಬಾರಿಗೆ ರೂ.200, ಪುನರಾವರ್ತನೆಯಾದರೆ ರೂ.500.ಪುರಸಭೆಯ ಆಡಳಿತ ಮಂಡಳಿಯು ಸಾರ್ವಜನಿಕರು, ಕಟ್ಟಡ ಮಾಲೀಕರು ಹಾಗೂ ವರ್ತಕರು ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಪಟ್ಟಣದ ನೈರ್ಮಲ್ಯಕ್ಕೆ ಸಹಕರಿಸಬೇಕೆಂದು ಕುರುಗೋಡು ಮತ್ತು ಕಂಪ್ಲಿ ಪುರಸಭೆಗಳ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಬಳ್ಳಾರಿ ಜಿಲ್ಲೆ: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ; ಶೇ. 80.87 ರಷ್ಟು ಡಿಜಿಟಲೀಕರಣ ಪೂರ್ಣ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ಭರದಿಂದ ಸಾಗುತ್ತಿದ್ದು, ಬುಧವಾರದ ಅಂತ್ಯಕ್ಕೆ ಶೇಕಡಾ 80.87 ರಷ್ಟು ಡಿಜಿಟಲೀಕರಣ ಕಾರ್ಯ ಪೂರ್ಣಗೊಂಡಿದೆ.

ಜಿಲ್ಲೆಯಲ್ಲಿ ಒಟ್ಟು 12,29,586 ಮತದಾರರಿದ್ದಾರೆ. ಶೇ.100 ರಷ್ಟು ಮನೆ ಮನೆಗೆ ಎಸ್‌ಐಆರ್ ಎನ್ಯುಮರೇಷನ್ ಫಾರ್ಮ್ಗಳನ್ನು (12,29,586) ವಿತರಿಸಲಾಗಿದೆ. ಆಗಸ್ಟ್ 08 ರ ವರೆಗೆ ಮನೆ ಮನೆ ಸಮೀಕ್ಷೆ ಹಾಗೂ ಸಲ್ಲಿಕೆಯಾದ ಫಾರ್ಮ್ಗಳ ಡಿಜಿಟಲೀಕರಣ ಕಾರ್ಯ ನಡೆಯಲಿದೆ. ಆಗಸ್ಟ್ 17 ರಂದು ಕರಡು ಮತದಾರರ ಪಟ್ಟಿ ಪ್ರಕಟಿಸಲಾಗುತ್ತದೆ. ಈವರೆಗೆ ಒಟ್ಟು 4,925 ಮತದಾರರು ಆನ್‌ಲೈನ್ ಮೂಲಕ ನಮೂನೆಗಳನ್ನು ಸಲ್ಲಿಸಿದ್ದಾರೆ.*ಒಟ್ಟು ಡಿಜಿಟಲೀಕರಣ ಮತ್ತು ಪರಿಶೀಲನೆ ವಿವರ:*ಜಿಲ್ಲೆಯಲ್ಲಿ ಈವರೆಗೆ ಒಟ್ಟು 9,94,306 (ಶೇ.80.87) ಎಸ್‌ಐಆರ್ ಗಣತಿ ನಮೂನೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ.1,56,891 ಮತದಾರರನ್ನು ಎಎಸ್‌ಡಿಡಿಒ (ಅನುಪಸ್ಥಿತ/ಸ್ಥಳಾಂತರ/ಮೃತ ಇತ್ಯಾದಿ) ವರ್ಗದಡಿ ಗುರುತಿಸಲಾಗಿದೆ.

12,539 ಗೈರುಹಾಜರಿ/ಪತ್ತೆಯಾಗದ ಮತದಾರರು, 86,241 ಶಾಶ್ವತವಾಗಿ ಸ್ಥಳಾಂತರಗೊಂಡವರು, 38,652 ಮೃತಪಟ್ಟ ಮತದಾರರು, 18,978 ಈಗಾಗಲೇ ನೋಂದಾಯಿತರಾಗಿರುವ ಮತದಾರರು, 481 ಇತರರು.

*ವಿಧಾನಸಭಾ ಕ್ಷೇತ್ರವಾರು ಪ್ರಗತಿ ವರದಿ:*

ಜಿಲ್ಲೆಯ 5 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 1,227 ಮತಗಟ್ಟೆ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಕ್ಷೇತ್ರವಾರು ಅಂಕಿ–ಅಂಶಗಳು ಹೀಗಿವೆ:

ಕಂಪ್ಲಿ (91): 2,28,666– ಒಟ್ಟು ಮತದಾರರು, 2,04,310– ಡಿಜಿಟಲೀಕರಣಗೊಂಡ ನಮೂನೆಗಳು, 22,585 (ಸ್ಥಳಾಂತರ: 11,416, ಮೃತ: 5,812)– ಗುರುತಿಸಲಾದ ಎಎಸ್‌ಡಿಡಿಒ ಸಂಖ್ಯೆ.

ಸಿರುಗುಪ್ಪ (92): 2,28,277– ಒಟ್ಟು ಮತದಾರರು, 1,94,518– ಡಿಜಿಟಲೀಕರಣಗೊಂಡ ನಮೂನೆಗಳು, 31,519 (ಸ್ಥಳಾಂತರ: 16,817, ಮೃತ: 6,650)– ಗುರುತಿಸಲಾದ ಎಎಸ್‌ಡಿಡಿಒ ಸಂಖ್ಯೆ.

ಬಳ್ಳಾರಿ (93): 2,51,325– ಒಟ್ಟು ಮತದಾರರು, 1,97,218– ಡಿಜಿಟಲೀಕರಣಗೊಂಡ ನಮೂನೆಗಳು, 39,745 (ಸ್ಥಳಾಂತರ: 23,165, ಮೃತ: 8,422)– ಗುರುತಿಸಲಾದ ಎಎಸ್‌ಡಿಡಿಒ ಸಂಖ್ಯೆ.

ಬಳ್ಳಾರಿ ನಗರ (94): 2,79,144– ಒಟ್ಟು ಮತದಾರರು, 1,97,281– ಡಿಜಿಟಲೀಕರಣಗೊಂಡ ನಮೂನೆಗಳು, 31,479 (ಸ್ಥಳಾಂತರ: 16,291, ಮೃತ: 11,144)– ಗುರುತಿಸಲಾದ ಎಎಸ್‌ಡಿಡಿಒ ಸಂಖ್ಯೆ.

ಸಂಡೂರು (95): 2,42,174– ಒಟ್ಟು ಮತದಾರರು, 2,00,979– ಡಿಜಿಟಲೀಕರಣಗೊಂಡ ನಮೂನೆಗಳು, 31,563 (ಸ್ಥಳಾಂತರ: 18,552, ಮೃತ: 6,624)– ಗುರುತಿಸಲಾದ ಎಎಸ್‌ಡಿಡಿಒ ಸಂಖ್ಯೆ.

ಬಿ.ಎಲ್.ಒ ಗಳ ಮೂಲಕ ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಣೆ ಹಾಗೂ ಡಿಜಿಟಲೀಕರಣ ಪ್ರಕ್ರಿಯೆಯು ಆಗಸ್ಟ್ 8 ರವರೆಗೆ ಮುಂದುವರಿಯಲಿದ್ದು, ಸಾರ್ವಜನಿಕರು ಹಾಗೂ ಮತದಾರರು ಸೂಕ್ತ ಮಾಹಿತಿ ನೀಡಿ ಜಿಲ್ಲಾಡಳಿತದೊಂದಿಗೆ ಸಹಕರಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ: ಆನ್‌ಲೈನ್ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ತರಗತಿ ಕೊಠಡಿಯಲ್ಲಿ ವಿಷಯ ಪಾಂಡಿತ್ಯದ ಜೊತೆಗೆ ಪೂರಕ ಪರಿಕರಗಳನ್ನು ಬಳಸಿಕೊಂಡು, ಮಕ್ಕಳಲ್ಲಿ ಶಾಶ್ವತ ಹಾಗೂ ಸಂತಸದಾಯಕ ಕಲಿಕೆಯನ್ನು ಉಂಟುಮಾಡುವ ಬಹುಮುಖ ವ್ಯಕ್ತಿತ್ವದ ಶಿಕ್ಷಕರನ್ನು ಗುರುತಿಸಿ ಗೌರವಿಸಲು ರಾಜ್ಯ ಸರ್ಕಾರವು 2026–27ನೇ ಸಾಲಿನ "ರಾಜ್ಯ ಮಟ್ಟದ ಉತ್ತಮ ಶಿಕ್ಷಕ" ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

ಬಳ್ಳಾರಿ ಜಿಲ್ಲೆಯ ಎಲ್ಲಾ ತಾಲೂಕುಗಳ ಅರ್ಹ ಪ್ರಾಥಮಿಕ/ಪ್ರೌಢಶಾಲಾ ಶಿಕ್ಷಕರು, ವಿಶೇಷ ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರು ಈ ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.ಅರ್ಜಿ ಸಲ್ಲಿಸಲು ಅಧಿಕೃತ ವೆಬ್‌ಸೈಟ್ https://schooleducation.karnataka.gov.in ಗೆ ಭೇಟಿ ನೀಡಬಹುದು.

ಜಿಲ್ಲೆಯ ಅರ್ಹ ಶಿಕ್ಷಕರು ಆನ್‌ಲೈನ್ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸುವಂತೆ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ) ಪ್ರಕಟಣೆಯಲ್ಲಿ ಕೋರಿದ್ದಾರೆ.

# ಶಿಕ್ಷಣದ ಜೊತೆಗೆ ಮಕ್ಕಳಿಗೆ ಸಂಸ್ಕೃತಿಯ ಅರಿವು ಅಗತ್ಯ: ಕೊಟ್ರೇಶ್




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಶಿಕ್ಷಣದ ಜೊತೆಗೆ ಮಕ್ಕಳಿಗೆ ನಮ್ಮ ಸಂಸ್ಕೃತಿ, ಕಲೆ ಹಾಗೂ ಪರಂಪರೆಯ ಬಗ್ಗೆ ಅರಿವು ಮೂಡಿಸುವಂತಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸಬೇಕು ಎಂದು ಹೆಚ್.ಎಸ್.ಜಿ. ವಿದ್ಯಾಮಂದಿರದ ಪ್ರಾಂಶುಪಾಲ ಕೊಟ್ರೇಶ್ ಅವರು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ತೋರಣಗಲ್ಲಿನ ವಿದ್ಯಾನಗರದಲ್ಲಿರುವ ಜಿಂದಾಲ್ ವಿದ್ಯಾಮಂದಿರ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ 'ಚಿಗುರು ಸಾಂಸ್ಕೃತಿಕ ಕಾರ್ಯಕ್ರಮ' ಉದ್ಘಾಟಿಸಿ ಅವರು ಮಾತನಾಡಿದರು.

ಸಂಸ್ಕೃತಿ ಉಳಿದರೆ ನಾಡು ಉಳಿಯುತ್ತದೆ. ನಮ್ಮ ದೇಶದ ಸಂಸ್ಕೃತಿಗೆ ಕಲೆ, ನೃತ್ಯ, ಜನಪದ ಸಾಹಿತ್ಯ ಅಪಾರ ಕೊಡುಗೆ ನೀಡಿವೆ. ಇಂತಹ ಕಲಾ ಪ್ರಕಾರಗಳನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಹೇಳಿದರು.

ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಪ್ರತಿಭಾವಂತ ಕಲಾವಿದರಿದ್ದು, ಅವರಿಗೆ ಸೂಕ್ತ ವೇದಿಕೆ ಹಾಗೂ ಅವಕಾಶಗಳನ್ನು ಕಲ್ಪಿಸುವ ಅಗತ್ಯವಿದೆ. ಶಾಲಾ ಹಂತದಲ್ಲೇ ಮಕ್ಕಳಲ್ಲಿ ಸಂಸ್ಕೃತಿ ಹಾಗೂ ಕಲೆಯ ಬಗ್ಗೆ ಆಸಕ್ತಿ ಮೂಡಿಸಿದರೆ ಉತ್ತಮ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಜಿಂದಾಲ್ ವಿದ್ಯಾಮಂದಿರದ ಪ್ರಾಂಶುಪಾಲ ಕೆ.ವಿ. ಶ್ರೀನಿವಾಸನ್ ಅವರು ಮಾತನಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂದಿನ ದಿನಗಳಲ್ಲಿಯೂ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಿ ಜಿಲ್ಲೆಯ ಕಲಾವಿದರ ಪ್ರತಿಭೆಗೆ ಉತ್ತೇಜನ ನೀಡುವ ಕೆಲಸವನ್ನು ಮುಂದುವರಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಳ್ಳಾರಿಯ ಕವೀಂದ್ರ ಜೆ. ಅವರಿಂದ ತಬಲಾ ಸೋಲೊ, ಓ.ಎಂ. ವರ್ಷಿಣಿ ಅವರಿಂದ ಸುಗಮ ಸಂಗೀತ, ಬಳ್ಳಾರಿ ಕಲಾಂಜಲಿ ಕಲಾ ಟ್ರಸ್ಟ್ನ ವಿದ್ಯಾರ್ಥಿಗಳಿಂದ ಸಮೂಹ ನೃತ್ಯ, ಪ್ರಿಯಾಂಕಾ ಎಂ. ಜೋಶಿ ಅವರಿಂದ ಜಾನಪದ ಗೀತೆಗಳು, ಕು. ಸುಮಲತಾ ಅವರಿಂದ ಏಕಪಾತ್ರಾಭಿನಯ ಹಾಗೂ ಕು. ಡಿ. ಕೃಷ್ಣಮೂರ್ತಿ ಮತ್ತು ತಂಡದಿಂದ 'ವಿದ್ಯೆ ತಂದ ಸಂಪತ್ತು' ನಾಟಕ ಪ್ರದರ್ಶನ ನಡೆಯಿತು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ. ನಾಗರಾಜ, ಜಿಂದಾಲ್ ವಿದ್ಯಾಮಂದಿರದ ಉಪ ಪ್ರಾಂಶುಪಾಲ ಅಂಬಲಿ ನಾಯರ್, ಜಿಂದಾಲ್ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಕುಮಾರಸ್ವಾಮಿ, ಸಂಗೀತ ಗಾಯಕ ಕೊಟ್ರೇಶ್, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಎಸ್ ಎಸ್ ಎಲ್‌ಸಿ – ಪಿಯುಸಿ ವಿದ್ಯಾರ್ಥಿಗಳಿಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಪ್ರಸಕ್ತ 2025–26ನೇ ಶೈಕ್ಷಣಿಕ ಸಾಲಿನಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ ಎಸ್ ಎಸ್ ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ 13ನೇ ವಾರ್ಡಿನ ಪಾಲಿಕೆಯ ಸದಸ್ಯ, ಮಾಜಿ ಮೇಯರ್ ಸಿ.ಇಬ್ರಾಹಿಂಬಾಬು ಹಾಗೂ ಗೆಳೆಯರ ಬಳಗದ ವತಿಯಿಂದ ಗುರು ಪೂರ್ಣಿಮಾ ನಿಮಿತ್ಯ ಸನ್ಮಾನಿಸಲಾಯಿತು.ಬುಧವಾರ ಸಂಜೆ ನಗರದ ಮಿಲ್ಲರ್ ಪೇಟೆಯಲ್ಲಿ ಏರ್ಪಡಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಂಶುಪಾಲ ಕಾಂಡ್ರಾ ಶ್ರೀರಾಮುಲು ಅವರು ಸನ್ಮಾನಿಸಿದರು.

ಶೇ.80ಕ್ಕಿಂತ ಹೆಚ್ಚು ಅಂಕ ಗಳಸಿರುವ ಒಟ್ಟು 17 ಜನ ಎಸ್ ಎಸ್ ಎಲ್‌ಸಿ ವಿದ್ಯಾರ್ಥಿಗಳಿಗೆ, 25 ಜನ ಪಿಯುಸಿ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಮಾಜಿ ಮೇಯರ್ ಇಬ್ರಾಹಿಂಬಾಬು ಸೇರಿದಂತೆ ಹಲವರು ಹಾಜರಿದ್ದರು.

# ಗುರು ಪೂರ್ಣಿಮೆ ಪ್ರಯುಕ್ತ ನಿವೃತ್ತ ಶಿಕ್ಷಕರಿಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು

ಜು 30 : ಪಟ್ಟಣದ ಸರಕಾರಿ ಬಾಲಕರ ಪ್ರೌಢಶಾಲೆಯಲ್ಲಿ ಸುಮಾರು 15 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ಶಿಷ್ಯ ವರ್ಗದಲ್ಲಿ ಃಃಖ ಸಾರ್ ಎಂದೇ ಪರಿಚಿತರಾದ ಬಿ.ಬಸವರಾಜ ಅವರಿಗೆ ಬುಧವಾರ ಬೆಳಿಗ್ಗೆ ಅವರ ವಸತಿ ಗೃಹದಲ್ಲಿ ಯುನಿಕ್ ಚಾರಿಟಬಲ್ ಟ್ರಸ್ಟ್ ಸದಸ್ಯರು ಸನ್ಮಾನ ಮಾಡಿ ಗೌರವಿಸಿದರು.

ಯುನಿಕ್ ಚಾರಿಟಬಲ್ ಟ್ರಸ್ಟ್ ಸದಸ್ಯರು ಹಾಗೂ ಅವರ ಪರವಾಗಿ ಇಂದು ಗುರು ಪೂರ್ಣಿಮೆ ಪ್ರಯುಕ್ತ ಯುನಿಕ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರಾದ ಪಿ.ಎಂ. ಈಶ್ವರಯ್ಯ ಹಾಗೂ ಸದಸ್ಯರಾದ ಎಸ್.ಎಂ. ಗುರುಬಸವರಾಜ, ಮತ್ತು ಆರ್. ಎಂ. ಗುರುಬಸವರಾಜ ಇವರು ಹುಟ್ಟಿನಿಂದಲೇ "ಗುರು" ಸ್ಥಾನದಲ್ಲಿರುವುದನ್ನು ಕಂಡ ಗೆಳೆಯರಿಗೆ ಸಹ ಗುರು ಪೂರ್ಣಿಮೆ ಪ್ರಯುಕ್ತ ಶುಭಕೋರಿ ಆರ್ಶೀವಾದ ಪಡೆಯಲಾಯಿತು. ಗುರು ಪರಂಪರೆಯನ್ನ ಈ ಪುಣ್ಯದಿನವಾದ ಇಂದು ಗುರುವೃಂದವನ್ನು ಸ್ಮರಿಸುತ್ತಿರುವುದು ನಮ್ಮೆಲ್ಲರ ಪುಣ್ಯ ಎಂದು ಭಂಡಾರಿ ರಾಘವೇಂದ್ರ, ಎಸ್. ಸುರೇಶ್, ಮಂಜುನಾಥ ಗಂಗಾವತಿ, ಮಲ್ಲಿಕಾರ್ಜುನ ಬಂಗಾರ ವ್ಯಾಪಾರಿಗಳು ಹೇಳಿದರು.

## ರಾಂಪುರದ ವ್ಯಕ್ತಿ ಕಾಣೆ..!

**ಬಾಗಲಕೋಟೆ:** ತಾಲೂಕಿನ ರಾಂಪುರ ಗ್ರಾಮದ ಹನಮಂತ ತಿಪ್ಪಣ್ಣ ವಾಲಿಕಾರ ಅವರ ಪುತ್ರ ಶಿವಾನಂದ ಹನಮಂತ ವಾಲಿಕಾರ 45 ವರ್ಷ.



ಈತ ಅನೇಕ ವರ್ಷಗಳಿಂದ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದು, 2023ರ ಮೇ.27ರಂದು ರಾಂಪುರ ಗ್ರಾಮದ ಬಸ್ ನಿಲ್ದಾಣ ಹತ್ತಿರ ಕೊನೆಯದಾಗಿ ಕಂಡವನು ನಂತರ ಕಾಣೆಯಾಗಿದ್ದಾನೆ. ಈತನು ಕನ್ನಡ,ಹಿಂದಿ,ಮರಾಠಿ ಭಾಷೆ ಮಾತಾಡುತ್ತಿದ್ದು, ಈತನ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಾಗಲಕೋಟೆ ಗ್ರಾಮೀಣ ಠಾಣೆ ಪಿಎಸ್ಐ 9480803947 ಇವರಿಗೆ ಸಂಪರ್ಕಿಸಲು ಕೋರಿದೆ.

## ವ್ಯಕ್ತಿ ನಾಪತ್ತೆ..!

**ಬಾಗಲಕೋಟೆ:** ತಾಲೂಕಿನ ಕಿರಸೂರ ಗ್ರಾಮದ ಯಮನಪ್ಪ ಕಿರಸೂರ ಅವರ ತಂದೆ ಗದಿಗೆಪ್ಪ ಸಣ್ಣತಮ್ಮಪ್ಪ ಕಿರಸೂರ 75 ವರ್ಷ ಇವರು



ದಿನಾಂಕ 2025ರ ಡಿಸೆಂಬರ 17 ರಂದು ಸಂಜೆ 5 ಗಂಟೆ ಸುಮಾರಿಗೆ ಮನೆಯಿಂದ ಹೊರಗೆ ಹೋದವನು ಎಲ್ಲಿಯೋ ಹೋಗಿ ಕಾಣೆಯಾಗಿದ್ದಾನೆ. ತಲೆಗೆ ಟವೆಲ್ ಸುತ್ತಿದ್ದು, ನೀಲಿ ಚಡ್ಡಿ ಧರಿಸಿದ್ದು, ಕೈಯಲ್ಲಿ ಊರುಗೋಲು ಹಿಡಿದುಕೊಂಡು ಇರುತ್ತಾರೆ. ಇವರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಾಗಲಕೋಟೆ ಗ್ರಾಮೀಣ ಠಾಣೆ ಪಿಎಸ್ಐ (9480803947)ಅವರಿಗೆ ಸಂಪರ್ಕಿಸಲು ಕೋರಿದೆ.

## ಬದುಕಿನ ಪಯಣದಲ್ಲಿ ಜೊತೆ ನಿಲ್ಲುವವರೇ ಗುರುಗಳು



**ಬಾಗಲಕೋಟೆ:** ಜೀವನದ ಜ್ಞಾನಯಾನಕ್ಕೆ ದೀಪ ಹಚ್ಚಿ, ಬದುಕಿನ ಪಯಣದಲ್ಲಿ ಮಾರ್ಗದರ್ಶನ ನೀಡಿ ಜೊತೆ ನಿಲ್ಲುವವರೇ ಗುರುಗಳು. ಗುರು ಎಂದರೆ ಕೇವಲ ಅಕ್ಷರ ಜ್ಞಾನವನ್ನು ಕಲಿಸುವವರಲ್ಲ. ಜೀವನದ ಏಳುಬೀಳುಗಳಲ್ಲಿ ಸೂಕ್ತ ಮಾರ್ಗದರ್ಶನ ನೀಡಿ, ಸನ್ಮಾರ್ಗದಲ್ಲಿ ಮುನ್ನಡೆಸುವವರೂ ಗುರುಗಳೇ ಆಗಿದ್ದಾರೆ ಎಂದು ಬಸವೇಶ್ವರ ಅಂತಾರಾಷ್ಟ್ರೀಯ ಪಬ್ಲಿಕ್ ಶಾಲೆಯ ಪ್ರಾಚಾರ್ಯೆ ಮಂಗಳಗೌರಿ ಹೆಗ್ಡೆ ಹೇಳಿದರು.

ಬುಧವಾರ ವಿದ್ಯಾಗಿರಿಯ ಬಸವೇಶ್ವರ ಅಂತಾರಾಷ್ಟ್ರೀಯ ಪಬ್ಲಿಕ್ ಶಾಲೆಯಲ್ಲಿ ಗುರು ಪೂರ್ಣಿಮೆಯ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜೀವನದಲ್ಲಿ ಗುರುಗಳನ್ನು ಸದಾ ಗೌರವಿಸಿ ಸ್ಮರಿಸಬೇಕು. ಇದರಿಂದ ಗುರು–ಶಿಷ್ಯರ ಸಂಬಂಧದ ಮೌಲ್ಯ ಮತ್ತಷ್ಟು ಗಟ್ಟಿಯಾಗುತ್ತದೆ ಎಂದರು.

ನಮ್ಮ ಗುರಿಗಳನ್ನು ಸಾಧಿಸಲು ಒಬ್ಬ ಉತ್ತಮ ಗುರುವಿನ ಮಾರ್ಗದರ್ಶನ ಅಗತ್ಯ ಎಂಬ ಮಾತು ಅಕ್ಷರಶಃ ಸತ್ಯವಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಗುರುಗಳ ಮಾರ್ಗದರ್ಶನದಲ್ಲಿ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ಉಜ್ವಲ ಭವಿಷ್ಯವನ್ನು ಕಟ್ಟಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕ ಸುರೇಶ ಹೆಗ್ಡೆ ಮಾತನಾಡಿ, ಗುರುಗಳೆಂದರೆ ಕೇವಲ ವಿದ್ಯೆ ಕಲಿಸುವ ಶಿಕ್ಷಕರಷ್ಟೇ ಅಲ್ಲ. ಮನೆಯಲ್ಲಿರುವ ಹೆತ್ತವರು, ಪೋಷಕರು ಹಾಗೂ ನಮ್ಮ ಸರಿ–ತಪ್ಪುಗಳನ್ನು ತಿದ್ದಿ ಸರಿದಾರಿಯಲ್ಲಿ ಮುನ್ನಡೆಸುವ ಪ್ರತಿಯೊಬ್ಬ ವ್ಯಕ್ತಿಯೂ ಗುರುವೇ ಆಗಿದ್ದಾರೆ, ಗುರುಗಳ ಆಶೀರ್ವಾದವು ನಮ್ಮ ಜೀವನದ ದಾರಿದೀಪವಾಗಬೇಕು. ಜ್ಞಾನ, ಸಂಸ್ಕಾರ ಹಾಗೂ ಸನ್ಮಾರ್ಗವನ್ನು ತೋರಿಸುವ ಪ್ರತಿಯೊಬ್ಬರೂ ಗುರು ಸ್ಥಾನಕ್ಕೆ ಅರ್ಹರಾಗಿದ್ದಾರೆ ಎಂದರು.

ಬೀಳೂರು ಗುರುಬಸವ ಗುರುಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಬಳಿಕ ವಿದ್ಯಾರ್ಥಿಗಳಿಂದ ಗುರುವಿನ ಮಹತ್ವವನ್ನು ಸಾರುವ ಸೊಗಸಾದ ನೃತ್ಯ ಪ್ರದರ್ಶನಗಳು ಹಾಗೂ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ನಡೆದವು.

MVC. No: 2028/2025
**BEFORE THE MOTOR ACCIDENT CLAIMS TRIBUNAL NO, VI VJAYAPUR, AT: VJAYAPUR**

1. Vijay S/o Pandurang Tasgaonkar. ... Petitioners.

/// Versus ///

1. P.Navaladi S/o Perumal, ... Respondents.

**"NOTICE UNDER ORDER-V RULE-20 (1)(A) OF CPC",**

To.
Respondent. No. 1
P.Navaladi S/o Perumal,
Age: 40 years, Occ: Business,
R/o. No.07, RC Complex, 206-261,
S.G.Mutt Road, Chamarajpet, Bengaluru-560018.
(Owner of Truck No. KA-01/AE-6291).

Whereas the petitioner have instituted the claim petition against you for grant of compensation on account of death of Renuka W/o Vijay Tasgaonkar in road traffic accident. You are the Owner of Truck No. KA-01/AE-6291 by name P.Navaladi S/o Perumal as Respondent No. 1 in this case. You are hereby summonsed to appear in this court in person on the at about 11.00 A.M to answer and you are directed to produce on that day 24/09/2026 with all the documents upon which you intended to reply in support of your defense.

Take notice that, in default of your appearance on the day produce on that day mentioned, the petition will heard & determined in your absence.

Given under my hand the seal of the court this day of 24/7/2026.

By order of the court.
(H.B.Shirol) Senior Sharistedar (Adm)
Advocate for the application PRL SR CJ & CJM COURT Vijayapura.

MVC. No: 2205/2025
**BEFORE THE MOTOR ACCIDENT CLAIMS TRIBUNAL NO, VI VJAYAPUR, AT: VJAYAPUR.**

1. Uday S/o Pandurang Tasgaonkar. ... Petitioners.

/// Versus ///

1. P.Navaladi S/o Perumal, ..Respondents.

**"NOTICE UNDER ORDER-V RULE-20 (1) (A) OF CPC".**

To,
Respondent. No. 1
P.Navaladi S/o Perumal,
Age: 40 years, Occ: Business,
R/o. No.07, RC Complex, 206-261,
S.G.Mutt Road, Chamarajpet, Bengaluru-560018.
(Owner of Truck No. KA-01/AE-6291).

Whereas the petitioner have instituted the claim petition against you for grant of compensation on account of death of Shalini W/o Pandurang Tasgaonkar in road traffic accident. You are the Owner of Truck No. KA-01/AE-6291 by name P.Navaladi S/o Perumal as Respondent No. 1 in this case. You are hereby summonsed to appear in this court in person on the at about 11.00 A.M to answer and you are directed to produce on that day 24/09/2026 with all the documents upon which you intended to reply in support of your defense.

Take notice that, in default of your appearance on the day mentioned, the petition will heard & determined in your absence.

Given under my hand the seal of the court this day of 24/7/2026.

By order of the court.
(H.B.Shirol) Senior Sharistedar (Adm)
Advocate for the application PRL SR CJ & CJM COURT Vijayapura.

# ಆಧ್ಯಾತ್ಮ ದೈವತ್ವಕ್ಕೇರಿಸುವ ಮಾರ್ಗ: ಪ್ರಭು ಸ್ವಾಮೀಜಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಭಾರತೀಯ ಆಧ್ಯಾತ್ಮ, ಸಾಹಿತ್ಯ ಮತ್ತು ಸಂಸ್ಕೃತಿ ಮಾನವ ಬದುಕಿಗೆ ಬೆಳಕು ನೀಡಿ, ಮಾನವೀಯ ಮೌಲ್ಯಗಳನ್ನು ಉದ್ದೀಪನಗೊಳಿಸಿ, ವ್ಯಕ್ತಿತ್ವವನ್ನು ಪರಿಪಕ್ವಗೊಳಿಸುವ ಮೂಲಕ ದೈವತ್ವಕ್ಕೇರಿಸುವ ಶಕ್ತಿ ಹೊಂದಿವೆ. ಈ ಕಾರಣದಿಂದಲೇ ಭಾರತೀಯ ಸಂಸ್ಕೃತಿ ವಿಶ್ವಮಾನ್ಯ ಸ್ಥಾನ ಪಡೆದಿದೆ ಎಂದು ಚರಂತಿಮಠದ ಪ್ರಭು ಮಹಾಸ್ವಾಮಿಗಳು ಹೇಳಿದರು.




ನಗರದ ಚರಂತಿಮಠದ ಶಿವಾನುಭವ ಮಂಟಪದಲ್ಲಿ ನಿರವಯಲಪಥಿಕ ಲಿಂ.ಪ್ರೊ.ಎಚ್.ಜಿ.ಮೃತ್ಯುಂಜಯ ಸ್ಮಾರಕ ಪ್ರತಿಷ್ಠಾನ, ಜಿಲ್ಲಾ ಹಾಗೂ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು, ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಲಿಂ. ಪ್ರೊ. ಎಚ್.ಜಿ.ಮೃತ್ಯುಂಜಯ ಅವರ ಪುಣ್ಯಸ್ಮರಣೆ, ಪ್ರಶಸ್ತಿ ಪ್ರದಾನ, ದತ್ತಿ ಉಪನ್ಯಾಸ ಹಾಗೂ 'ವಚನಾಮೃತ2' ಗ್ರಂಥ ಬಿಡುಗಡೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಪ್ರೊ. ಎಚ್.ಜಿ. ಮೃತ್ಯುಂಜಯ ಅವರು ಆಧ್ಯಾತ್ಮಿಕ ಸಾಧನೆಯ ಮೂಲಕ ದೈವತ್ವಕ್ಕೇರಿದ ಮಹನೀಯರಾಗಿದ್ದು, ಅವರ ಆದರ್ಶಗಳನ್ನು ಚಿರಸ್ಥಾಯಿಗೊಳಿಸುವ ಉದ್ದೇಶದಿಂದ ಪ್ರತಿಷ್ಠಾನವು ಪ್ರತಿವರ್ಷ ಪುಣ್ಯಸ್ಮರಣೆಯ ಅಂಗವಾಗಿ ಆಧ್ಯಾತ್ಮ ಮತ್ತು ಶರಣ ಸಾಹಿತ್ಯ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಧಕರಿಗೆ ಪ್ರಶಸ್ತಿಗಳನ್ನು ಪ್ರದಾನ ಮಾಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ಹೇಳಿದರು.

'ಆಧ್ಯಾತ್ಮ ಸಾಹಿತ್ಯ ದೀಪಕ' ಪ್ರಶಸ್ತಿ ಸ್ವೀಕರಿಸಿದ ಶಿವಮೊಗ್ಗೆಯ ಮಂಕುತಿಮ್ಮನ ಕಗ್ಗ ಪ್ರವಚನಕಾರ ವಿದ್ವಾನ್ ಜಿ.ಎಸ್. ನಟೇಶ ಅವರು ಆಧ್ಯಾತ್ಮ ಸಾಹಿತ್ಯದ ಮೌಲ್ಯಗಳು ಮತ್ತು ಅದರ ಮಹತ್ವವನ್ನು ಪ್ರತಿಪಾದಿಸಿದರು.

'ಶರಣ ಸಾಹಿತ್ಯ ದೀಪಿಕೆ' ಪ್ರಶಸ್ತಿ ಪುರಸ್ಕೃತ ವಿಜಯಪುರದ ಕೆ.ಸಿ.ಪಿ.ವಿಜ್ಞಾನ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ಉಷಾದೇವಿ ಹಿರೇಮಠ ಅವರು ಶರಣ ಸಾಹಿತ್ಯದ ಸಾಮಾಜಿಕ ಮಹತ್ವ ಹಾಗೂ ಸಮಾನತೆಯ ಸಂದೇಶವನ್ನು ವಿವರಿಸಿದರು. ದತ್ತಿ ಉಪನ್ಯಾಸ ನೀಡಿದ ಬಿವಿವಿ ಸಂಘದ ಆಡಳಿತಾಧಿಕಾರಿ ಹಾಗೂ ಸಾಹಿತಿ ಡಾ. ವಿ.ಎಸ್.ಕಟಗಿಹಳ್ಳಿಮಠ, ಪ್ರೊ.ಎಚ್.ಜಿ.ಮೃತ್ಯುಂಜಯ ಅವರ ಸಾಹಿತ್ಯ, ಆಧ್ಯಾತ್ಮ ಮತ್ತು ಸಾಂಸ್ಕೃತಿಕ ಸೇವೆಯನ್ನು ಸ್ಮರಿಸಿದರು.

ಕಾರ್ಯಕ್ರಮದ ಸಮ್ಮುಖ ವಹಿಸಿದ್ದ ಯರನಾಳ–ಉಕ್ಕಲಿಯ ಗುರುಸಂಗನಬಸವ ಸ್ವಾಮೀಜಿ ಹಾಗೂ ಟೀಕಿನಮಠದ ಮಲ್ಲಿಕಾರ್ಜುನ ಸ್ವಾಮಿಗಳು ಆಶೀರ್ವಚನ ನೀಡಿದರು.

ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಎ.ಎಸ್.ಪಾವಟೆಯವರ ವಚನಾಮೃತ–2 ಗ್ರಂಥವನ್ನು ಇದೇ ವೇಳೆ ಬಿಡುಗಡೆ ಮಾಡಲಾಯಿತು. ಶರಣ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಚಂದ್ರಶೇಖರ ಶೆಟ್ಟರ, ಕದಳಿ ಮಹಿಳಾ ವೇದಿಕೆಯ ಜಿಲ್ಲಾಧ್ಯಕ್ಷೆ ಎಸ್. ಎಚ್.ಶೆಟ್ಟರ, ಶ್ರೀಮತಿ ಸುಮಿತ್ರಾದೇವಿ ಹೆಬಸೂರ, ಪ್ರಭಾವತಿ ಹಿರೇಮಠ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಪಾಂಡುರಂಗ ಸಣ್ಣಪ್ಪನವರ, ಬಸವರಾಜ ಮುಕ್ಕುಪ್ಪಿ, ಶಿವಾನಂದ ಪೂಜಾರಿ, ಬಸವರಾಜ ತಿಪಶೆಟ್ಟಿ ಸೇರಿದಂತೆ ಅನೇಕ ಗಣ್ಯರು ಹಾಗೂ ಸಾಹಿತ್ಯಾಸಕ್ತರು ಉಪಸ್ಥಿತರಿದ್ದರು.

# ಸತ್ಯದ ಅನ್ವೇಷಣೆಯ ಮೂಲಕ ಜ್ಞಾನ ಸಂಪಾದಿಸಿ: ಡಾ.ಚಂದ್ರಿಕಾ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಗುರು ಪೂರ್ಣಿಮೆ ಗುರು–ಶಿಷ್ಯ ಪರಂಪರೆಯ ಮಹತ್ವವನ್ನು ಸಾರುವ ಪವಿತ್ರ ಹಬ್ಬವಾಗಿದ್ದು, ಜ್ಞಾನ ನೀಡಿದ ಗುರುಗಳಿಗೆ ಕೃತಜ್ಞತೆ ಅರ್ಪಿಸುವ ದಿನವಾಗಿದೆ. ಸತ್ಯದ ಅನ್ವೇಷಣೆಯ ಮೂಲಕ ಜ್ಞಾನವನ್ನು ಸಂಪಾದಿಸಿ, ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವವರೇ ನಿಜವಾದ ಶಿಷ್ಯರು ಎಂದು ಬಿ.ವಿ.ವಿ.ಸಂಘದ ಎಸ್.ಸಿ.ನಂದಿಮಠ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ.ಎಂ.ಪಿ.ಚಂದ್ರಿಕಾ ಹೇಳಿದರು.




ನಗರದ ಬಿ.ವಿ.ವಿ. ಸಂಘದ ನೂತನ ಸಭಾಭವನದಲ್ಲಿ ಬುಧವಾರ ನಡೆದ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ 2026–27ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ಸಂಘ, ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದವರು. ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿಗಳ ದೈಹಿಕ ಸಾಮರ್ಥ್ಯವನ್ನು ವೃದ್ಧಿಸುವುದಷ್ಟೇ ಅಲ್ಲದೆ, ಆತ್ಮವಿಶ್ವಾಸ, ನಾಯಕತ್ವ ಗುಣ, ಶಿಸ್ತು, ಸಹಕಾರ ಮನೋಭಾವ ಹಾಗೂ ಸಾಮಾಜಿಕ ಜವಾಬ್ದಾರಿಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಶಿಕ್ಷಣದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸುವ ವಿದ್ಯಾರ್ಥಿಗಳು ಜೀವನದ ವಿವಿಧ ಕ್ಷೇತ್ರಗಳಲ್ಲಿ ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಜಗನ್ನಾಥ ಚವ್ಹಾಣ ಮಾತನಾಡಿ, ಶಿಕ್ಷಣ ಕೇವಲ ಪಠ್ಯಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ, ವ್ಯಕ್ತಿತ್ವ ರೂಪಿಸುವ ಸಮಗ್ರ ಪ್ರಕ್ರಿಯೆಯಾಗಿದೆ. ವಿದ್ಯಾರ್ಥಿಗಳು ಕ್ರೀಡೆ, ಕಲೆ ಹಾಗೂ ಸಾಂಸ್ಕೃತಿಕ ವೇದಿಕೆಗಳ ಮೂಲಕ ತಮ್ಮ ಪ್ರತಿಭೆಯನ್ನು ಅಭಿವ್ಯಕ್ತಿಗೊಳಿಸಿಕೊಂಡು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು. ಮಹಾವಿದ್ಯಾಲಯವು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ಕಲ್ಪಿಸುತ್ತಿದೆ ಎಂದು ತಿಳಿಸಿದರು.

ಮಹಾವಿದ್ಯಾಲಯದ ಸಿಬ್ಬಂದಿ ಕಾರ್ಯದರ್ಶಿ ಡಾ.ನಂಜುಂಡಸ್ವಾಮಿ ಸ್ವಾಗತಿಸಿದರು. ಸಾಂಸ್ಕೃತಿಕ ಚಟುವಟಿಕೆಗಳ ಕಾರ್ಯಾಧ್ಯಕ್ಷ ಡಾ.ಬಸವರಾಜ ಖೋತ ಪ್ರಾಸ್ತಾವಿಕವಾಗಿ ಮಾತನಾಡಿ, ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಗಳನ್ನು ಹೊರತರಲು ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಅತ್ಯಂತ ಪರಿಣಾಮಕಾರಿ ವೇದಿಕೆಗಳಾಗಿವೆ ಎಂದು ಹೇಳಿದರು.

ವೇದಿಕೆಯಲ್ಲಿ ಐಕ್ಯೂಎಸಿ ಸಂಯೋಜಕಿ ಶ್ರೀಮತಿ ಜಿ.ಎಂ.ನಾವದಗಿ, ಎಂ.ಕಾಂ.ವಿಭಾಗದ ವಿದ್ಯಾರ್ಥಿ ಪ್ರತಿನಿಧಿ ಕುಮಾರಿ ಸೌಮ್ಯ ಕುಂಬಾರ ಹಾಗೂ ಬಿ.ಬಿ.ಎ. ವಿಭಾಗದ ವಿದ್ಯಾರ್ಥಿ ಪ್ರತಿನಿಧಿ ಮಾಯರಾಜ ಉಪಸ್ಥಿತರಿದ್ದರು.

ಪಾಂಡುರಂಗ ರಾಠೋಡ ಪರಿಚಯಿಸಿದರು. ದೈಹಿಕ ಶಿಕ್ಷಣ ನಿರ್ದೇಶಕ ಡಾ.ಎಸ್.ಎಸ್.ಕೋಟ್ಯಾಳ ವಂದಿಸಿದರು. ಡಾ.ಐ.ಕೆ.ಮಠದ ಕಾರ್ಯಕ್ರಮ ನಿರೂಪಿಸಿದರು.

# ಮಹಿಳೆಯರ ಮೇಲಿನ ದೌರ್ಜನ್ಯ ಸಲ್ಲದು: ನಾಗಲಕ್ಷ್ಮೀ ಚೌಧರಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಮಹಿಳೆಯರ ಮೇಲಿನ ಯಾವುದೇ ರೀತಿಯ ದೌರ್ಜನ್ಯ, ಲೈಂಗಿಕ ಕಿರುಕುಳ ಮತ್ತು ತಾರತಮ್ಯಕ್ಕೆ ಸಮಾಜದಲ್ಲಿ ಅವಕಾಶ ಇರಬಾರದು ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ನಾಗಲಕ್ಷ್ಮೀ ಚೌಧರಿ ಹೇಳಿದರು.



ಜಿಲ್ಲಾಡಳಿತ ಭವನದಲ್ಲಿರುವ ಆಡಿಟೋರಿಯಂ ಹಾಲ್‌ನಲ್ಲಿ ಗುರುವಾರ ಜಿಲ್ಲಾಡಳಿತ, ಜಿ.ಪಂ ಕರ್ನಾಟಕ ರಾಜ್ಯ ಮಹಿಳಾ ಆಯೋಗ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ಜಿಲ್ಲಾ ಮತ್ತು ತಾಲೂಕಾ ಮಟ್ಟದ ಅಧಿಕಾರಿಗಳು, ಸ್ಥಳೀಯ ಮತ್ತು ಆಂತರಿಕ ದೂರು ನಿರ್ವಹಣಾ ಸಮಿತಿ ಅಧ್ಯಕ್ಷರುಗಳಿಗೆ ಹಮ್ಮಿಕೊಂಡ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಕಾಯ್ದೆ 2013ರ ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರ ಘನತೆ ಮತ್ತು ಹಕ್ಕುಗಳನ್ನು ರಕ್ಷಿಸುವ ಉದ್ದೇಶದಿಂದ ಈ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಸರ್ಕಾರಿ, ಖಾಸಗಿ, ಶೈಕ್ಷಣಿಕ ಹಾಗೂ ಇತರೆ ಉದ್ಯೋಗ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಸುರಕ್ಷಿತ ಕೆಲಸದ ವಾತಾವರಣ ಕಲ್ಪಿಸುವುದು ಕಡ್ಡಾಯವಾಗಿದೆ. ಪ್ರತಿಯೊಂದು ಸಂಸ್ಥೆಯಲ್ಲೂ ಆಂತರಿಕ ದೂರು ಸಮಿತಿ ರಚಿಸಿ, ದೂರುಗಳನ್ನು ಗೌಪ್ಯವಾಗಿ ಹಾಗೂ ನ್ಯಾಯಯುತವಾಗಿ ಪರಿಶೀಲಿಸಬೇಕು. ನಮ್ಮ ದೇಶದಲ್ಲಿ ಹೆಣ್ಣನ್ನು ಪೂಜ್ಯ ಭಾವನೆಯಿಂದ ನೋಡುತ್ತಿದ್ದರೂ ಸಹ ಅವರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ಇದು ನಿಲ್ಲಬೇಕು ಎಂದರು.


ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳಕ್ಕೆ ಒಳಗಾದ ಮಹಿಳೆಯರು ಧೈರ್ಯದಿಂದ ದೂರು ಸಲ್ಲಿಸಬೇಕು. ಮಹಿಳೆಯರ ವಿರುದ್ಧ ನಡೆಯುವ ಯಾವುದೇ ರೀತಿಯ ದೌರ್ಜನ್ಯವನ್ನು ಸಮಾಜ ಸಹಿಸಬಾರದು. ಮಹಿಳೆಯರ ಗೌರವ ಮತ್ತು ಸಮಾನತೆಯನ್ನು ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಮಹಿಳೆಯರ ಸುರಕ್ಷತೆ ತಮ್ಮ ಕೈಯಲ್ಲಿದೆ. ಇದನ್ನು ಅರಿತು ತಮ್ಮ ರಕ್ಷಣೆ ಮಾಡಿಕೊಳ್ಳಲು ಮುಂದಾಗಬೇಕು. ಪೋಶ್ ಎಂಬ ಕಾಯ್ದೆ ಜಾರಿಗೆ ಬರಲು ಕಾರಣರಾದವರ ಹೋರಾಟದ ಬಗೆಯನ್ನು ನಾಗಲಕ್ಷ್ಮೀ ಸ್ಮರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ, ಮಹಿಳೆಯರನ್ನು ಗೌರವಿಸುವುದು ಕೇವಲ ಕಾನೂನಿನ ಪಾಲನೆಯಲ್ಲ, ಅದು ನಮ್ಮ ಸಂಸ್ಕಾರ, ನಮ್ಮ ಮಾನವೀಯತೆ ಮತ್ತು ನಮ್ಮ ಸಾಮಾಜಿಕ ಜವಾಬ್ದಾರಿಯಾಗಿದೆ. ಪೋಶ್ ಅಧಿನಿಯಮದ ಮೂಲ ಆಶಯಗಳು ಮುಖ್ಯವಾಗಿ ತಡೆಗಟ್ಟುವಿಕೆ, ನಿಷೇಧ ಹಾಗೂ ಪರಿಹಾರ ಒಳಗೊಂಡಿದೆ. ಮಹಿಳೆಯರು ಆತ್ಮವಿಶ್ವಾಸದಿಂದ ಕೆಲಸ ಮಾಡಬೇಕು. ಮಹಿಳೆಯರಿಗೆ ಸುರಕ್ಷಿತ, ಗೌರವಯುತ ಮತ್ತು ಸಮಾನ ಅವಕಾಶಗಳನ್ನು ಒದಗಿಸುವ ಜಿಲ್ಲೆಯಾಗಿ ರೂಪಿಸುವ ಪ್ರಯತ್ನಕ್ಕೆ ಎಲ್ಲರೂ ಕೈಜೋಡಿಸಬೇಕಿದೆ ಎಂದರು.

# ಅಕ್ರಮಕ್ಕೆ ಅವಕಾಶ ಬೇಡ, ಶಾಂತಿಯುತ ಪರೀಕ್ಷೆ ನಡೆಸಲು ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಕರ್ನಾಟಕ ಪೊಲೀಸ್ ಇಲಾಖೆಯಲ್ಲಿನ ಸಿವಿಲ್ ಪೊಲೀಸ್ ಪೇದೆ ಹುದ್ದೆ ನೇಮಕಾತಿಗೆ ಬರುವ ಆಗಸ್ಟ್ 2 ರಂದು ಕಲಬುರಗಿ ನಗರದಾದ್ಯಂತ ಸುಮಾರು 40 ಪರೀಕ್ಷಾ ಕೇಂದ್ರದಲ್ಲಿ ಲಿಖಿತ ಪರೀಕ್ಷೆ ನಡೆಯಲಿದ್ದು, ಯಾವುದೇ ಅಕ್ರಮಕ್ಕೆ ಅವಕಾಶ ನೀಡದೆ ಶಾಂತಿಯುತ, ನ್ಯಾಯಸಮ್ಮತವಾಗಿ ಪರೀಕ್ಷೆ ನಡೆಸಬೇಕೆಂದು ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ಡಿ.ಸಿ. ಇಕ್ರಂ ಶರೀಫ್ ಖಡಕ್ ಸೂಚನೆ ನೀಡಿದರು.



ಬುಧವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪರೀಕ್ಷಾ ಕೇಂದ್ರದ ಮುಖ್ಯಸ್ಥರೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಅವರು, ಅಂದು ಬೆಳಗಿನ ಅವಧಿಯ ಪರೀಕ್ಷೆಗೆ 15,702 ಮತ್ತು ಮಧ್ಯಾಹ್ನ ಅವಧಿಯ ಪರೀಕ್ಷೆಗೆ 14,370 ಜನ ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಹೆಸರು ನೋಂದಣಿ ಮಾಡಿಕೊಂಡಿದ್ದಾರೆ ಎಂದರು.

ಪರೀಕ್ಷೆಗೆ ಮುನ್ನವೆ ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ ಕೊಠಡಿಯಲ್ಲಿನ ಗಾಳಿ ಬೆಳಕು, ವಿದ್ಯುತ್ ವ್ಯವಸ್ಥೆ, ಮೇಜಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲಸೌಲಭ್ಯ ಇರುವುದನು ಖಾತ್ರಿಪಡಿಸಿಕೊಳ್ಳಬೇಕು. ಒಟ್ಟಿನಲ್ಲಿ ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಯಾವುದೇ ರೀತಿಯ ಅನಾನುಕೂಲವಾಗದಂತೆ ಎಲ್ಲಾ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದರು.

ಇನ್ನು ಪರೀಕ್ಷೆ ಸುಸೂತ್ರವಾಗಿ ನಡೆಯುವ ನಿಟ್ಟಿನಲ್ಲಿ ಪ್ರತಿ ಕೇಂದ್ರಕ್ಕೆ ವೀಕ್ಷಕರು, ಜಾಗೃತ ದಳದ ಸದಸ್ಯರನ್ನು ನಿಯೋಜಿಸಿದೆ. ಪ್ರಶ್ನೆ ಪತ್ರಿಕೆ ಸಾಗಾಟಕ್ಕೆ ಪಾಲಕರನ್ನು ನಿಯೋಜಿಸಿದೆ. ಬಿಗಿ ಭದ್ರತೆಯಲ್ಲಿ ಪ್ರಶ್ನೆ ಮತ್ತು ಉತ್ತರ ಪತ್ರಿಕೆಗಳ ಸಾಗಾಟ ಮಾಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಡಿ.ಸಿ. ನಿರ್ದೇಶನ ನೀಡಿದರು.

**ಮೊಬೈಲ್ ಸೇರಿದಂತೆ ಎಲೆಕ್ಟ್ರಾನಿಕ್ ಸಾಧನ ನಿಷೇಧ:** ಮೊಬೈಲ್, ಬ್ಲೂಟೂಥ್, ಮೈಕ್ರೋಚಿಪ್, ಗಡಿಯಾರ, ಇಯರ್ ಫೋನ್, ಪೇಜರ್, ಕ್ಯಾಲಕುಲೇಟರ್ ಸೇರಿದಂತೆ ಯಾವುದೇ ರೀತಿಯ ಎಲೆಕ್ಟ್ರಾನಿಕ್ ಸಾಧನಗಳು ಮತ್ತು ಪಠ್ಯ ಸಾಮಗ್ರಿಗಳು ಪರೀಕ್ಷೆ ಕೇಂದ್ರಕ್ಕೆ ತೆಗೆದುಕೊಂಡು ಹೋಗುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಅಲ್ಲದೆ ಕೇಂದ್ರದ ಸುತ್ತ 200 ಮೀಟರ್ ಪ್ರದೇಶ ನಿಷೇಧಿತ ಪ್ರದೇಶವೆಂದು ಘೋಷಿಸಲಾಗುವುದು ಎಂದು ಡಿ.ಸಿ. ಇಕ್ರಂ ಶರೀಫ್ ತಿಳಿಸಿದರು.

**ಸಿ.ಸಿ.ಟಿ.ವಿ ಕಣ್ಗಾವಲಿನಲ್ಲಿ ಪರೀಕ್ಷೆ:** ದೇಶದಾದ್ಯಂತ ಪರೀಕ್ಷೆಯಲ್ಲಿನ ಅಕ್ರಮ ಘಟನೆಗಳು ನಮ್ಮುಂದಿವೆ. ನೇಮಕಾತಿ ಬಯಸುವ ಅಭ್ಯರ್ಥಿಗಳು ತುಂಬಾ ಕಷ್ಟಪಟ್ಟು ಅಧ್ಯಯನ ಮಾಡಿ ಪರೀಕ್ಷೆಗೆ ಸಿದ್ಧರಾಗಿರುತ್ತಾರೆ. ಹೀಗಾಗಿ ಪರೀಕ್ಷೆಯಲ್ಲಿ ಯಾವುದೇ ಹಂತದಲ್ಲಿ ನಕಲು, ಅಕ್ರಮ ಅವರಲ್ಲಿ ಹತಾಶೆ ಭಾವನೆ ಉಂಟು ಮಾಡುತ್ತದೆ. ಹೀಗಾಗಿ ಯಾವುದೇ ಅಕ್ರಮಕ್ಕೆ ಅವಕಾಶ ನೀಡಬಾರದು. ಪ್ರಶ್ನೆ ಪತ್ರಿಕೆ ತೆರೆಯುವುದರಿಂದ ಹಿಡಿದು ಪರೀಕ್ಷೆ ಪ್ರಕ್ರಿಯೆ ಸಂಪೂರ್ಣ ಮುಗಿಯುವವರೆಗೆ ಸಿ.ಟಿ.ಟಿ.ವಿ ಕಣ್ಗಾವಲಿನಲ್ಲಿ ನಡೆಯಬೇಕು. ವೆಬ್‌ಕಾಸ್ಟಿಂಗ್ ಮೂಲಕ ಪ್ರತಿ ಕೇಂದ್ರದ ಮೇಲೆ ಸರ್ಕಾರ ನಿಗಾ ವಹಿಸಿದೆ. ಯಾವುದೇ ಅಹಿತಕರ ಘಟನೆ ನಡೆದಲ್ಲಿ ಸಂಬಂಧಪಟ್ಟ ಕೇಂದ್ರದ ಮುಖ್ಯಸ್ಥರೆ ಹೊಣೆಗಾರರಾಗಲಿದ್ದಾರೆ ಎಂಬುದನ್ನು ಅಧಿಕಾರಿಗಳು ಮರೆಯಬಾರದು ಎಂದು ಡಿ.ಸಿ. ಎಚ್ಚರಿಕೆಯ ಮಾತುಗಳನ್ನಾಡಿದರು.

**ಅಕ್ರಮದಲ್ಲಿ ಭಾಗಿಯಾದರೆ ಸಜೆ:** ಸಾರ್ವಜನಿಕ ಪರೀಕ್ಷೆಗಳು (ಅನ್ಯಾಯದ ವಿಧಾನಗಳ ತಡೆಗಟ್ಟುವಿಕೆ) ಕಾಯ್ದೆ–2024ರ ಪ್ರಕಾರ ಯಾವುದೇ ವ್ಯಕ್ತಿ ನ್ಯಾಯಸಮ್ಮತ ಪರೀಕ್ಷೆ ನಡೆಸುವಲ್ಲಿ ನಿಷ್ಕಾಳಜಿ ಮತ್ತು ಅಕ್ರಮಕ್ಕೆ ಸಹಕಾರ ನೀಡಿದಲ್ಲಿ 5 ವರ್ಷ ಶಿಕ್ಷೆಗೆ ಅವಕಾಶವಿದೆ. ಇತ್ತೀಚಿನ ನೀಟ್ ಪರೀಕ್ಷೆ ಹಿನ್ನೆಲೆಯಲ್ಲಿ ಸದರಿ ಕಾಯ್ದೆಗೆ ತಿದ್ದುಪಡಿ ತಂದು ಆರೋಪಿತರಿಗೆ 10 ವರ್ಷದ ವರೆಗೆ ಗರಿಷ್ಠ ಶಿಕ್ಷೆ ನೀಡುವ ಚಿಂತನೆ ಸರ್ಕಾರದ ಮಟ್ಟದಲ್ಲಿ ಇದ್ದು, ಅಧಿಕಾರಿಗಳು ತಮಗೆ ವಹಿಸಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಬೇಕೆಂದು ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ. ಶರಣಪ್ಪ ತಿಳಿಸಿದರು.

**ಧಾರ್ಮಿಕಭಾವನೆಗೆಧಕ್ಕೆಯಾಗದಂತೆಫ್ರಿಸ್ಕಿಂಗ್:** ಯಾವುದೇ ಅಭ್ಯರ್ಥಿಯ ಧಾರ್ಮಿಕ ಭಾವನೆಗೆ ಧಕ್ಕೆಯಾಗದಂತೆ ಪೊಲೀಸ್ ಸಿಬ್ಬಂದಿ ಫ್ರಿಸ್ಕಿಂಗ್ ಮಾಡಬೇಕು. ಪ್ರತಿ ಅಭ್ಯರ್ಥಿಯ ಎ.ಐ ಆಧಾರಿತ ಮುಖ ಚಹರೆ ತೋರಿಸಿಯೆ ಕೇಂದ್ರದೊಳಗೆ ಪ್ರವೇಶಿಸಬೇಕು. ಇನ್ನು ಅಭ್ಯರ್ಥಿಗಳು ಉದ್ದು ತೋಳಗಳ ಡ್ರೆಸ್ ಧರಿಸಿ ಪರೀಕ್ಷೆಗೆ ಹಾಜರಾಗಬಾರದು. ಕಿವಿ, ತಲೆ, ಮುಖ ಮುಚ್ಚುವಂತಹ ಯಾವುದು ಉಡುಪುಗಳನ್ನು ಧರಿಸಬಾರದು. ಮೂಗುತಿ, ಮಂಗಳಸೂತ್ರ ಹೊರತುಪಡಿಸಿ ಯಾವುದೇ ಆಭರಣ, ಲೋಹದ ವಸ್ತುಗಳನ್ನು ಅಭ್ಯರ್ಥಿಗಳನ್ನು ಧರಿಸುವಂತಿಲ್ಲ. ಶೂ ಹಾಕಿಕೊಳ್ಳುವಂತಿಲ್ಲ. ಆದ–ರೆ ಕಡಿಮೆ ಹಿಮ್ಮಡಿಯಿರುವ ಸ್ಯಾಂಡಲ್ ಗಳನ್ನು ಧರಿಸಬಹುದಾಗಿದ್ದು, ಪ್ರವೇಶ ಪತ್ರದಲ್ಲಿ ನೀಡಿದ ಎಲ್ಲಾ ಸೂಚನೆಗಳನ್ನು ಪಾಲಿಸಬೇಕೆಂದು ಡ್ರೆಸ್ ಕೋಡ್ ಕುರಿತು ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ವಿವರವಾಗಿ ಮಾಹಿತಿ ನೀಡಿದರು.

ಸಭೆಯಲ್ಲಿ ಎಸ್.ಪಿ. ಅಡ್ಡೂರು ಶ್ರೀನಿವಾಸುಲು, ಡಿ.ಸಿ.ಪಿ ಶಾಲು, ಶಾಲಾ ಶಿಕ್ಷಣ (ಪದವಿ ಪೂರ್ವ) ಉಪನಿರ್ದೇಶಕ ದೇವನಗೌಡ ಪಾಟೀಲ ಸೇರಿದಂತೆ ಪರೀಕ್ಷೆ ಕೇಂದ್ರದ ಮುಖ್ಯಸ್ಥರು ಇದ್ದರು.

# ಕೃಷಿ ಪದವಿಧರರ ಹೋರಾಟಕ್ಕೆ ರೈತ ಸಂಘ ಬೆಂಬಲ



**ವಿಜಯಪುರ:** ಕೃಷಿ ಅಧಿಕಾರಿ ಹಾಗೂ ಸಹಾಯಕ ಕೃಷಿ ಅಧಿಕಾರಿ ಹುದ್ದೆ ನೇಮಕಾತಿಯಲ್ಲಿಕೃಷಿ ಪದವಿಧರರಿಗೆ ಮಾತ್ರ ಅವಕಾಶ ಕಲ್ಪಿವುದು ಸೇರಿದಂತೆ ಇನ್ನಿತರ ಬೇಡಿಕೆ ಈಡೇರಿಸುವಂತೆ ಕಳೆದ ಒಂದು ವಾರದಿಂದ ನಡೆಯುತ್ತಿರುವ ಹೋರಾಟಕ್ಕೆ ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆ ಬೆಂಬಲ ನೀಡಿದೆ.

ಕೃಷಿ ಪಧವಿದಾರರು ಪ್ರಮುಖವಾದ 6 ಬೇಡಿಕೆಗಳನ್ನು ಇಟ್ಟುಕೊಂಡು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ಸೂಚಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಕೃಷಿಮಹಾವಿದ್ಯಾಲಯದ ವಿದ್ಯಾಧಿಕಾರಿಗಳಾದ ಡಾ. ಎಂ ಎಂ ಜಮಾದಾರ ಅವರ ಮೂಲಕ ರಾಜ್ಯಸರ್ಕಾರಕ್ಕೆ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಅವರು ಮಾತನಾಡುತ್ತಾ ಕಳೆದ ಹತ್ತು ವರ್ಷಗಳಿಂದ ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಈಗ ಅನುಮೊದನೆ ಸಿಕ್ಕಿರುವುದು ಒಂದು ಕಡೆ ಖುಷಿ ಉಂಟಾದರೆ ಇನ್ನೊಂದೆಡೆ 3–4 ವರ್ಷಗಳಕಾಲ ಕೃಷಿ ವಿಶ್ವವಿದ್ಯಾಲಯದಲ್ಲಿ ನಿರಂತರವಾಗಿ ತಜ್ಞ ಹಾಗೂ ಅನುಭವಿ ಪ್ರಾಧ್ಯಾಪಕರಿಂದ ತರಬೇತಿ ಹಾಗೂ ಅಧ್ಯಯನ ಪಡೆದು ಬಂದಿರುವ ಕೃಷಿ ಪದವಿದರರಿಗೆ ಅನ್ಯಾಯವಾಗುತ್ತಿರುವುದನ್ನು ಖಂಡಿಸಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳು ಹೋರಾಟ ಮಾಡುತ್ತಿದ್ದು ಇದಕ್ಕೆ ರೈತಸಂಘ ಯಾವಾಗಲು ಬೆಂಬಲ ಸೂಚಿಸುತ್ತೆವೆ ಎಂದರು.

ಜಿಲ್ಲಾಸಂಚಾಲಕರಾದಮಹಾದೇವಬನಸೋಡೆ,ತಾ.ಕಾರ್ಯಾಧ್ಯಕ್ಷರಾದ ರಾಮಸಿಂಗ ರಜಪೂತ, ತಾ,ಉಪಾಧ್ಯಕ್ಷರಾದಬಸಗೊಂಡ ತೇಲಿ, ಜಂಬಗಿ ಅಧ್ಯಕ್ಷರಾದ ಗೋರಕನಾಥ ಗೇರಡೆ, ಸುಭಾಸ ಹಿಟ್ನಳ್ಳಿ, ಶಟ್ಟುಜಾಧವ,ಪ್ರಕಾಶ ವಂಬಾಸೆ,ಮುದಕಣ್ಣ ಯಂಕಂಚಿ,ರಾಘವೇಂದ್ರ ಗೇರಡೆ,ಮೃತ್ಯುಂಜಯ ನುಚ್ಚಿ, ಬಸವರಾಜ ಉಕ್ಕಲಿ, ಸೇರಿದಂತೆ ಅಂಬಿಕಾ, ಶರಣಬಸ್ಸು ನಾಯ್ಕಲ್,ಈಶ್ವರಿ ಪಾಟೀಲ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಬಸವ ತತ್ವದ ಜೀವಂತ ಪ್ರತಿರೂಪ ಹಡಪದ ಅಪ್ಪಣ್ಣ



**ಭಾಲ್ಕಿ:** ವಿಶ್ವಗುರು ಬಸವಣ್ಣನವರ ಸಮಾನತೆ, ಕಾಯಕ ಮತ್ತು ದಾಸೋಹ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಾಜಕ್ಕೆ ಆದರ್ಶ ಸಂದೇಶ ಸಾರಿದ ಶರಣ ಹಡಪದ ಅಪ್ಪಣ್ಣ–ಲಿಂಗಮ್ಮ ಅವರ ವಚನಗಳು ಇಂದಿಗೂ ಮಾನವ ಬದುಕಿಗೆ ದಾರಿದೀಪವಾಗಿವೆ ಎಂದು ಹಿರೇಮಠ ಸಂಸ್ಥಾನದ ಶ್ರೀ ಗುರುಬಸವ ಪಟ್ಟದ್ದೇವರು ಹೇಳಿದರು. ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಆಯೋಜಿಸಿದ್ದ 501ನೇ ಮಾಸಿಕ ಶಿವಾನುಭವ ಗೋಷ್ಠಿ ಹಾಗೂ ಶರಣ ಹಡಪದ ಅಪ್ಪಣ್ಣ–ಲಿಂಗಮ್ಮರ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು, ಹಡಪದ ಅಪ್ಪಣ್ಣರು ಬಸವಣ್ಣನವರ ಅತ್ಯಂತ ಆತ್ಮೀಯ ಶರಣರಲ್ಲಿ ಒಬ್ಬರಾಗಿದ್ದು, ಅನುಭವ ಮಂಟಪದ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ತಿಳಿಸಿದರು.

ಹಡಪದ ಅಪ್ಪಣ್ಣ–ಲಿಂಗಮ್ಮ ದಂಪತಿ ತಮ್ಮ ವಚನಗಳ ಮೂಲಕ ಶಿವಯೋಗ, ಭಕ್ತಿ, ಕಾಯಕ ಮತ್ತು ನೈತಿಕ ಬದುಕಿನ ಮೌಲ್ಯಗಳನ್ನು ಸಾರಿದ್ದಾರೆ. ಅವರ ವಚನಗಳು ಕೇವಲ ಸಾಹಿತ್ಯವಲ್ಲ, ಮಾನವೀಯ ಮೌಲ್ಯಗಳು ಮತ್ತು ಆಧ್ಯಾತ್ಮಿಕ ಜೀವನಕ್ಕೆ ಮಾರ್ಗದರ್ಶಕ ಗ್ರಂಥಗಳಾಗಿವೆ. ಬಸವಣ್ಣನವರೊಂದಿಗೆ ಅವರಿಗಿದ್ದ ಆತ್ಮೀಯ ಸಂಬಂಧ ಬಸವ ಪರಂಪರೆಯ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ ಎಂದು ಹೇಳಿದರು. ಶಂಭುಲಿಂಗ ಕಾಮಣ್ಣ ಅನುಭಾವ ನುಡಿಗಳನ್ನಾಡಿದರು. ಗುಂಡಪ್ಪ ಸಂಗಮಕರ ಅಧ್ಯಕ್ಷತೆ ವಹಿಸಿದ್ದರು. ರಮೇಶ್ ಕುರುಬಖೇಳಗಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ನೀಲಾಂಬಿಕಾ ಪ್ರಕಾಶ ಹಡಪದ ಬಸವಗುರು ಪೂಜೆ ನೆರವೇರಿಸಿದರು. ಸಂತೋಷ ಹಡಪದ ಸ್ವಾಗತಿಸಿದರು. ದೀಪಕ್ ಠಮಕೆ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಶ್ರೀದೇವಿ ಶಾಂತಯ್ಯ ಸ್ವಾಮಿ ಹಾಗೂ ಡಾ. ಬಸವಜ್ಯೋತಿ ಗುಂಡಪ್ಪ ಸಂಗಮಕರ ಅವರಿಂದ ವಚನ ಸಂಗೀತ, ಸುಮೀತಾ ಬೀರಪ್ಪ ಪೂಜಾರಿ ಹಾಗೂ ವೀರೇಶ ಶಿವರಾಜ ನಿಂಬೂರೆ ಅವರಿಂದ ವಿದ್ಯಾರ್ಥಿಗಳ ಭಾಷಣ, ಅಕ್ಕ ಬಳಗದ ಶರಣೆಯರಿಂದ ವಚನ ಭಜನೆ ಮತ್ತು ಶರಣೆ ಸುಗಂದಾಬಾಯಿ ಗೋವಿಂದರಾವ್ ಹಡಪದ ಅವರಿಂದ ಭಕ್ತಿ ದಾಸೋಹ ನಡೆಯಿತು.



**ಅಫಜಲಪುರ ತಾಲೂಕಿನ ಕರಜಗಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ನಿಲಯದ ವಿದ್ಯಾರ್ಥಿಗಳು ಆಹಾರ ಸೇವಿಸಿ ಅಸ್ವಸ್ಥಗೊಂಡ ಪ್ರಕರಣದ ಹಿನ್ನೆಲೆಯಲ್ಲಿ ನಗರದ ಜಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆಯುತ್ತಿರುವ ವಿದ್ಯಾರ್ಥಿಗಳ ಆರೋಗ್ಯ ವಿಚಾರಿಸಿ ವೈದ್ಯರಿಂದ ಚಿಕಿತ್ಸೆ ಕುರಿತು ಮಾಹಿತಿ ಪಡೆದು, ಅಗತ್ಯವಿರುವ ಎಲ್ಲಾ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ ಜಿಲ್ಲಾಧಿಕಾರಿ ಮೊಹಮ್ಮದ್ ಇಕ್ರಮುಲ್ಲಾ ಶರೀಫ್.**

# ವಿದ್ಯುತ್ ಸಮಸ್ಯೆ: ಪರಿಹಾರಕ್ಕೆ ಅಧಿಕಾರಿಗಳಿಗೆ ಮನವಿ

• **ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ**

ತಾಲೂಕಿನ ವಡ್ಡರಹಟ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಲವು ತಿಂಗಳುಗಳಿಂದ ಮುಂದುವರಿದಿರುವ ವಿದ್ಯುತ್ ಸಮಸ್ಯೆಗಳು ಗ್ರಾಮಸ್ಥರ ಬದುಕನ್ನೇ ಅಸ್ತವ್ಯಸ್ತಗೊಳಿಸಿದ್ದು, ಪದೇ ಪದೇ ವಿದ್ಯುತ್ ಕಡಿತ, ಕಡಿಮೆ ವೋಲ್ಟೇಜ್, ಹಳೆಯದಾಗಿ ಶಿಥಿಲಗೊಂಡಿರುವ ವಿದ್ಯುತ್ ಕಂಬಗಳು ಹಾಗೂ ಸಿಬ್ಬಂದಿ ಕೊರತೆಯಿಂದ ಜನರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಆರೋಪಿಸಿ, ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ವಡ್ಡರಹಟ್ಟಿ ನಾಗರಿಕ ಸಮಿತಿ, ಗ್ರಾಮದ ಹಿರಿಯರು, ಯುವಕರು ಹಾಗೂ ಸಾರ್ವಜನಿಕರು ಗಂಗಾವತಿ ವಿದ್ಯುತ್ ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ವಿದ್ಯುತ್ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ಕಾರ್ಯ ಮತ್ತು ಪಾಲನೆ ಉಪವಿಭಾಗ, ಗಂಗಾವತಿ ಕಚೇರಿಗೆ ಭೇಟಿ ನೀಡಿದ ಗ್ರಾಮಸ್ಥರು, ಅಧಿಕಾರಿಗಳಾದ ವಿ. ಮಂಜುನಾಥ್ ಅವರಿಗೆ ಮನವಿ ಸಲ್ಲಿಸಿ, ಗ್ರಾಮದಲ್ಲಿ ದಿನನಿತ್ಯ ಉಂಟಾಗುತ್ತಿರುವ ವಿದ್ಯುತ್ ಸಮಸ್ಯೆಗಳ ಬಗ್ಗೆ ವಿವರವಾಗಿ ಮನವರಿಕೆ ಮಾಡಿಕೊಟ್ಟರು.

ಗ್ರಾಮಸ್ಥರ ಪ್ರಕಾರ, ವಡ್ಡರಹಟ್ಟಿಯಲ್ಲಿ ಯಾವುದೇ ಮುನ್ಸೂಚನೆ ಇಲ್ಲದೆ ಆಗಾಗ್ಗೆ ವಿದ್ಯುತ್ ಸರಬರಾಜು ಸ್ಥಗಿತಗೊಳ್ಳುತ್ತಿದೆ. ಇದರಿಂದ ರೈತರು ಕೃಷಿ ಚಟುವಟಿಕೆಗಳಿಗೆ



ತೀವ್ರ ತೊಂದರೆ ಅನುಭವಿಸುತ್ತಿದ್ದು, ಬೆಳೆಗಳಿಗೆ ನೀರುಣಿಸಲು ಸಾಧ್ಯವಾಗುತ್ತಿಲ್ಲ. ವಿದ್ಯಾರ್ಥಿಗಳು ರಾತ್ರಿ ವೇಳೆ ಓದಿಗೆ ತೊಂದರೆ ಅನುಭವಿಸುತ್ತಿದ್ದು, ಪರೀಕ್ಷಾ ಸಿದ್ಧತೆಯ ಮೇಲೂ ದುಷ್ಪರಿಣಾಮ ಉಂಟಾಗಿದೆ. ವ್ಯಾಪಾರಸ್ಥರು ವಿದ್ಯುತ್ ಕೊರತೆಯಿಂದ ವ್ಯವಹಾರದಲ್ಲಿ ನಷ್ಟ ಅನುಭವಿಸುತ್ತಿದ್ದರೆ, ಮನೆಗಳಲ್ಲಿ ವಾಸಿಸುವ ಸಾರ್ವಜನಿಕರು ಸಹ ದಿನನಿತ್ಯ ಸಂಕಷ್ಟ ಎದುರಿಸುತ್ತಿದ್ದಾರೆ ಎಂದು ದೂರಿದರು.

ಗ್ರಾಮದ ವಿವಿಧ ಬಡಾವಣೆಗಳಲ್ಲಿ ಕಡಿಮೆ ವೋಲ್ಟೇಜ್ ಸಮಸ್ಯೆ ಹೆಚ್ಚಾಗಿದ್ದು, ವಿದ್ಯುತ್ ಉಪಕರಣಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಇದ–ರಿಂದ ಅನೇಕ ಮನೆಗಳಲ್ಲಿ ಫ್ಯಾನ್, ಮೋಟಾರ್, ಫ್ರಿಜ್ ಸೇರಿದಂತೆ ಹಲವು ವಿದ್ಯುತ್ ಸಾಧನಗಳು ಹಾನಿಯಾಗುವ ಆತಂಕವೂ ಎದುರಾಗಿದೆ ಎಂದು ಗ್ರಾಮಸ್ಥರು ವಿವರಿಸಿದರು.

ಇದರ ಜೊತೆಗೆ, ಹಲವು ವರ್ಷಗಳ ಹಿಂದೆ ಅಳವಡಿಸಲಾದ ವಿದ್ಯುತ್ ಕಂಬಗಳು ಈಗ ಶಿಥಿಲಗೊಂಡಿದ್ದು, ಕೆಲವು ಕಡೆಗಳಲ್ಲಿ ಅಪಾಯಕಾರಿಯಾಗಿ ವಾಲಿರುವ ಸ್ಥಿತಿಯಲ್ಲಿವೆ. ಮಳೆಗಾಲದಲ್ಲಿ ಇವು ಕುಸಿದು ಸಾರ್ವಜನಿಕರ ಜೀವಕ್ಕೆ ಅಪಾಯ ಉಂಟಾಗುವ ಸಾಧ್ಯತೆ ಇರುವುದರಿಂದ ತಕ್ಷಣವೇ ಹಳೆಯ ಕಂಬಗಳನ್ನು ತೆರವುಗೊಳಿಸಿ ಹೊಸ ವಿದ್ಯುತ್ ಕಂಬಗಳನ್ನು ಅಳವಡಿಸಬೇಕು ಎಂದು ಒತ್ತಾಯಿಸಿದರು.

ವಡ್ಡರಹಟ್ಟಿಯಂತಹ ದೊಡ್ಡ ಗ್ರಾಮಕ್ಕೆ ಒಬ್ಬ ಲೈನ್‌ಮ್ಯಾನ್ ಮಾತ್ರ ಕಾರ್ಯನಿರ್ವಹಿಸುತ್ತಿರುವುದು ಸಾಕಾಗುವುದಿಲ್ಲ. ದೋಷ ಉಂಟಾದಾಗ ದುರಸ್ತಿ ಕಾರ್ಯ ವಿಳಂಬವಾಗುತ್ತಿರುವುದರಿಂದ ಸಾರ್ವಜನಿಕರ ಸಮಸ್ಯೆಗಳು ಇನ್ನಷ್ಟು ಹೆಚ್ಚುತ್ತಿವೆ. ಆದ್ದರಿಂದ ಗ್ರಾಮಕ್ಕೆ ಕೂಡಲೇ ಮತ್ತೊಬ್ಬ ಲೈನ್‌ಮ್ಯಾನ್‌ರನ್ನು ನೇಮಿಸಿ, ವಿದ್ಯುತ್ ನಿರ್ವಹಣಾ ಕಾರ್ಯಗಳನ್ನು ಸುಗಮಗೊಳಿಸುವಂತೆ ಗ್ರಾಮಸ್ಥರು ಮನವಿ ಮಾಡಿದರು. ಮನವಿ ಸ್ವೀಕರಿಸಿದ ಅಧಿಕಾರಿಗಳು ಗ್ರಾಮದ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದಾಗಿ ಹಾಗೂ ಮೇಲಧಿಕಾರಿಗಳ ಗಮನಕ್ಕೆ ತಂದು ಶಾಶ್ವತ ಪರಿಹಾರ ಕಲ್ಪಿಸಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಪಕ್ಷದ ಮಾಜಿ ಜಿಲ್ಲಾ ಅಧ್ಯಕ್ಷ ಸಿಂಗಾಳ ವಿರುಪಾಕ್ಷಪ್ಪ, ಗ್ರಾಮದ ಮುಖಂಡರು ಹಾಗೂ ನಾಗರಿಕ ಸಮಿತಿ ಸಂಚಾಲಕರಾದ ಯರಿಸ್ವಾಮಿಗೌಡ ತೋಟದ್, ಹರನಾಯಕ, ಮಲ್ಲೇಶಪ್ಪ ನಾಯಕ್, ಶಿವರಾಜ್ (ವಕೀಲರು), ಚಿನ್ನಪ್ಪ ನಾಯಕ್, ವೀರೇಶ್ ನಾಯಕ್ ಗಡ್ಡಿ, ವಿಶ್ವನಾಥ್, ಮಹೇಶ್ ಹೊಸಮನಿ, ಸೋಮಯ್ಯ ಸ್ವಾಮಿ, ಬಸವಂತ ಪಾಟೀಲ್, ಬಸವರಾಜ್ ಸಂಗಟಿ, ಹನುಮಂತಪ್ಪ, ಯಲ್ಲಮ್ಮಗುಡಿ ಸೇರಿದಂತೆ ವಡ್ಡರಹಟ್ಟಿ ನಾಗರಿಕ ಸಮಿತಿಯ ಪದಾಧಿಕಾರಿಗಳು, ಗ್ರಾಮದ ಹಿರಿಯರು, ಯುವಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ವಿದ್ಯುತ್ ಸಮಸ್ಯೆಗೆ ಶೀಘ್ರದಲ್ಲಿ ಶಾಶ್ವತ ಪರಿಹಾರ ದೊರೆಯಬೇಕು ಎಂಬುದು ವಡ್ಡರಹಟ್ಟಿ ಗ್ರಾಮಸ್ಥರ ಪ್ರಮುಖ ಆಗ್ರಹವಾಗಿದ್ದು, ಸಂಬಂಧಿಸಿದ ಅಧಿಕಾರಿಗಳು ತುರ್ತು ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ಅವ್ರೋರ್‌ನ ಮೊದಲ ಎಲೆಕ್ಟ್ರಿಕ್ ಮೋಟಾರ್ ಸೈಕಲ್ ಇಎಕ್ಸ್ ಬಿಡುಗಡೆ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಸಮರ್ಥ್ ಇ–ಮೊಬಿಲಿಟಿ ಸಂಸ್ಥೆಯ ಭಾಗವಾಗಿರುವ ಭಾರತದ ತಂತ್ರಜ್ಞಾನ ಆಧಾರಿತ ಎಲೆಕ್ಟ್ರಿಕ್ ಮೋಟಾರ್‌ಸೈಕಲ್ ತಯಾರಕ ಸಂಸ್ಥೆ ಅವ್ರೋರ್ ಎಲೆಕ್ಟ್ರಿಕ್, ತನ್ನ ಮೊದಲ ಎಲೆಕ್ಟ್ರಿಕ್ ಮೋಟಾರ್ ಸೈಕಲ್ ಅವ್ರೋರ್ ಎಲೆಕ್ಟ್ರಿಕ್ ಇಎಕ್ಸ್ ಅನ್ನು ಬಿಡುಗಡೆ ಮಾಡಿದೆ. ಇಎಕ್ಸ್ 2ಎಸ್, ಇಎಕ್ಸ್ 2 ಮತ್ತು ಇಎಕ್ಸ್ 1 ಎಂಬ ಮೂರು ರೂಪಾಂತರಗಳಲ್ಲಿ ಲಭ್ಯವಿರುವ ಈ ಬೈಕ್‌ನ ಆರಂಭಿಕ ಬೆಲೆ ರೂ. 1,24,999 (ಎಕ್ಸ್‌ಶೋರೂಮ್). ಸ್ವದೇಶಿ ತಂತ್ರಜ್ಞಾನ, ಜಾಣ್ಮೆಯ ಎಂಜಿನಿಯರಿಂಗ್ ಮತ್ತು ದೈನಂದಿನ ಬಳಕೆಗೆ ಸೂಕ್ತವಾದ ವಿನ್ಯಾಸದ ಮೂಲಕ ಎಲೆಕ್ಟ್ರಿಕ್ ಮೋಟಾರ್‌ಸೈಕಲ್ ಸವಾರಿಯನ್ನು ಮತ್ತಷ್ಟು ಸೊಗಸಾಗಿಸಲು ಈ ಇಎಕ್ಸ್ ಬೈಕ್ ಅನ್ನು ಆರಂಭದಿಂದಲೇ ವಿಶೇಷವಾಗಿ ರೂಪಿಸಲಾಗಿದೆ.

ಬುದ್ಧಿವಂತಿಕೆ ಅಥವಾ ತಂತ್ರಜ್ಞಾನ ಎಂಬುದು ದ್ವಿಚಕ್ರ ವಾಹನಕ್ಕೆ ಸೇರಿಸುವ ಬರಿ ಹೆಚ್ಚುವರಿ ವೈಶಿಷ್ಟ್ಯವಾಗಬಾರದು, ಬದಲಿಗೆ ಅದು ವಾಹನದ ನಿರ್ಮಾಣದ ಮೂಲ



ಬುನಾದಿಯಾಗಬೇಕು ಎಂಬ ನಂಬಿಕೆಯೊಂದಿಗೆ ಅವ್ರೋರ್ ಎಲೆಕ್ಟ್ರಿಕ್ ಕಾರ್ಯನಿರ್ವಹಿಸುತ್ತದೆ. ಚಲನೆಗೂ ಮೀರಿದ ಬುದ್ಧಿವಂತಿಕೆ ಎಂಬ ತನ್ನ ಟ್ಯಾಗ್ ಲೈನ್ ನಲ್ಲಿ ಬ್ರ್ಯಾಂಡ್ ತನ್ನ ಈ ತತ್ವವನ್ನು ಸಾರಿದೆ.

ಅತ್ಯುನ್ನತ ವೇರಿಯೆಂಟ್ ಗಳಾದ ಇಎಕ್ಸ್ 2ಎಸ್ ಮತ್ತು ಇಎಕ್ಸ್ 2 ಮಾದರಿಗಳು ಕ್ರಮವಾಗಿ 260 ಕಿ.ಮೀ ಹಾಗೂ 255 ಕಿ.ಮೀ ಐಡಿಸಿ–ಪ್ರಮಾಣೀಕೃತ ರೇಂಜ್ ನೀಡುತ್ತವೆ.

**ಸಂಪೂರ್ಣ ಸ್ವದೇಶಿ ತಂತ್ರಜ್ಞಾನದ ಆಧಾರ**

ಅವ್ರೋರ್ ಇಎಕ್ಸ್ ಮೋಟಾರ್ ಸೈಕಲ್, ಕಂಪನಿಯ ಸ್ವಂತ ಅವ್ರೋರ್ ಸೋರ್ಸ್ ತಂತ್ರಜ್ಞಾನ ಹಾಗೂ ಪ್ರತ್ಯೇಕವಾಗಿ ಎಲೆಕ್ಟ್ರಿಕ್ ಬೈಕ್ ಗಳಿಗಾಗಿಯೇ ವಿನ್ಯಾಸಗೊಳಿಸಲಾದ ಎವಿಆರ್ ವಾಹನ ಪ್ಲಾಟ್ ಫಾರ್ಮ್ ಆಧಾರದಲ್ಲಿ ನಿರ್ಮಾಣಗೊಂಡಿದೆ.

ಈ ಕುರಿತು ಅವ್ರೋರ್ ಎಲೆಕ್ಟ್ರಿಕ್ ಸಂಸ್ಥಾಪಕರಾದ ಪ್ರಿಯಾಂಕ್ ರಖೋಲಿಯಾ ಅವರು, "ನಾವು ಇಎಕ್ಸ್ ಬೈಕ್ ಅನ್ನು ಮಾರುಕಟ್ಟೆಗೆ ತರುವ ಮುನ್ನ ಮೂರು ವರ್ಷಗಳ ಕಾಲ ಸಂಶೋಧನೆ, ಅಭಿವೃದ್ಧಿ ಮತ್ತು ಕಠಿಣ ಪರೀಕ್ಷೆಗಳಿಗೆ ಒಳಪಡಿಸಿದ್ದೇವೆ. ಭಾರತದಲ್ಲೇ ಅಭಿವೃದ್ಧಿಪಡಿಸಿದ ಎಲೆಕ್ಟ್ರಿಕ್ ತಂತ್ರಜ್ಞಾನದ ಗಡಿಗಳನ್ನು ಹಿಗ್ಗಿಸುತ್ತಾ, ಜಾಗತಿಕ ಮಟ್ಟದ ಸುರಕ್ಷತೆ ಮತ್ತು ಕಾರ್ಯಕ್ಷಮತೆಯನ್ನು ಒದಗಿಸುವುದು ನಮ್ಮ ಗುರಿ. ಭಾರತದ ಪ್ರತಿಯೊಬ್ಬರಿಗೂ ವಿಶ್ವದರ್ಜೆಯ ಎಲೆಕ್ಟ್ರಿಕ್ ವಾಹನಗಳನ್ನು ತಲುಪಿಸುವ ನಮ್ಮ ಪ್ರಯಾಣಕ್ಕೆ ಇಎಕ್ಸ್ ಬೈಕ್ ಬಿಡುಗಡೆ ಒಂದು ಹೊಸ ಮುನ್ನುಡಿ" ಎಂದು ಹೇಳಿದರು.

ಹೆಚ್ಚಿನ ಮಾಹಿತಿಗಾಗಿ ಅವ್ರೋರ್ ಎಲೆಕ್ಟ್ರಿಕ್ ನ ಅಧಿಕೃತ ವೆಬ್ ಸೈಟ್ ಹಾಗೂ ಇನ್‌ಸ್ಟಾ ಗ್ರಾಮ್, ಫೇಸ್‌ಬುಕ್ ಮತ್ತು ಯೂಟ್ಯೂಬ್ ಪುಟಗಳಿಗೆ ಭೇಟಿ ನೀಡಬಹುದು.

# ಬದುಕು ಬೆಳಗಲು ಸದ್ಗುರುವಿನ ಸಾಮಿಪ್ಯ ಅಗತ್ಯ: ಹಿರಿಯ ಸಾಹಿತಿ

• **ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ**

ಜ್ಞಾನದ ಮೂಲವಾಗಿರುವ ವೇದಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿದ ಮಹರ್ಷಿ ವೇದವ್ಯಾಸರ ಜನ್ಮದಿನವನ್ನು ಗುರು ಪೂರ್ಣಿಮೆ ಆಚರಿಸಲಾಗುತ್ತದೆ ಎಂದು ಹಿರಿಯ ಸಾಹಿತಿ ಲಿಂಗನಗೌಡ ಮಾಲಿ ಪಾಟೀಲ್ ಹೇಳಿದರು.

ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಬುಧವಾರ ಸಂಜೆ ಹಮ್ಮಿಕೊಂಡ ಮಾಸಿಕ ಹುಣ್ಣಿಮೆಯ ಶಿವಾನುಭವ ಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು ಜಗವ ಬೆಳಗಲು ಸೂರ್ಯ ಚಂದ್ರರು ಹೇಗೆ ಮುಖ್ಯವೋ ಹಾಗೆಯೇ ಪ್ರತಿಯೊಬ್ಬರ ಬದುಕು ಬೆಳಗಲು ಸದ್ಗುರುವಿನ ಸಾಮಿಪ್ಯ ಅಷ್ಟೇ ಮುಖ್ಯ. ಶ್ರೀಮಠದಲ್ಲಿ ಆರಂಭವಾದ ಶಿವಾನುಭವ ಗೋಷ್ಠಿ ಯಶಸ್ವಿಯಾಗಿ ಹನ್ನೊಂದು ವರ್ಷಗಳನ್ನು



ಪೂರೈಸಿ ಹನ್ನೆರಡನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ್ದು ಅತೀವ ಸಂತಸ ತಿಂದಿದೆ ಎಂದರು.

ಉಪನ್ಯಾಸ ನೀಡಿದ ಮಲ್ಲಯ್ಯ ಸ್ವಾಮಿ ವಡಿಗೇರಿ, ದುರಹಂಕಾರ, ದುರ್ಬುದ್ಧಿ ದುರ್ಬಲ ಮನಸ್ಸಿನ ವ್ಯಕ್ತಿಗಳಿಗೆ ಗುರು ಯಾವತ್ತೂ ದೊರೆಯುವುದಿಲ್ಲ, ಕಾಯ, ವಾಚ, ಮನಸಾರೆ ಭಜಿಸಿದಾಗ ಗುರು ಕೃಪೆ ಸುಲಭ ಸಾಧ್ಯ ಎಂದರು. ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಷ ಬ್ರ ಶ್ರೀ ಚನ್ನಬಸವ ಶಿವಾಚಾರ್ಯರು, ಕಳೆದ ಹನ್ನೊಂದು ವರ್ಷಗಳಿಂದಲೂ ಶ್ರೀಮಠದಲ್ಲಿ ಜರುಗುವ ಗುರು ಪೂರ್ಣಿಮೆಯಂದು ಲಿಂಗನಗೌಡ ಮಾಲಿ ಪಾಟೀಲರು ತಪ್ಪದೆ ಆಗಮಿಸಿ ಗುರು ಕೃಪೆಗೆ ಪಾತ್ರರಾಗುತ್ತಾರೆ. ಅವರ ಗುರು ಭಕ್ತಿ ನಮಗೆಲ್ಲರಿಗೂ ಪ್ರೇರಣೆ ಎಂದರು.

ಸಾಸನೂರಿನ ಚಿಂಚರಕಿ ಮಠದ ಶ್ರೀಕಾಂತಯ್ಯ ಶಾಸ್ತ್ರಿಗಳು, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಸಹಾಯಕಿ ಮಹಾದೇವಿ ಸರ್ಜಾಪುರ ಮಾತನಾಡಿದರು, ಪುರಸಭೆ ನೂತನ ಅಧ್ಯಕ್ಷೆ ಗಿರೀಜಾ ರಮೇಶ ಕೊಡಗಾನೂರು ದಂಪತಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಶರಣ ಕುಮಾರ ಯಾಳಗಿ ಹಾಗೂ ಯಮನೇಶ ಯಾಳಗಿ ಇವರಿಂದ ಸಂಗೀತ ಕಾರ್ಯಕ್ರಮ ಮೂಡಿ ಬಂತು,

ಪ್ರಮುಖರಾದ ಡಾ ಯಂಕನಗೌಡ ಪಾಟೀಲ್, ಶಿವಪ್ಪ ಕಂಬಾರ, ಪುರಸಭೆ ಸದಸ್ಯ ಚಳಿಗೆಪ್ಪ ಮ್ಯಾಗೇರಿ, ನಿಂಗನಗೌಡ ದೇಸಾಯಿ, ದೇವಿ ಆರಾಧಕ ಬಸವರಾಜ, ಯಲ್ಲಾಲಿಂಗ ಪುಜಾರಿ, ಅಭಿಷೇಕ ಪಾಟೀಲ್ ಸೇರಿದಂತೆ ಅನೇಕ ಉಪಸ್ಥಿತರಿದ್ದರು.

# ಚಿತ್ರಕಲಾ ಪ್ರವೀಣ ಡಾ. ರೆಹಮಾನ್ ಪಟೇಲ್..!



**ಕಲೆ–ಮೌಲ್ಯ–ಬೆಲೆ**
• **ರಮೇಶ ರೆಡ್ಡಿ**
**ಸಂಪಾದಕರು**

ಡಾ. ರೆಹಮಾನ್ ಪಟೇಲ್ ಅವರು 1975ರ ಜೂನ್ 1ರಂದು ಕರ್ನಾಟಕದ ಕಲಬುರಗಿ ಜಿಲ್ಲೆಯ ಶಹಾಬಾದ್ ಸಮೀಪದ ಗೋಳಾ (ಕೆ) ಗ್ರಾಮದಲ್ಲಿ ಜನಿಸಿದರು.

ಚಿತ್ರಕಲೆ ಕ್ಷೇತ್ರದಲ್ಲಿ ಅಪಾರ ಆಸಕ್ತಿ ಹೊಂದಿದ್ದ ಇವರು ಕಲಬುರಗಿ ವಿಶ್ವವಿದ್ಯಾಲಯದಿಂದ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿ (Master of Fine Arts) ಹಾಗೂ ಬಿದ್ರಿ ಕಲೆಯ ಕುರಿತು ಪಿಎಚ್.ಡಿ. ಪದವಿ ಪಡೆದಿದ್ದಾರೆ.

ಭಾರತೀಯ ಸಾಂಪ್ರದಾಯಿಕ ಕಲೆಯ ಸಂರಕ್ಷಣೆ ಮತ್ತು ಸಂಶೋಧನೆಯಲ್ಲಿ ಅವರು ಮಹತ್ವದ ಕೊಡುಗೆ ನೀಡಿದ್ದಾರೆ. 2002ರಲ್ಲಿ ಸುರಪುರ ಚಿತ್ರಕಲೆ ಕುರಿತು ನಡೆಸಿದ ಸಂಶೋಧನೆಗಾಗಿ ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ಜೂನಿಯರ್ ಫೆಲೋಶಿಪ್ ಪಡೆದಿದ್ದಾರೆ.

2014ರಲ್ಲಿ ಬಿದ್ರಿಕಲೆಯ ಕುರಿತ ಸಂಶೋಧನೆಗಾಗಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಫೆಲೋಶಿಪ್‌ಗೂ ಭಾಜನರಾಗಿದ್ದಾರೆ. ಡಾ. ರೆಹಮಾನ್ ಪಟೇಲ್ ಅವರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಅನೇಕ ಪ್ರಶಸ್ತಿ–ಪುರಸ್ಕಾರಗಳನ್ನು



ಪಡೆದಿದ್ದಾರೆ. ನಾಗಪುರದ ದಕ್ಷಿಣ ಮಧ್ಯ ವಲಯ ಸಾಂಸ್ಕೃತಿಕ ಕೇಂದ್ರ ಆಯೋಜಿಸಿದ ಅಖಿಲ ಭಾರತ ಕಲಾ ಸ್ಪರ್ಧೆ ಮತ್ತು ಪ್ರದರ್ಶನ ಪ್ರಶಸ್ತಿ, ಮುಂಬೈನ ಪ್ರಫುಲ್ಲ ದಹಾನುಕರ್ ಆರ್ಟ್ ಫೌಂಡೇಶನ್‌ನ ಕರ್ನಾಟಕ ರಾಜ್ಯ ಫೆಲೋಶಿಪ್ ಪ್ರಶಸ್ತಿ, ಶ್ರೀಲಂಕಾದ ಕೊಲಂಬೊದಲ್ಲಿ ಶೋರಾಂಗ್ ಆರ್ಟ್ ಗ್ರೂಪ್ ನೀಡಿದ ಅಂತರರಾಷ್ಟ್ರೀಯ ಶೋರಾಂಗ್ ಪ್ರಶಸ್ತಿ, ಹೈದರಾಬಾದ್ ಆರ್ಟ್ ಸೊಸೈಟಿಯ ಅಖಿಲ ಭಾರತ ವಾರ್ಷಿಕ ಪ್ರಶಸ್ತಿ ಹಾಗೂ 2025ನೇ ಸಾಲಿನ ಕರ್ನಾಟಕ ಲಲಿತಕಲಾ ಅಕಾಡೆಮಿ ರಾಜ್ಯ ವಾರ್ಷಿಕ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳು ಇವರಿಗೆ ಲಭಿಸಿವೆ.

ಅವರ ಕಲಾಕೃತಿಗಳು ನವದೆಹಲಿಯ ರಾಷ್ಟ್ರೀಯ





ಲಲಿತಕಲಾ ಅಕಾಡೆಮಿ, ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ನಾಗಪುರದ ದಕ್ಷಿಣ ಮಧ್ಯ ವಲಯ ಸಾಂಸ್ಕೃತಿಕ ಕೇಂದ್ರ, ಕರ್ನಾಟಕ ಉರ್ದು ಅಕಾಡೆಮಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರಿನ ಕಲಾ ಸಂಗ್ರಹಗಳು ಹಾಗೂ ದಕ್ಷಿಣ ಕೊರಿಯಾದ ಹೇಗ್ಯೂಂಗಾಂಗ್ ಥೀಮ್ ಮ್ಯೂಸಿಯಂ ಸೇರಿದಂತೆ ಹಲವು ಪ್ರತಿಷ್ಠಿತ ಸಂಸ್ಥೆಗಳಲ್ಲಿ ಶಾಶ್ವತ ಸಂಗ್ರಹವಾಗಿ ಸ್ಥಾನ ಪಡೆದಿವೆ.



ಭೂತಾನ್, ಶ್ರೀಲಂಕಾ, ಬಾಂಗ್ಲಾದೇಶ ಹಾಗೂ ನೇಪಾಳದಲ್ಲಿ ನಡೆದ ಅಂತರರಾಷ್ಟ್ರೀಯ ಕಲಾ ಪ್ರದರ್ಶನಗಳು ಮತ್ತು ಕಲಾ ಶಿಬಿರಗಳಲ್ಲಿ ಅವರು ನೇರವಾಗಿ ಭಾಗವಹಿಸಿದ್ದಾರೆ. ಅಲ್ಲದೆ ಜರ್ಮನಿ, ದಕ್ಷಿಣ ಕೊರಿಯಾ, ಟರ್ಕಿ ಹಾಗೂ ಈಜಿಪ್ಟ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಕಲಾ ಮೇಳಗಳಲ್ಲಿಯೂ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿ ಭಾರತಕ್ಕೆ ಕೀರ್ತಿ ತಂದಿದ್ದಾರೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000, Telephone Number:08483200222

PRGI NO.
(RNINO:KARKAN/2011/48371)